ದುಡಿವ ಜನರ ಪ್ರಾಣಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com

ಸಂಪುಟ 6 ಸಂಚಿಕೆ 01
ಜನವರಿ 01, 2012

ಪುಟ 16 ರೂ.5/-





ಕರಾವಳಿ :
ಬೆಂಬಲ ಕುಸಿಯುವ ಭೀತಿ ಮತ್ತೆ ಕೊಳ್ಳಿ ಹಿಡಿದಿರುವ ಸಂಘ ಪರಿವಾರ







ನೀಚ ಅಜಲು ಪದ್ಧತಿಗೆ ಮರುಜೀವ

ಜನಪರ ಹೋರಾಟಗಳ ನೆಲೆ ಕೋಲಾರದಲ್ಲಿ ತಲೆ ಎತ್ತಿ ನಿಂತಿರುವ ಅವಕಾಶವಾದಿ ರಾಜಕಾರಣದ ಸವಾಲು

ಬೇಕು ಪರಿಣಾಮಕಾರಿ ಲೋಕಪಾಲ ಜೊತೆಗೆ ಆರ್ಥಿಕ ನೀತಿಯ ದಿಕ್ಕಿನ ಬದಲಾವಣೆ

CPI(M) 20 ರಾಜ್ಯ ಸಮ್ಮೇಳನ
6-11 ಜನವರಿ 2012

ಸಿಪಿಐ(ಎಂ) ರಾಜ್ಯ ಸಮ್ಮೇಳನ ಸಾಂಸ್ಕೃತಿಕ ಜಾಥಾ





'ಕೇಂದ್ರ–ರಾಜ್ಯ ಸರ್ಕಾರಗಳ ನೀತಿಗಳ ವಿರುದ್ಧ ಸಿಡಿದೇಳಿ'

ನವ್ಹೆಂಬರ 23 ಮತ್ತು 24, 2011 ರಂದು ಎರಡು ದಿನ ಸಿ.ಪಿ.ಐ. (ಎಂ) ಪಕ್ಷದ ಬೆಳಗಾಂವ ಜಿಲ್ಲಾ ಸಂಘಟನಾ ಸಮಿತಿಯ 5 ನೇ ಸಮ್ಮೇಳನವು ರಾಮದುರ್ಗದ ಶಂಕರಮಠದಲ್ಲಿ ಯಶಸ್ವಿಯಾಗಿ ನಡೆಯಿತು.

ನವ್ಹೆಂಬರ 23 ರಂದು ಮಧ್ಯಾಹ್ನ 1 ಗಂಟೆಗೆ ಬಹಿರಂಗ ಸಭೆಯ ಅಂಗವಾಗಿ ಪಕ್ಷದ ಕಚೇರಿಯಿಂದ ಮೆರವಣಿಗೆ ಹೊರಟು ಮಧ್ಯಾಹ್ನ 3-00 ಗಂಟೆಗೆ ಶಂಕರಮಠದಲ್ಲಿ ಸಮಾವೇಶಗೊಂಡು ಬಹಿರಂಗ ಸಭೆ ನಡೆಯಿತು.

ಚುನಾವಣೆಗಳಲ್ಲಿ ಸುಳ್ಳು ಭರವಸೆಗಳನ್ನು ಕೊಟ್ಟು ದೇಶದ ಸಂಪತ್ತನ್ನು ಕೊಳ್ಳೆ ಹೊಡೆಯುತ್ತಿರುವ ಕೇಂದ್ರ ಸರಕಾರದ ವಿರುದ್ಧ ಹೋರಾಡಲು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ॥ ನಿತ್ಯಾನಂದ ಸ್ವಾಮಿಯವರು ಸಮ್ಮೇಳನದ ಅಂಗವಾಗಿ ನಡೆದ ಬಹಿರಂಗ ಸಭೆಯನ್ನು ಉದ್ದೇಶಿಸಿ ಕರೆ ನೀಡಿದರು.

ಕೇಂದ್ರ–ರಾಜ್ಯ ಸರಕಾರಗಳು ರೈತರ – ಕಾರ್ಮಿಕರ ಹಿತವನ್ನು ಕಾಪಾಡುವದನ್ನು ಬಿಟ್ಟು ಬಂಡವಾಳ ಶಾಹಿಗಳಿಗೆ ಸಹಾಯ ಮಾಡುತ್ತಾ ಬಡವರಿಗೆ ಸಿಗುವ ರಿಯಾಯತಿಗಳನ್ನು ಕಡಿತ ಮಾಡಿ ಬಡವರನ್ನು ಕಂಗಾಲು ಮಾಡುತ್ತಿವೆ. ಎಂದು ಅಧ್ಯಕ್ಷತೆ ವಹಿಸಿದ್ದ ಪಕ್ಷದ ಮುಖಂಡರಾದ ವ್ಹಿ.ಪಿ. ಕುಲಕರ್ಣಿ ರವರು ಮಾತನಾಡಿದರು.

ಸಂಜೆ 5 ಘಂಟೆಗೆ ಸಮ್ಮೇಳನದ ಉದ್ಘಾಟನೆಯ ಅಂಗವಾಗಿ ಹಿರಿಯರಾದ ಕಾಂ॥ ಎಸ್.ಎಚ್. ಕಪನ್ನವರ ಧ್ವಜಾರೋಹಣ ಮಾಡಿ ಈ ದೇಶದ ದುಡಿಯುವ ಜನರ ಸಂಕೇತವಾದ ಕೆಂಪು ಧ್ವಜ ಎಲ್ಲರೂ ಒಂದೇ ಎಂದು ಸಾರುವ ಸಂಕೇತ ಎಂದು ಮಾತನಾಡಿದರು.

ಸಾಮಾನ್ಯ ಜನರ ಸರಕಾರ ಎಂದು ಬೊಗಳುತ್ತಿರುವ ಕೇಂದ್ರ ಸರಕಾರ ತನ್ನ ಬೆಲೆ ಏರಿಕೆ ನೀತಿಯಿಂದ ದುಡಿಯುವ ಜನರ ಹಾಗೂ ರೈತರ ಮೇಲೆ ಹೆಚ್ಚಿನ ಹೊರೆ ಹಾಕುತ್ತಿದೆ. ಬಡತನ ರೇಖೆಗಿಂತ ಕೆಳಗಿರುವ ಜನರಿಗೆ ರೂ. 2 ದರದಲ್ಲಿ 35 ಕೆ.ಜಿ. ಆಹಾರ ಕೊಡುವದಾಗಿ ಹೇಳಿದ ಸರಕಾರ ನಗರ ಪ್ರಾದೇಶದಲ್ಲಿ ರೂ. 35 ಹಾಗೂ ಗ್ರಾಮೀಣ ಪ್ರದೇಶದಲ್ಲಿ ರೂ. 26 ಖರ್ಚು ಮಾಡುವವರು ಬಿ.ಪಿ.ಎಲ್. ದಲ್ಲಿ ಬರುವದಿಲ್ಲ ಎಂದು ಘೋಷಸಿ ಎಲ್ಲಾ ಬಡವರಿಗೆ ರೇಶನ್ ವಂಚಿತರನ್ನಾಗಿ ಮಾಡುವ ದೊಡ್ಡ ಕುತಂತ್ರ ನಡೆಸಿದೆ. ಅದೇ ರೀತಿ ರೈತರ ಮೇಲೆ ಪ್ರಮಾಣ ವಚನ ಮಾಡಿದ ಸರಕಾರ ರೈತರ ಭೂಮಿಯನ್ನು ಕಸಿದುಕೊಂಡು. ವಿದೇಶಿ ಕಂಪನಿಗಳಿಗೆ ನೀಡುವ ರೈತ ವಿರೋಧಿ ಕೆಲಸ ನಡೆಸಿದೆ. ಇಂತಹ ರೈತ – ಕಾರ್ಮಿಕ ವಿರೋಧಿ ಕೇಂದ್ರ ಹಾಗೂ ರಾಜ್ಯ ಸರಕಾರಗಳ ವಿರುದ್ಧ ಜನತೆ ಸಿಡದೇಳಬೇಕೆಂದು ಬೆಳಗಾಂವ ಜಿಲ್ಲಾ ಸಂಘಟನಾ ಸಮಿತಿಯ 5 ನೇ ಸಮ್ಮೇಳನ ಉದ್ಘಾಟಿಸಿ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ॥ ಎಸ್. ಪ್ರಸನ್ನಕುಮಾರ ಮಾತನಾಡಿದರು. ■



ಸಿಪಿಐ(ಎಂ) ಭಟ್ಕಳ ತಾಲೂಕ ಸಮ್ಮೇಳನ

ಬೆಲೆ ಎರಿಕೆ ವಿರುದ್ಧ, ಭಟ್ಕಳ ತಾಲೂಕು ಸಮ… ಅಭಿವೃದ್ಧಿ ವಿಶೇಷ ಪ್ಯಾಕೇಜ್ ಘೋಷಣೆಗೆ ಆಗ್ರ…

ಭಟ್ಕಳ, ಸಿಪಿಐ (ಎಂ) ಭಟ್ಕಳ ತಾಲೂಕ ಪ್ರಥಮ ಸಮ್ಮೇಳನದಲ್ಲಿ ಪ್ರಮುಖ ನಿರ್ಣಯ ಕೈಗೊಳ್ಳಲಾಗಿದ್ದು, ಈ ಕುರಿತು ಘನ ಸರ್ಕಾರ ತುರ್ತು ಗಮನಹರಿಸಿ ಪರಿಹರಿಸಬೇಕೆಂದು ಭಟ್ಕಳ ತಾಲೂಕ ಸಮಿತಿ ಸರ್ಕಾರಕ್ಕೆ ಪತ್ರ ಬರೆದಿದ್ದು, ಸಮಸ್ಯೆ ಪರಿಹಾರಕ್ಕೆ ಮುಂದಾಗದಿದ್ದಲ್ಲಿ ಮುಂದಿನ ದಿನಗಳಲ್ಲಿ ತೀವ್ರ ಚಳುವಳಿ ನಡೆಸಲು ನಿರ್ಧರಿಸಲಾಗಿದೆ.

ಭಟ್ಕಳ ತಾಲೂಕಿನ ಸಮಗ್ರ ಅಭಿವೃದ್ಧಿಗಾಗಿ ವಿಶೇಷ ಪ್ಯಾಕೇಜ ಘೋಸಿಸಲು ಆಗ್ರಹ

1 ಪುರಸಭೆ ಹಾಗೂ 16 ಗ್ರಾಂ. ಪಂ. ಗಳನ್ನು ಹೊಂದಿರುವ ಭಟ್ಕಳ ತಾಲೂಕಿನ ಹಲವಾರು ಗ್ರಾಮಂತರ ಪ್ರದೇಶಗಳು ಇನ್ನೂ ತೀವ್ರವಾಗಿ ಹಿಂದಳಿದಿದ್ದು, ವಿಶೇಷವಾಗಿ ಹಾಡುವಳ್ಳಿ ಗ್ರಾಂ. ಪಂ. ವ್ಯಾಪ್ತಿಯ ಹೆಂಜಲೆ, ಬಡೇಬಾಗಿಲು ಗುಡ್ಡ ಗಾಡು ಪ್ರದೇಶದಲ್ಲಿ ಇನ್ನೂ ತನಕ ಯಾವುದೇ ನಾಗರಿಕ ಸೌಲಭ್ಯಗಳು ತಲುಪಲಿಲ್ಲಾ, ಗ್ರಾಮೀಣ ಪರಿಸ್ಥಿತಿ ಈ ರೀತಿಯಿದ್ದರೆ, ನಗರ ಮತ್ತು ಅದರ ಸುತ್ತಲಿನ ಗ್ರಾಮಗಳು ಈ ಹಿಂದೆ ನಡೆದ ಕೋಮು ಗಲಭೆಯಿಂದ ನಲುಗಿದ್ದು, ಯಾವುದೇ ನಿರ್ದಿಷ್ಟ ಅಭಿವೃದ್ಧಿ ಕಾಣಲು ಸಾಧ್ಯವಾಗಿಲ್ಲ, ಸರ್ಕಾರದ ಹಲುವು ಯೋಜನೆಗಳು ನೆನಗುದಿಗೆ ಬಿದ್ದಿವೆ, ಈ ಎಲ್ಲಾ ಹಿನ್ನಲೆಯಲ್ಲಿ ಈ ತಾಲೂಕನ್ನು ವಿಶೇಷವಾಗಿ ಪರಿಗಣಿಸಿ ನಿರ್ದಿಷ್ಟ ಅನುದಾನ ಬಿಡುಗಡೆ ಮಾಡಬೇಕೆಂದು ಸಿಪಿಐ(ಎಂ) ಸಮ್ಮೇಳನ ಆಗ್ರಹಿಸಿತು.

ಅದೇ ಸರ್ಕಾರದ ತಪ್ಪು ಆರ್ಥಿಕ ನೀತಿಯಿಂದ ಬೆಲೆ ಎರಿಕೆಯಾಗುತ್ತಿದ್ದು, ಜನ ಸಾಮಾನ್ಯರಿಗೆ ತೀವ್ರ ತೊಂದರೆಯಾಗಿದೆ. ಈ ಬೆಲೆ ನೀತಿ ವಿರುದ್ಧ ಸಿಪಿಐ (ಎಂ) ಹೋರಾಟ ಚಳುವಳಿ ನಡೆಸುತ್ತಿದೆ. ಅದೇ ರೀತಿ ಅಸಂಘಟಿತ ಕಾರ್ಮಿಕ ವಲಯದ ಅಂಗನವಾಡಿ, ಗ್ರಾಮಪಂಚಾಯತ, ಅಕ್ಷರ ದಾಸೋಹ, ಆಶಾ ಕಟ್ಟಡ, ಹಂಚು ಕಾರ್ಮಿಕರ ನ್ಯಾಯಯುತ ಬೇಡಿಕೆ ಕುರಿತು ಸತತ ಹೋರಾಟ ನಡೆಯುತ್ತಿದ್ದು, ಈ ಕೂಡಲೇ ಈ ಕುರಿತು ಸರ್ಕಾರ ಸಂಬಂದಪಟ್ಟ ಕಾರ್ಮಿಕ ಸಂಘಟನೆ ಜೊತೆ ಮಾತುಕತೆ ನಡೆಸಿ ಬೇಡಿಕೆ ಈಡೇರಿಕೆಗಾಗಿ ಒತ್ತಾಯಿಸಿ ನಿರ್ಣಯ ಕೈಗೊಳ್ಳಲಾಯಿತು. ಹಂಚು ಕೈಗಾರಿಕೆಯಲ್ಲಿ ಹಲವು ವರ್ಷದಿಂದ ಕನಿಷ್ಟ ಕೂಲಿ ಪರಿಷ್ಕರಣೆ ಆಗಿರಲಿಲ್ಲಾ. ಈಗ ಸಂಘಟನೆ ಒತ್ತಾಯದಿಂದ ಆದೇಶವಾಗಿದ್ದರು, ಟಾಸ್ಕ ನೆಪದಿಂದ ಅದನ್ನು ಜಾರಿ ಮಾಡದೇ ಕಾರ್ಮಿಕರಿಗೆ ಅನ್ಯಾಯವಾಗಿದ್ದು, ಅತಿ ಹೆಚ್ಚು ಶ್ರಮಭಾರ ನಿಗದಿಯಾಗಿದ್ದು, ಅದಕ್ಕೆ ತಕ್ಕ ಕೂಲಿ ದೊರಕದೇ ಇರುವುದು ತೀವ್ರ ಖಂಡನೀಯ ಈ ಕೂಡಲೇ ಸರಕಾರ ಮಧ್ಯಪ್ರವೇಶಿಸಿ, ಎಲ್ಲಾ ಹಂಚು ಕೈಗಾರಿಕಾ ಕಾರ್ಮಿಕರಿಗೆ ಕನಿಷ್ಟ ಕೂಲಿ ಜಾರಿ ಮಾಡಬೇಕೆಂದು ಒತ್ತಾಯ ಮಾಡಲಾಗಿದೆ.

ರಾಷ್ಟ್ರೀಯ ಹೆದ್ದಾರಿಗಳಲ್ಲಿ ಹೊಂಡಗಳದ್ದೇ ಸಾಮ್ರಾಜ್ಯವಾಗಿದ್ದು, ಹಲವು ಸಲ ನಾಗರಿಕರು ಹೋರಾಟ ನಡೆಸಿದ್ದು, ಇದರಲ್ಲಿ ಸಿಪಿಐ(ಎಂ) ಸಹ ಸಕ್ರಿಯವಾಗಿ ಭಾಗವಹಿಸಿತ್ತು. ಕೇವಲ ತೇಪೆ ಹಚ್ಚುವ ಕಾರ್ಯ ನಡೆಸಿದ್ದು, ಇದಕ್ಕೆ ಖಾಯಂ ಪರಿಹಾರ ಕಂಡುಕೊಳ್ಳುವ ಇಚ್ಚಾ ಶಕ್ತಿ ಕೊರತೆ ಈ ಕುರಿತು ಸರಕಾರ ಗಂಭಿರವಾಗಿ ಪರಿಗಣಿಸಿ, ಸಮಸ್ಯೆ ಪರಿಹಾರಕ್ಕೆ ಮುಂದಾಗಬೇಕೆಂದು ನಿರ್ಣಯ ಕೈಗೊಳ್ಳಲಾಯಿತು. ಅದೇ ರೀತಿ ಅ… ಅತಿಕ್ರಮಣ ಸಕ್ರಮಕ್ಕೆ ಒತ್ತಾಯಿಸಿ ನಿ… ಕೈಗೊಳ್ಳಲಾಯಿತು. ■



ಕರ್ನಾಟಕ ಲೋಕಾಯುಕ್ತ ಹುದ್ದೆಗೆ ನಿವೃತ್ತ ನ್ಯಾಯಮೂರ್ತಿ ಬನ್ನೂರು ಮಠ ಅವರನ್ನ ನೇಮಕ ಮಾಡಬೇಕೆಂದು ರಾಜ್ಯ ಬಿಜೆಪಿ ಸರ್ಕಾರ ರಚ್ಚೆ ಹಿಡಿದಿದೆ. ನಿವೇಶನದ ಪ್ರಶ್ನೆಯಲ್ಲಿ ಆರೋಪ ಕೇಳಿ ಬಂದ ಮೇಲೆ ನ್ಯಾ. ಶಿವರಾಜ ಪಾಟೀಲರು ಲೋಕಾಯುಕ್ತ ಹುದ್ದೆಗೆ ರಾಜೀನಾಮೆ ನೀಡಿ ನಿರ್ಗಮಿಸಿದರು. ಬನ್ನೂರು ಮಠರ ಮೇಲೆ ಸಹ ನಿವೇಶನದ ಪ್ರಶ್ನೆಯಲ್ಲಿ ಆರೋಪ ಕೇಳಿ ಬಂದಿದೆ. ರಾಜ್ಯಪಾಲರು ಬನ್ನೂರು ಮಠರ ನೇಮಕದ ಶಿಫಾರಾಸ್ಸನ್ನು ಒಪ್ಪುತ್ತಿಲ್ಲ. ಬನ್ನೂರು ಮಠರಾದರೂ ಈ ಸ್ಥಾನದ ಜವಾಬ್ದಾರಿ ಬೇಡ ಎಂದು ಹೇಳುವ ನೈತಿಕತೆಯನ್ನು ತೋರಿಸುತ್ತಿಲ್ಲ. ಇಂತಹ ಸನ್ನಿವೇಶದಲ್ಲಿ ರಾಜ್ಯದ ಪ್ರಜ್ಞಾವಂತರು ಬನ್ನೂರು ಮಠರಿಗೆ ಈ ಸಂಬಂಧವಾಗಿ ಬರೆದ ಬಹಿರಂಗ ಪತ್ರ ಇಲ್ಲಿದೆ.

ಕೇರಳ ಉಚ್ಚನ್ಯಾಯಾಲಯದ ಮಾಜಿ ಮುಖ್ಯ ನ್ಯಾಯಾಧೀಶರು
ಗೌರವಾನ್ವಿತ ನ್ಯಾಯಮೂರ್ತಿ
ಶ್ರೀ ಬನ್ನೂರುಮಠರವರು

ಇವರಿಗೆ ಒಂದು ಬಹಿರಂಗ ಪತ್ರ

ಮಾನ್ಯರೇ,

ಕರ್ನಾಟಕ ಲೋಕಾಯುಕ್ತ ಹುದ್ದೆಗೆ ನೇಮಕ ಮಾಡಲು ಕೇರಳ ರಾಜ್ಯದ ಉಚ್ಚನ್ಯಾಯಾಲಯದ ಮಾಜಿ ಮುಖ್ಯನ್ಯಾಯಾಧೀಶರಾದ ತಮ್ಮ ಹೆಸರನ್ನು ಕರ್ನಾಟಕ ರಾಜ್ಯ ಸರ್ಕಾರ ರಾಜ್ಯಪಾಲರಿಗೆ ಕಳುಹಿಸಿ ಕೊಟ್ಟಿತ್ತು. ಆ ನಂತರ ಪತ್ರಿಕೆಗಳಲ್ಲಿ ತಮ್ಮ ಬಗ್ಗೆ ಕೆಲವು ವರದಿಗಳು ಪ್ರಕಟವಾದವು. ವಿರೋದ ಪಕ್ಷಗಳು, ಕರ್ನಾಟಕ ಉಚ್ಚನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳೊಡನೆ ಸಮಾಲೋಚನೆಯ ಬಗ್ಗೆಯೂ ಪ್ರಶ್ನೆಗಳು ಎದ್ದಿದೆ.

ಈ ಎಲ್ಲ ಹಿನ್ನೆಲೆಯಲ್ಲಿ ರಾಜ್ಯಪಾಲರು ಸರ್ಕಾರದ ಪ್ರಸ್ತಾವವನ್ನು ಹಿಂದಕ್ಕೆ ಕಳುಹಿಸಿದ್ದಾರೆ. ಆದರೆ ಕರ್ನಾಟಕ ರಾಜ್ಯ ಸಚಿವ ಸಂಪುಟ ಮತ್ತೆ ನಿಮ್ಮ ಹೆಸರನ್ನೇ ಸೂಚಿಸಿ ರಾಜ್ಯಪಾಲರಿಗೆ ಕಳುಹಿಸಿದೆ. ರಾಜ್ಯದ ಮುಖ್ಯಮಂತ್ರಿಗಳು ಹಾಗೂ ರಾಜ್ಯಪಾಲರ ಹೇಳಿಕೆಗಳೂ, ಪ್ರತಿ ದಿನ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿವೆ. ಮತ್ತು ಹಲವಾರು ಬೆಳವಣಿಗೆಗಳ ನಂತರವೂ ಪುನಃ ಗೊಂದಲಗಳು ಸೃಷ್ಟಿಯಾಗಿವೆ. ರಾಷ್ಟ್ರಪತಿಗಳ ಕಡೆಗೆ ಸರ್ಕಾರದ ನಿಯೋಗವನ್ನು ಕೊಂಡೊಯ್ಯುವ ಮಾತುಗಳು ಬಂದಿದೆ. ಇದು ರಾಜಕೀಕರಣಗೊಳ್ಳತೊಡಗಿದೆ.

ಇದು ಒಂದೆಡೆ ಜನರಲ್ಲಿ ರಾಜ್ಯ ಸರ್ಕಾರ ಮತ್ತು ರಾಜ್ಯಪಾಲರ ಬಗ್ಗೆ, ಲೋಕಾಯುಕ್ತ ಸಂಸ್ಥೆಯ ಬಗ್ಗೆ ಹಾಗೂ ಉತ್ತಮ ನ್ಯಾಯಮೂರ್ತಿಗಳೆಂದು ಹೆಸರು ಪಡೆದ ತಮ್ಮ ಬಗ್ಗೆ ಅನವಶ್ಯಕ ಚರ್ಚೆ ಗೊಂದಲಕ್ಕೆ ಕಾರಣವಾಗುತ್ತಿದೆ. ಇದರಿಂದ ನ್ಯಾಯಾಂಗದ ಬಗ್ಗೆ ಹಾಗೂ ಲೋಕಾಯುಕ್ತ ಸಂಸ್ಥೆಯ ಬಗ್ಗೆ ಜನರಲ್ಲಿರುವ ಗೌರವಕ್ಕೆ ಕುಂದುಂಟಾಗುತ್ತಿದೆ.

ಈ ಗೊಂದಲಕ್ಕೆ ಕೊನೆ ಹಾಡಲು ಕರ್ನಾಟಕ ರಾಜ್ಯದ ಸಾಹಿತಿಗಳು, ಕಲಾವಿದರು, ಪ್ರಗತಿಪರ ಚಳುವಳಿಗಳ ನಾಯಕರು ಈ ಎಲ್ಲಾ ಹಿನ್ನೆಲೆಯಲ್ಲಿ ಈ ಹುದ್ದೆಗೆ, ಸರ್ಕಾರವು ತಮ್ಮ ಹೆಸರನ್ನು ಸೂಚಿಸುವ ಮತ್ತು ಒತ್ತಾಯಿಸುವ ಬಗ್ಗೆ ಅಸಮ್ಮತಿಯನ್ನು ವ್ಯಕ್ತಪಡಿಸಬೇಕೆಂದು ನಾವು ಬಯಸುತ್ತೇವೆ, ಸರ್ಕಾರಕ್ಕೆ ಹಾಗೂ ಕರ್ನಾಟಕದ ಜನತೆಗೆ ಅದನ್ನು ತಿಳಿಸಬೇಕೆಂದು ಗೌರವ ಪೂರ್ವಕವಾಗಿ ವಿನಂತಿ ಮಾಡುತ್ತೇವೆ.

ಡಾ.ಬರಗೂರು ರಾಮಚಂದ್ರಪ್ಪ
ಡಾ. ಯು.ಆರ್.ಅನಂತಮೂರ್ತಿ
ಪ್ರೊ. ಜಿ.ಕೆ. ಗೋವಿಂದರಾವ್
ಡಾ. ಕೆ.ಮರುಳಸಿದ್ಧಪ್ಪ
ಡಾ. ವಿಜಯಾ
ಬಿ.ಟಿ.ಲಲಿತಾ ನಾಯಕ್
ಎ.ಕೆ.ಸುಬ್ಬಯ್ಯ

ಭ್ರಷ್ಟಾಚಾರ ವಿರೋಧಿ ಪ್ರಗತಿಪರ ವೇದಿಕೆ

ಸಿ.ಪಿ.ಐ.(ಎಂ) ಪಾಲಿಟಬ್ಯೂರೋ ಹೇಳಿಕೆ

ಮಲ್ಲಪೆರಿಯಾರ್ ಅಣೆಕಟ್ಟೆ ಪ್ರಶ್ನೆ ಶಾಂತಿ ಸಾಮರಸ್ಯ ಕಾಪಾಡಲು ಮನವಿ ಪ್ರಧಾನಿಗಳ ಮುತುವರ್ಜಿಗೆ ಆಗ್ರಹ

ಮುಲ್ಲ ಪೆರಿಯಾರ್ ಅಣೆಕಟ್ಟೆಯ ಪ್ರಶ್ನೆಗೆ ಸಂಬಂಧಿಸಿ ತಮಿಳುನಾಡು ಮತ್ತು ಕೇರಳ ಈ ಎರಡೂ ರಾಜ್ಯಗಳ ಗಡಿಭಾಗದಲ್ಲಿ ನಡೆದಂತಹ ಘಟನೆಗಳ ಬಗೆಗೆ ಸಿ.ಪಿ.ಐ.(ಎಂ) ಪಾಲಿಟಬ್ಯೂರೋ ಗಂಭೀರ ಆತಂಕವನ್ನು ವ್ಯಕ್ತಪಡಿಸಿದೆ. ಬೇರೆ ರಾಜ್ಯಕ್ಕೆ ಸೇರಿದ ವ್ಯಕ್ತಿಗಳ ಮೇಲೆ ಕೆಲವು ಹಲ್ಲೆಗಳು ನಡೆದಿವೆ. ಗಡಿ ಭಾಗದಲ್ಲಿ ಮನೆಗಳ ಮೇಲೆ ಧಾಳಿ ನಡೆದಿರುವ ಕುರಿತು ವರದಿಗಳಿವೆ. ತಮಿಳುನಾಡಿನ ಕೆಲವು ನಗರಗಳಲ್ಲಿ ಅಂಗಡಿಗಳ ಮೇಲೆ ದಾಳಿಗಳು ನಡೆದಿವೆ.

ಎರಡೂ ರಾಜ್ಯಗಳ ಜನರ ನಡುವಿನ ಸುದೀರ್ಘ ಮತ್ತು ಉತ್ತಮ ಬಾಂಧವ್ಯದ ಹಿನ್ನೆಲೆಯಲ್ಲಿ ಈ ಎಲ್ಲ ಬೆಳವಣಿಗೆಗಳು ಅತ್ಯಂತ ದುರದೃಷ್ಟಕರವಾದುದಾಗಿದೆ.

ಉದ್ರಿಕ್ತತೆಯನ್ನು ಪ್ರಚೋದಿಸಲು ಹವಣಿಸುತ್ತಿರುವ ಗಡಿಭಾಗದ ಎರಡೂ ಕಡೆಯ ವಿಚ್ಛಿದ್ರಕಾರಿಶಕ್ತಿಗಳ ಯತ್ನಕ್ಕೆ ತಿರುಗೇಟು ನೀಡಬೇಕಿದೆ. ಎರಡೂ ರಾಜ್ಯಗಳ ಜನರಲ್ಲಿ ಪಾಲಿಟ್‌ಬ್ಯೂರೋ ಪ್ರಚೋದನೆಗೆಗಳಿಗೆ ಬಲಿ ಬೀಳದಿರುವಂತೆ ಮತ್ತು ಸಾಂಪ್ರದಾಯಿಕವಾದ ಸ್ನೇಹ ಮತ್ತು ಉತ್ತಮ ನೆರೆಹೊರೆ ಸಂಬಂಧ ವನ್ನು ಕಾಪಾಡಿ ಕೊಳ್ಳುವಂತೆ ಮನವಿ ಮಾಡುತ್ತದೆ.

ಎರಡೂ ರಾಜ್ಯಗಳ ನಡುವೆ ಭಿನ್ನಾಭಿಪ್ರಾಯಕ್ಕೆ ಕಾರಣವಾಗಿರುವ ಮುಲ್ಲಪೆರಿಯಾರ್ ಅಣೆಕಟ್ಟು ಪ್ರಶ್ನೆಯನ್ನು ಅಣೆಕಟ್ಟೆಯ ಸುರಕ್ಷತೆ ಹಾಗೂ ತಮಿಳುನಾಡಿಗೆ ನೀರಾವರಿ ಸೌಲಭ್ಯ ಈ ಎರಡೂ ದೃಷ್ಟಿಯಿಂದ ಪರಿಗಣಿಸಿ ಬಗೆಹರಿಸಬೇಕಾಗಿದೆ.

ಕೇಂದ್ರ ಸರಕಾರವು ಈ ಪ್ರಶ್ನೆಯಲ್ಲಿ ಮಧ್ಯ ಪ್ರವೇಶಿಸಬೇಕೆಂದು, ಹಾಗೂ ಅಣೆಕಟ್ಟೆಯ ಭದ್ರತೆಗೆ ಅಗತ್ಯವಾದ ಕ್ರಮ ಕೈಗೊಳ್ಳಬೇಕಾದ ಬಗೆಗೆ ಗಮನ ವಹಿಸಬೇಕೆಂದು ಸಿ.ಪಿ.ಐ.(ಎಂ) ಪಾಲಿಟ್‌ಬ್ಯೂರೋ ಒತ್ತಾಯಿಸುತ್ತದೆ. ಸ್ವತಃ ಪ್ರಧಾನ ಮಂತ್ರಿಗಳೇ ಎರಡೂ ರಾಜ್ಯಗಳೊಂದಿಗೆ ಈ ವಿಷಯದಲ್ಲಿ ಮುತುವರ್ಜಿ ವಹಿಸಬೇಕು. ಸುಪ್ರಿಂಕೋರ್ಟ್ ಈ ಪ್ರಶ್ನೆಯಲ್ಲಿ ಇತ್ಯರ್ಥಕ್ಕಾಗಿ ಬಾಕಿ ಇಟ್ಟಿರುವ ಸಂದರ್ಭದಲ್ಲಿ ಈ ಕ್ರಮ ಅಗತ್ಯವಾಗಿದೆ.

ಮೇಲು ಕುಲವಂತೆ

ನಿನ್ನ ಕುಲ ಯಾವುದೋ ಉತ್ತರವ ಹೇಳು?
ಮೇಲು ಕುಲ ತಾನೆಂಬೆ ಮನ ತುಂಬ ದೂಳು
ಮನದೊಳಗೆ ಕೊಳೆ ದೂಳು ತುಂಬಿಟ್ಟು ಕೊಂಡು
ಶ್ರೇಷ್ಠ ಕುಲ ಎಂಬುದನು ನಂಬೆನೋ ನಾನು

– ವಿಡಂಬಾರಿ

ಸಜ್ಜನರ ರಕ್ತ

ಈ ನಾಡು ಆಳುತಿಹ ಜನಕಾಗಿ ಒಂದು
ಸ್ಪೇಶಲ್ ಜೈಲೇನೆ ಬೇಕಾಯ್ತು ಇಂದು
ಈ ಸತ್ಯ ನಿಷ್ಠರು ಮತ್ತು ದೇಶ ಭಕ್ತ
ಪಕ್ಷಕ್ಕೂ ಬೇಕಾಯ್ತೆ ಸಜ್ಜನರ ರಕ್ತ

– ವಿಡಂಬಾರಿ

ಕಾರ್ಟೂನ್ ಕಾರ್ನರ್



ಭ್ರಷ್ಟಾಚಾರ ಪ್ರಜಾಪ್ರಭುತ್ವಕ್ಕೊಂದು ಕಂಟಕ


ಬಾಗೇಪಲ್ಲಿ ಸಿ.ಪಿ.ಐ (ಎಂ) ತಾಲ್ಲೂಕು ಸಮಿತಿ ವತಿಯಿಂದ ವಿಚಾರ ಸಂಕಿರಣ

ಸಿಪಿಐ(ಎಂ) 20ನೇ ರಾಜ್ಯ ಸಮೇಳನದ ಅಂಗವಾಗಿ ಚಿಕ್ಕಬಳ್ಳಾಪುರ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ವಿಚಾರ ಸಂಕಿರಣಗಳನ್ನು ಹಮ್ಮಿಕೊಂಡಿದ್ದು, ಪ್ರಥಮವಾಗಿ ಬಾಗೇಪಲ್ಲಿಯ ರಾಮಕೃಷ್ಣ ಕಲ್ಯಾಣ ಮಂಟಪದಲ್ಲಿ ಡಿಸೆಂಬರ್ 08, 2011 ರಂದು ಉದ್ಘಾಟನೆ ಮಾಡಲಾಯಿತು. ಉದ್ಘಾಟನೆ ಮಾಡಿದ ಪ್ರಗತಿಪರ ಚಿಂತಕರು ಹಾಗೂ ಚಲನ ಚಿತ್ರ ನಟರು ಆದ ಪ್ರೊ॥ ಜಿ.ಕೆ.ಗೋವಿಂದರಾವ್ ಮಾತನಾಡಿ ಇಷ್ಟೆಲ್ಲಾ ಹಗರಣ, ಭ್ರಷ್ಟಾಚಾರದ ಪ್ರಕರಣಗಳು ದಾಖಲಾಗಿ ಜೈಲಿಗೆ ಹೋಗಿ ಬಂದರೂ ಮತ್ತೆ ಮುಖ್ಯಮಂತ್ರಿಯಾಗಬೇಕೆಂದು ಹಪಹಪಿಸುತ್ತಿರುವುದು ನಾಚಿಕೆಗೇಡು ಎಂದರು. ನಂತರ ಮಾತನಾಡಿದ ಸಿ.ಪಿ.ಐ(ಎಂ) ರಾಜ್ಯ ಸಮಿತಿ ಸದಸ್ಯರು ಆದ ಕಾಂ॥ ಎಸ್.ವಿಮಲ ಜಾಗತೀಕರಣ, ಉದಾರೀಕರಣ, ಖಾಸಗೀಕರಣ ನೀತಿಗಳಿಂದ ರೈತರು ಬೆಳೆದ ಬೆಳೆಗಳಿಗೆ ಬೆಲೆ ಇಲ್ಲದಂತಾಗಿದೆ ಅವರಿಗೆ ಬೆಂಬಲ ಬೆಲೆಯೂ ಸಹ ಸರಿಯಾಗಿ ಸಿಗುತ್ತಿಲ್ಲ. ಕಾರ್ಖಾನೆಗಳನ್ನು ಮುಚ್ಚಿ ಕಾರ್ಮಿಕರಿಗೆ ಅನ್ಯಾಯ ಮಾಡುತ್ತಿದ್ದಾರೆ. ಕಳೆದ ಒಂದು ವರ್ಷದಲ್ಲಿ ಒಟ್ಟು ಬಯಲಾದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಹಗರಣಗಳಿಂದ ಲಕ್ಷ ಲಕ್ಷ ಕೋಟಿಗಳು ಲೂಟಿಯಾಗಿವೆ. 2 ಜಿ ಹಗರಣದಲ್ಲಿ 1.76 ಲಕ್ಷ ಕೋಟಿ, 60 ಸಾವಿರ ಕೋಟಿ ರೂಪಾಯಿಗಳ ಹಣಕಾಸಿನ ಅವವ್ಯವಹಾರಕ್ಕೆ ಕಾರಣವಾಗಿರುವ ಕಾಮನ್ ವೆಲ್ತ್ ಗೇಮ್ಸ್ ಭ್ರಷ್ಟಾಚಾರ ಅತ್ಯಂತ ದೊಡ್ಡ ಕಾರ್ಪೊರೇಟ್ ಸಂಸ್ಥೆಯ ಜೇಬಿಗೆ ಸಾವಿರಾರು ಕೋಟಿ ರೂಪಾಯಿಗಳ ಲಾಭ ಮಾಡಿಕೊಡುತ್ತಿರುವ ಕೃಷ್ಣ–ಗೋದಾವರಿ ಕಣಿವೆ ಗುತ್ತಿಗೆ ಹಗರಣ ರಾಜ್ಯ ಸರ್ಕಾರದ ಗಣಿ ಹಗರಣ, ಭೂಹಗರಣಗಳು ಲಕ್ಷಾಂತರ ಕೋಟಿಗಳ ಹಣ ಹಾಗೂ ರಾಜ್ಯ ಸಂಪತ್ತಿನ ಲೂಟಿಗಳು ಸಾರ್ವಜನಿಕ ಬದುಕಿನ ಎಲ್ಲಾ ರಂಗಗಳನ್ನು ಉನ್ನತ ಮಟ್ಟದ ಭ್ರಷ್ಟಾಚಾರ ವ್ಯಾಪಿಸಿರುವಾಗಲೇ ಜನ ಸಾಮಾನ್ಯರು ತಮ್ಮ ದಿನನಿತ್ಯದ ಬದುಕಿನಲ್ಲಿ ಆಹಾರ,



ವಸತಿ, ಆರೋಗ್ಯ, ಶಿಕ್ಷಣ ಹಾಗೂ ಉದ್ಯೋಗಗಳಂತಹ ಜೀವನೋಪಾಯ ಗಳಿಗಾಗಿ ಭ್ರಷ್ಟತೆಯನ್ನು ಎದುರಿಸುವಂತಾಗಿದೆ ಎಂದರು. ನಂತರ ವಿಷಯ ಮಂಡನೆ ಮಾಡಿದ ಮಾಜಿ ಶಾಸಕರು, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು, ಜಿಲ್ಲಾ ಕಾರ್ಯದರ್ಶಿ ಯಾದ ಜಿ.ವಿ.ಶ್ರೀರಾಮರೆಡ್ಡಿ ಮಾತನಾಡುತ್ತ ಇಂದು ರಾಜಕೀಯ ಎಂದರೆ ವ್ಯಾಪಾರವಾಗಬಿಟ್ಟಿದೆ. ಅನ್ಯಮಾರ್ಗಗಳಿಂದ ಸಂಪಾದನೆ ಮಾಡಿರುವ ಹಣವನ್ನು ರಕ್ಷಿಸಿಕೊಳ್ಳಲು ಇಂದು ರಾಜಕೀಯ ಪ್ರವೇಶ ಮಾಡುತ್ತಿದ್ದಾರೆ ಶಾಸಕರು, ಸಂಸದರು ಆಗುತ್ತಿದ್ದಾರೆ. ಇದು ರಾಜಕೀಯ ಭ್ರಷ್ಟಾಚಾರ. ನವ ಉದಾರೀಕರಣ ನೀತಿಗಳ ಫಲವಾಗಿ ದೇಶದ ಸಂಪನ್ಮೂಲಗಳನ್ನು ದೊಡ್ಡ ದೊಡ್ಡ ಬಂಡವಾಳದಾರರಿಗೆ ವರ್ಗಾವಣೆ ಮಾಡಲು ಸರ್ಕಾರವೇ ಅವರ ದಾಸಾನುದಾಸರಾಗಿ ಅವರಿಗೆ ಅನುಕೂಲ ಮಾಡಿಕೊಡುತ್ತಿದೆ. ಸರ್ಕಾರದ ಸಹಾಯದಿಂದ ಸಂಪನ್ಮೂಲಗಳು ದೊಡ್ಡ ಬಂಡವಾಳದಾರರ ದೊಡ್ಡ ದೊಡ್ಡ ಗುತ್ತಿಗೆದಾರರ ಹಾಗೂ ರಿಯಲ್ ಎಸ್ಟೇಟ್ ದಂಧೆ ಮಾಡುವವರ ಪಾಲಾಗುತ್ತಿದೆ. ಅನೈತಿಕ ವಿಧಾನಗಳಿಂದ ಸಂಪತ್ತಿನ ಕೋಢೀಕರಣಕ್ಕೆ ಸರ್ಕಾರ ತರುವ ನೀತಿಗಳು ಸಹಾಯ ಮಾಡುತ್ತಿವೆ. ರೈತರ ಲಕ್ಷಾಂತರ ಎಕರೆ ಜಮೀನುಗಳನ್ನು ವಶಪಡಿಸಿಕೊಂಡು ಖಾಸಗಿ ಕಂಪನಿಗಳಿಗೆ, ಖಾಸಗಿ ಬಂಡವಾಳಗಾರರಿಗೆ ಸ್ಥಿರಾಸ್ಥಿ ದಂಧೆ ಮಾಡುತ್ತಿರುವವರಿಗೆ ಮಾರಾಟ ಮಾಡಲಾಗುತ್ತಿದೆ. ಇದಕ್ಕಾಗಿ ಭೂ ಬ್ಯಾಂಕನ್ನು ಸಹ ತೆರೆಯಲಾಗಿದೆ. ಇಂತಹ ವಿಧಾನಗಳಿಂದ ರೈತರು ಆತ್ಮ ಹತ್ಯೆಗೆ ಮೊರೆ ಹೋಗುತ್ತಿದ್ದಾರೆ. ಈ ಗಣಿ, ಭೂ ಮಾಫಿಯಾ, ಲಿಕ್ಕರ್ ಮಾಫಿಯಾಗಳಿಂದ ಲಾಭ ಗಳಿಸಿರುವ ಅಪಾರ ಸಂಪತ್ತನ್ನು ಕೆಲವು ವ್ಯಕ್ತಿಗಳಿಂದ ಸಮಾಜ ಸೇವೆಯ ಹೆಸರಿನಲ್ಲಿ ಕಪ್ಪು ಹಣವನ್ನು ಮಾರ್ಪಾಟು ಮಾಡುವ ಪ್ರಕ್ರಿಯೆಯಲ್ಲಿ ವಿವಿಧ ಕಾರ್ಯಕ್ರಮಗಳನ್ನು ಮಾಡಲು ಹೊರಟಿದ್ದಾರೆ. ಈ ವ್ಯಾಪಕ ಭ್ರಷ್ಟಾಚಾರ ಹಾಗೂ ಡೋಂಗಿ ಸಮಾಜ ಸೇವಕರಿಂದ ಪ್ರಜಾ ಪ್ರಭುತ್ವ ದುರ್ಬಲವಾಗುತ್ತಿದೆ. ಮುಖ್ಯವಾಗಿ ಆರ್ಥಿಕ ಅಸಮಾನತೆ ಹೋಗಲಾಡಿಸುವವರೆಗೂ ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಲು ಸಾಧ್ಯವಿಲ್ಲ ಎಂದು ತಿಳಿಸಿದರು ನಂತರ ಜಿಲ್ಲಾ ಪಂಚಾಯ್ತಿ ಉಪಾಧ್ಯಕ್ಷರಾದ ಬಿ. ಸಾವಿತ್ರಮ್ಮ ಮಾತನಾಡಿದರು. ಈ ವಿಚಾರ ಸಂಕೀರಣಕ್ಕೆ ಸ್ವಾಗತವನ್ನು ಜಿಲ್ಲಾ ಸಮಿತಿ ಸದಸ್ಯರಾದ ಎಂ.ಪಿ. ಮುನಿವೆಂಕಟಪ್ಪ ಕೋರಿದರು. ವಂದನಾರ್ಪಣೆಯನ್ನು ತಾಲ್ಲೂಕು ಕಾರ್ಯದರ್ಶಿ ರಘುರಾಮರೆಡ್ಡಿ ನಿರ್ವಹಿಸಿದರು. ಅತಿಥಿಗಳಾಗಿ ಜಿಲ್ಲಾ ಪಂಚಾಯ್ತಿ ಸದಸ್ಯರಾದ ನಾರಾಯಣಮ್ಮ ತಾಲ್ಲೂಕು ಪಂಚಾಯ್ತಿ ಅಧ್ಯಕ್ಷರಾದ ಶೋಭಾರಾಣಿ ಕೋಮುಲ್ ನಿರ್ದೇಶಕರಾದ ಶ್ರೀಮತಿ ಶೋಭ ಹಾಗೂ ಜಿಲ್ಲಾ ಸಮಿತಿ ಸದಸ್ಯರಾದ ಚನ್ನರಾಯಪ್ಪ ಮೊಹಮ್ಮದ್ ಅಕ್ರಂ, ಪಿ. ಓಬಳರಾಜು, ಜಿ. ಸಿದ್ದಗಂಗಪ್ಪ, ಪ್ರಗತಿ ಪರ ರೈತ ಭೂಪಾಲ್ ರೆಡ್ಡಿ, ತಾಲ್ಲೂಕು ಸಮಿತಿ ಸದಸ್ಯರಾಧ ವೈ.ಆರ್. ವೆಂಕಟೇಶ್ ಬಾಬು, ಚಂದ್ರ ಶೇಖರ್ ರೆಡ್ಡಿ, ರಾಮಲಿಂಗಪ್ಪ, ಅಶ್ವತ್ಥಪ್ಪ, ತಾಲ್ಲೂಕು ಪಂಚಾಯ್ತಿ ಸದಸ್ಯರಾದ ಗೋಪಾಲಕೃಷ್ಣ, ಶಂಕರ್ ರೆಡ್ಡಿ, ನಾರಾಯಣನಾಯಕ್, ಜೆ.ಎಂ.ಎಸ್. ನ ಫಾತಿಮಾ, ಜೈನುಬೀ ಮುಂತಾದವರು ಪಾಲ್ಗೊಂಡಿದ್ದರು.

ಬಗರ್ ಹುಕುಂ ಸಾಗುವಳಿ ಭೂಮಿಯ ಸಕ್ರಮಕ್ಕಾಗಿ ಒತ್ತಾಯಿಸಿ ಪ್ರಾಂತರೈತ ಸಂಘದ ನೇತೃತ್ವದಲ್ಲಿ ಕುಣಿಗಲ್‌ನಲ್ಲಿ ಇತ್ತಿಚೆಗೆ ನಡೆದ ಹೋರಾಟದ ಚಿತ್ರ



ದಾವಣಗೆರೆ ಜಿಲ್ಲೆಯ ಹರಪನಹಳ್ಳಿಯಲ್ಲಿ ಇತ್ತೀಚೆಗೆ ನಡೆದ ಸಿಪಿಐ(ಎಂ) ಪಕ್ಷದ ಸ್ಥಳೀಯ ಸಮಿತಿ ಸಮ್ಮೇಳನದ ಸಂದರ್ಭದಲ್ಲಿ ನಡೆದ ಮೆರವಣಿಗೆಯ ಚಿತ್ರ.



ಕರಾವಳಿ ಜನಬೆಂಬಲ ಕುಸಿದಿರುವ ಭೀತಿ...

ಮತ್ತೆ ಕೊಳ್ಳಿ ಹಿಡಿದಿರುವ ಸಂಘ ಪರಿವಾರ

ಅಲ್ಪ ಸಂಖ್ಯಾತರ ಅಟ್ಟಾಡಿಸಿ ಹಲ್ಲೆ ...ಸುಳ್ಯ ಪೋಲಿಸ್ ಠಾಣೆ ಮೇಲೆ ಧಾಳಿ

ಕರಾವಳಿಯ ನೆಲ ನಿಧಾನಕ್ಕೆ ಬಿಸಿಯಾಗತೊಡಗಿದೆ. ಕೋಮು ಹಿಂಸೆಯ ಅಖಾಡದಲ್ಲಿ ಮತ್ತೊಮ್ಮೆ ಜಂಗಿ ಕುಸ್ತಿಗೆ ತಯಾರಿಗಳು ನಡೆಯತೊಡಗಿದೆ.

ಈ ಬಾರಿ ಸಂಘ ಪರಿವಾರ ನಡೆಸುತ್ತಿರುವ ತಯಾರಿಗಳು ಮಾತ್ರ ಅದರ ಗೊಂದಲಗಳನ್ನು ವೈರುಧ್ಯಗಳನ್ನು ತೆರೆದಿಡುತ್ತಿದೆ. ದ.ಕ. ಜಿಲ್ಲೆಯವರೇ ಆದ ಸದಾನಂದ ಗೌಡರು. ಮುಖ್ಯಮಂತ್ರಿಯಾಗಿದ್ದಾರೆ. ಯಾಗ, ಯಜ್ಞಗಳ ಕಂಟ್ರಾಕ್ಟರ್ ನಳಿನ್ ಕುಮಾರ್ ಲೋಕಸಭಾ ಸದಸ್ಯರಾಗಿದ್ದಾರೆ. ಪಂಚಾಯತ್ ಮಟ್ಟದಿಂದ ಜಿಲ್ಲಾ ಮಟ್ಟದವರೆಗೆ ಬಿಜೆಪಿಯದೇ ಪಾರುಪತ್ಯ. ವಿರೋಧ ಪಕ್ಷ ಕಾಂಗ್ರೆಸ್ ನಾಲ್ಕು ಜನ ಶಾಸಕರಿದ್ದರೂ ಸಂಪೂರ್ಣ ನಿತ್ರಾಣವಾಗಿದೆ. ಆದರೆ ಮುಂದಿನ ಚುನಾವಣೆಯಲ್ಲಿ ಹೀನಾಯವಾಗಿ ಸೋಲಬಹುದು ಎಂಬ ಭಯ ಚಡ್ಡಿ ಚತುರರನ್ನು ಕಾಡುತ್ತಿದೆ. ಭ್ರಷ್ಟತೆಯಲ್ಲಿ ಹೊಸ ದಾಖಲೆ ನಿರ್ಮಿಸುತ್ತಿರುವ ತಮ್ಮ ಸರಕಾರ, ಮತ್ತೊಂದೆಡೆ ಹರಡಲು ಚಪ್ಪಲಿ ಹಾಕಿ ಕುಣಿದಾಡುತ್ತಿದ್ದ ಹಿಂದುತ್ವದ ಸೇನಾನಿಗಳು ಕಳೆದ ಮೂರು ವರ್ಷಗಳಲ್ಲಿ ಚಿಗುರಿಕೊಂಡ ಪರಿ, ಅವರು ಓಡಾಡುವ ಕಾರು, ಖರೀದಿಸುತ್ತಿರುವ ಭೂಮಿ, ಪ್ಲಾಟ್ ದೋ ನಂಬರ್ ಬಿಸಿನೆಸ್‌ನ ಕೆಲ ಸಾಬಿಗಳೊಂದಿಗೆ ನಡೆಸುತ್ತಿರುವ ಸರಸ ಸಂಬಂಧ ಬಟ್ಟಾಬಯಲಾಗಿರುವುದರಿಂದ ಮುಂದಿನ ಚುನಾವಣೆ ಕಡು ಕಷ್ಟ ಎಂಬುವುದು ಕಲ್ಲಡ್ಕದ ಹೈಕಮಾಂಡ್ (ಪ್ರಭಾಕರ ಭಟ್)ನ ಆತಂಕ. ಅದರಿಂದಾಗಿಯೇ ಮುಂದಿನ ಚುನಾವಣೆ ಗೆಲ್ಲಬೇಕಾದರೆ ಮತ್ತೆ ಕೋಮು ಹಿಂಸೆ, ಧರ್ಮಾದರಿತ ವಿಭಜನೆ ಅನಿವಾರ್ಯ, ಅದಲ್ಲದೇ ಬೇರೆ ದಾರಿಯಿಲ್ಲ ಎಂಬ ನಿರ್ಧಾರಕ್ಕೆ ಸಂಘಪರಿವಾರ ಬಂದಿದೆ. ಅದರ ಭಾಗವಾಗಿಯೇ ಏಕಾಏಕಿ ಮತ್ತೆ ನೈತಿಕ ಪೊಲೀಸರು, ಗೋಸಾಗಾಟ ತಡೆಯುವವರು ಸಕ್ರಿಯವಾಗಿ ರಂಗಕ್ಕಿಳಿದಿದ್ದಾರೆ. ಮತೀಯ ಗೂಂಡಾಗಳ ಗ್ಯಾಂಗ್‌ವಾರ್, ಸೇಡಿನ ಹತ್ಯೆಗಳು ನಡೆಯತೊಡಗಿದೆ. ಇದೆಲ್ಲದರ ಕಲಶ ಪ್ರಾಯ ಎಂಬಂತಹ ಪ್ರಕರಣ ಸದಾನಂದ ಗೌಡರ ತವರು, ಸಂಘಿಗಳ 'ಗಂಡು ಮೆಟ್ಟಿದ' ನೆಲ ಸುಳ್ಯದಿಂದ ವರದಿಯಾಗಿದೆ.

ಸುಳ್ಯ ಹೇಳಿ ಕೇಳಿ ಸಂಘ ಪರಿವಾರದ ಅಭೇದ್ಯ ಕೋಟೆ. ಇಲ್ಲಿ ಪರಿವಾರ ಹೇಳಿದ್ದೇ ಕಾನೂನು. ಸರಕಾರಯಾರದ್ದೇ ಇದ್ದರೂ ಅದು ಲೆಕ್ಕಕ್ಕಿಲ್ಲ. ಪುರೋಹಿತ ಶಾಹಿಗಳ ಪ್ರಜ್ಞಾನುದಾರಕ, ಕಲ್ಲಡ್ಕ ಭಟ್ಟನ ಗುಲಾಮಗಿರಿ ಮಾಡುವ ಅಂಗಾರ ಈ ಮೀಸಲು ಕ್ಷೇತ್ರದ ಕಳೆದ ಐದು ಅವಧಿಗಳ ಶಾಸಕ. ಇಂತಹ ಸುಳ್ಯದಲ್ಲಿಯೇ ತಮ್ಮ ಕೋಟೆ ಬಿರುಕು ಬಿಡುವ ಸಣ್ಣ ಆತಂಕ ವಿಪ್ರರ ಪಡಸಾಲೆಯಲ್ಲಿ ಮೂಡತೊಡಗಿದೆ. ಮಡೆ, ಮಡೆಸ್ನಾನದಿಂದ ಕುಖ್ಯಾತವಾಗಿರುವ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನವೂ ಸುಳ್ಯ ತಾಲೂಕು ವ್ಯಾಪ್ತಿಗೆ ಸೇರಿದೆ. ಬೇರೆ ಬೇರೆ ರಾಜಕೀಯ ಬೆಳವಣಿಗೆಯ ಜೊತೆಯಲ್ಲಿಯೇ ಮಡೆಸ್ನಾನ ವಿವಾದವೂ ಬಿಜೆಪಿಗರ ನಿದ್ದೆಗೆಡಿಸಿದೆ. ತಾವು ಏನೇ ನಿರ್ಧಾರ, ತಂತ್ರ ಪ್ರಯೋಗಿಸಿದರೂ ಶೂದ್ರರು ಕಣ್ಣು ಮುಚ್ಚಿ ಬೆಂಬಲಿಸುತ್ತಾರೆ ಎಂಬ ಹಿಂದುತ್ವವಾದಿಗಳ ಆತ್ಮ ವಿಶ್ವಾಸಕ್ಕೆ ಮಡೆಸ್ನಾನ ವಿವಾದ ಸಣ್ಣಗೆ ಪೆಟ್ಟು ನೀಡುತ್ತಿದೆ. ನಂಬಿಕೆ, ನಾಗದೋಷ, ಸುಬ್ರಹ್ಮಣ್ಯನ ಕ್ರೋಧ, ಬ್ರಾಹ್ಮಣರ ಶಾಪ ಎಂಬ ಬಾಣಗಳನ್ನು ಬಿಟ್ಟರೂ ದಲಿತ, ಮಲೆಕುಡಿಯ, ಅರೆ ಭಾಷೆ ಗೌಡರನ್ನು ರಣರಂಗಕ್ಕಿಳಿಸಿ ಸುಬ್ರಹ್ಮಣ್ಯದ ಬೀದಿಗಳಲ್ಲಿ ಮಡೆಸ್ನಾನದ ಪರ ಸಭೆ ಸಮಾರಂಭಗಳನ್ನು ನಡೆಸಿದರೂ ಹಿಂದುಳಿದ ಶೂದ್ರ ಜಾತಿಯ ಗುಂಪುಗಳ ನಡುವೆ ಮಡೆಸ್ನಾನದ ವಿರುದ್ಧ ಸಣ್ಣಗೆ ಅಸಮಾಧಾನ ಹೊಗೆಯಾಡುತ್ತಿರುವುದು, ಮೇಲ್ವರ್ಗದ ಪಿತೂರಿಗಳ ಬಗ್ಗೆ ಬಹಿರಂಗ ಚರ್ಚೆಗಳು ನಡೆಯುತ್ತಿರುವುದು ಮೇಲ್ವರ್ಗದ RSSಮುಖಂಡರ ನಿದ್ದೆಗೆಡಿಸಿದೆ. ಈ ರೀತಿಯ ಹಿನ್ನಡೆಗಳಿಂದ ಹೊರಬರಲು, ಶೂದ್ರ ಜಾಗೃತಿಯನ್ನು ಚಿವುಟಿ ತಮ್ಮ ಭ್ರಷ್ಟಾಚಾರ, ರಂಗೀಲಾ ರಾಜಕೀಯವನ್ನು ಮರೆಮಾಚಿ ಪಾರಮ್ಯವನ್ನು ಮುಂದುವರಿಸಲು, ಶೂದ್ರರ ತಲೆಯೊಳಗೆ ಆಳಕ್ಕಿಳಿದು ಕೂತಿರುವ ಮುಸ್ಲಿಂ ದ್ವೇಷವನ್ನು ಕೆದಕುವ, ಆ ಮೂಲಕ ಕೋಮು ಸಂಘರ್ಷವನ್ನು ಸೃಷ್ಟಿಸಲು ಜಿಲ್ಲೆಯಾದ್ಯಂತ ವ್ಯಾಪಕ ತಯಾರಿಗಳು ನಡೆಯುತ್ತಿವೆ. ಅದರ ಭಾಗವಾಗಿಯೇ ಸದಾನಂದ ಗೌಡರ ಹುಟ್ಟೂರಿನಲ್ಲಿ ತಮ್ಮದೇ ಸರಕಾರದ ಪೊಲೀಸ್ ಠಾಣೆಗೆ ಕಲ್ಲೆಸೆಯಲಾಗಿದೆ. ಠಾಣೆಯ ಆವರಣದಲ್ಲಿಯೇ ಪೊಲೀಸರ ತಲೆ ಒಡೆದು ಹಾಕಲಾಗಿದೆ. ತಮ್ಮದೇ ಸರಕಾರ ತಮ್ಮದೇ ಪೊಲೀಸರಿಂದ ಬ್ಯಾರಿಗಳ ಓಲೈಕೆ ನಡೆಯುತ್ತಿದೆ. ಹಿಂದೂಗಳನ್ನು ಶೋಷಿಸಲಾಗುತ್ತಿದೆ ಎಂದು ಕರುಣಾಜನಕವಾಗಿ ಬೊಬ್ಬೆ ಹೊಡೆಯಲಾಗಿದೆ. ಕಲ್ಲಡ್ಕ ಪ್ರಭಾಕರ ಭಟ್ಟ, ಸುರತ್ಕಲ್ ಗಲಭೆಯ ನೇತಾರ ಸತ್ಯಜತ್ ಥೇಟ್ ಜಗದೀಶ್ ಕಾರಂತನಂತೆ ಸುಳ್ಯದ ಬೀದಿಗಳಲ್ಲಿ ಮೈಕ್ ಕಟ್ಟಿ ವಿಷಕಾರಿದ್ದಾರೆ. ಇನ್ನು ಬ್ಯಾರಿ (ಮುಸಲ್ಮಾನ)ಗಳ ಬೇಟೆಯಾಡುವುದು ಮಾತ್ರ ಬಾಕಿ.

ಸುಳ್ಯದ ಬ್ಯಾರಿ ಮುಸಲ್ಮಾನರಿಗೆ ಕಳೆದ ಕೆಲ ದಶಕಗಳಿಂದ ಹಿಂದೂಗಳ ಎದುರು ತಲೆ ಎತ್ತಿ ನಡೆದೇ ಗೊತ್ತಿಲ್ಲ. ಅದರಲ್ಲೂ ಎಂಭತ್ತರ ದಶಕದಲ್ಲಿ ಪೇಜಾವರರ ಕಾಲಿಗೆ ಕಲ್ಲು ತೂರಲಾಯಿತು ಎಂಬ ಪ್ರಕರಣವನ್ನು ಸೃಷ್ಟಿಸಿ ಸುಳ್ಯ ತಾಲೂಕಿನಾದ್ಯಂತ ಮುಸಲ್ಮಾನರ ವಿರುದ್ಧ ಗಲಭೆಯನ್ನು ಸೃಷ್ಟಿಸಿ ಮತ್ತೆಂದೂ ಎದ್ದು ನಿಲ್ಲದಂತೆ ಬ್ಯಾರಿಗಳ ಮುಗ್ಗಲು ಮುರಿದು ಹಾಕಲಾಯ್ತು. ಆನಂತರವಂತೂ ಬ್ಯಾರಿಗಳು ಹಿಂದುತ್ವವಾದಿಗಳ ವಿರುದ್ಧ ತಿರುಗಿ ಬಿದ್ದಿದ್ದಕ್ಕೆ ಉದಾಹರಣೆಗಳೇ ಇಲ್ಲ.


ಸಂಜಯ ಮೊನ್ನೆಯೂ ಸಹ ಸುಳ್ಯದ ಕಾಲೇಜೊಂದರಲ್ಲಿ ಬ್ಯಾರಿ ಹುಡುಗರ ಜೊತೆಗೆ ABVP ಪುಂಡರು ಕಾಲು ಕೆದರಿ ಜಗಳಕ್ಕೆ ಬಿದ್ದಿದ್ದಾರೆ. ತಮ್ಮ ಹುಡುಗಿಯರನ್ನು ಕಣ್ಣೆತ್ತಿ ನೋಡಬಾರದು ಎಂದು ಧಮ್ಕಿ ಹಾಕಿದ್ದಾರೆ.



ಬಿಸಿ ರಕ್ತದ ಮುಸ್ಲಿಂ ವಿದ್ಯಾಥಿಗಳು ರೂಢಿಗತ ಸಂಪ್ರದಾಯ ಮೀರಿ ಸ್ವಲ್ಪ ಮಟ್ಟಿಗೆ ತಿರುಗಿ ಬಿದ್ದಿದ್ದಾರೆ. ಇದರಿಂದ ಕೆರಳಿದ ABVPಯ ನಕಲಿ ವೀರರು ಮುಸ್ಲಿಂ ವಿದ್ಯಾರ್ಥಿಗಳನ್ನು ಅವರ ಊರಾದ ಎಲಿಮಲೆವರೆಗೆ ಬಸ್ಸಿನಲ್ಲಿ ಹಿಂಬಾಲಿಸಿ ಹೋಗಿದ್ದಾರೆ. ಎಲಿಮಲೆಯಲ್ಲಿ ಬಸ್ಸಿಳಿದದ್ದೇ ತಡ ಸ್ಥಳೀಯ ಬಜರಂಗಿಗಳೊಂದಿಗೆ ಸೇರಿ ಅಟ್ಟಾಡಿಸಿ ಬಡಿದಿದ್ದಾರೆ. ಮೈ ಕೈ ಗಾಯ ಮಾಡಿಸಿಕೊಂಡ ಮುಸ್ಲಿಂ ವಿದ್ಯಾರ್ಥಿಗಳು ಆಸ್ಪತ್ರೆ ಸೇರಿದ್ದಾರೆ. ಅಷ್ಟಕ್ಕೆ ಮುಗಿಸದ ಬಜರಂಗಿ ಪಡೆ ಪೆಟ್ಟು ತಿಂದವರ ಮೇಲೆಯೇ ಕೇಸು ದಾಖಲಿಸಬೇಕು. ABVP ಯವರ ಮೇಲೆ ಯಾವುದೇ ದೂರು ದಾಖಲಿಸಿಕೊಳ್ಳಬಾರದು ಎಂದು ಒತ್ತಾಯಿಸಲು ಸುಳ್ಯ ಠಾಣೆಯ ಮುಂದೆ ಗುಂಪು ಸೇರಿದ್ದಾರೆ. ಅದೇ ಸಂದರ್ಭದಲ್ಲಿ ಸುಳ್ಯದಲ್ಲಿ ಇನ್ನೊಂದು ಘಟನೆ ನಡೆಸಿದೆ. ಕ್ರಿಮಿನಲ್ ಕೃತ್ಯದಲ್ಲಿ ಪಳಗಿ ಜೈಲು ಹಕ್ಕಿಗಳಾಗಿರುವ ಮಂಜೇಶ್ವರದ ಇಬ್ಬರು ಮುಸ್ಲಿಂ ಯುವಕರಿಗೆ ಮಂಗಳೂರು ಜೈಲಿನಲ್ಲಿ ಕಳ್ಳನೋಟು ಪ್ರಕರಣದ ಆರೋಪಿಗಳಾದ ಜಾರ್ಖಂಡ್ ಮೂಲದ ಇಬ್ಬರು ಹಿಂದೂ ಯುವತಿಯರ ಪರಿಚಯವಾಗಿದೆ. ಜೈಲಿನಿಂದ ಏಕಕಾಲಕ್ಕೆ ಜಾಮೀನು ಪಡೆದು ಹೊರ ಬಂದಿರುವ ಈ ನಾಲ್ಕು ಜನ ಸೇರಿ ಒಂದು ತಂಡವನ್ನು ಕಟ್ಟಿಕೊಂಡಿದ್ದಾರೆ. ಜೊತೆಯಾಗಿಯೇ ಓಡಾಡತೊಡಗಿದ್ದಾರೆ. (ಕ್ರಿಮಿನಲ್‌ಗಳಿಗೆ ಯಾವ ಧರ್ಮ) ಈ ತಂಡ ಸುಳ್ಯ ದಾರಿಯಾಗಿ ಮಡಿಕೇರಿಗೆ ತೆರಳುವಾಗ ಸುಳ್ಯದ ಬಳಿ ತಾಲಿಬಾನಿ ಬಜರಂಗಿಗಳ ಕೈಗೆ ಸಿಕ್ಕಿ ಬಿದ್ದಿದ್ದಾರೆ. ನಡು ಮಾರ್ಗದಲ್ಲಿಯೇ ತಾಲಿಬಾನ್‌ಗಳ ರೀತಿ ವಿಚಾರಣೆ ನಡೆಸಿದ ಬಜರಂಗಿಗಳು ಈ ತಂಡಕ್ಕೆ ಸಮಾ ಒದೆ ನೀಡಿದ್ದಾರೆ. ಲವ್ ಜಿಹಾದ್, ಹಿಂದೂ ಹುಡುಗಿಯರ ಅಪಹರಣ ಎಂದು ಗುಲ್ಲೆಬ್ಬಿಸಿದ್ದಾರೆ. ಯಥಾ ಪ್ರಕಾರ ಅವರನ್ನು ಸುಳ್ಯ ಠಾಣೆಗೆ ಒಪ್ಪಿಸಲಾಗಿದೆ. ತಕ್ಷಣವೇ ಅಪಹರಣದ ಕೇಸು ದಾಖಲಿಸಿ ಈಗಲೇ ಶಿಕ್ಷೆ ವಿಧಿಸಬೇಕು ಎಂದು ಆಗ್ರಹಿಸಿದ್ದಾರೆ. ಎರಡೂ ಪ್ರಕರಣ ಸೇರಿ ಠಾಣೆಯ ಎದುರಿನ ಪರಿವಾರದ ಗುಂಪು ದೊಡ್ಡದಾಗಿದೆ. ಊರಿಗೆ ಅಪಹರಣದ, ಲವ್ ಜಿಹಾದ್‌ನ ಕಥೆ ಹಬ್ಬಿಸಲಾಗಿದೆ. ಠಾಣೆಯ ಮುಂದೆ ಸೇರಿರುವ ಪುಂಡ ಪೋಕರಿಗಳ ಗುಂಪಿನ ನೇತೃತ್ವವನ್ನು ಜಿಲ್ಲಾ ಪಂಚಾಯತ್ ಸದಸ್ಯ ಸೇರಿದಂತೆ ಬಿಜೆಪಿಯ ಜನಪ್ರತಿನಿಧಿಗಳೇ ವಹಿಸಿಕೊಂಡಿದ್ದಾರೆ. ಇದರಿಂದ ಪೊಲೀಸರು ತೀವ್ರ ಒತ್ತಡಕ್ಕೊಳಗಾದರೂ ಎಲಿಮಲೆ ವಿದ್ಯಾರ್ಥಿಗಳ ಮೇಲಿನ ಹಲ್ಲೆ ಪ್ರಕರಣದಲ್ಲಿ ಎರಡೂ ಕಡೆಯ ದೂರು ದಾಖಲಿಸಿಕೊಂಡಿದ್ದಾರೆ: ಅಪಹರಣ ಪ್ರಕರಣದ ನಿಜ ಕಥೆ ಗೊತ್ತಾಗಿ ಜಾರ್ಖಂಡ್ ಯುವತಿಯರನ್ನು ರಿಮ್ಯಾಂಡ್ ಹೋಂಗೆ ಕಳುಹಿಸಿ ಯುವಕರನ್ನು ತನಿಖೆಗಾಗಿ ಠಾಣೆಯಲ್ಲಿಯೇ ಇರಿಸಿದ್ದಾರೆ. ಇಷ್ಟೇ ಸಾಕಾಯಿತು ಬಜರಂಗಿ ಪಡೆಗೆ, ಜನಪ್ರತಿನಿಧಿಗಳ ಸಹಿತ ಬಿಜೆಪಿ ಮರಿ ಪುಡಾರಿಗಳ ನೇತೃತ್ವದಲ್ಲಿ ಒಬ್ಬ ಗ್ರಾಮಕರಣಿಕನೂ ಸೇರಿ ಪೊಲೀಸ್ ಠಾಣೆಗೆ ವ್ಯಾಪಕವಾಗಿ ಕಲ್ಲು ತೂರಿದ್ದಾರೆ. ಪೊಲೀಸ್ ವಾಹನಗಳನ್ನು ಪುಡಿಗಟ್ಟಲಾಗಿದೆ. ಪೊಲೀಸರ ತಲೆ ಒಡೆಯಲಾಗಿದೆ. ಪೊಲೀಸರು ಅನಿವಾರ್ಯವಾಗಿ ಲಾಠಿ ಬೀಸಿದ್ದಾರೆ. ಇಷ್ಟಕ್ಕೇ ಪೊಲೀಸರು ಬ್ಯಾರಿಗಳ ಪರವಹಿಸುತ್ತಿದ್ದಾರೆ. ಹಿಂದೂ ಹುಡುಗಿಯರ ಅಪಹರಣ ನಡೆಯುತ್ತಿದ್ದರೂ ಪೊಲೀಸರು ಏನೂ ಮಾಡುತ್ತಿಲ್ಲ, ನ್ಯಾಯ ಕೇಳುವ ಹಿಂದೂಗಳಿಗೆ ಹೊಡೆಯುತ್ತಾರೆ ಎಂದು ಊರಿಡೀ ಡಂಗುರ ಸಾರತೊಡಗಿದ್ದಾರೆ. ಪೊಲೀಸ್ ಠಾಣೆಗೆ ಕಲ್ಲು ಬಿದ್ದದ್ದು, ಪೊಲೀಸರು ಪೆಟ್ಟು ತಿಂದದ್ದು, ಎಸ್.ಪಿ.ಯ ಕಿವಿ ತಲುಪಿ ತಕ್ಷಣವೇ ಜಿಲ್ಲಾ S.P. ಲಾಬೂರಾಂ, ನೂತನ ಐಜಿಪಿ ಪ್ರತಾಪ್ ರೆಡ್ಡಿ ಸುಳ್ಯಕ್ಕೆ ಆಗಮಿಸಿದ್ದಾರೆ. ಅಪರೂಪಕ್ಕೆ ಧೈರ್ಯ ತೋರಿದ ಪೊಲೀಸರು ಕಲ್ಲು ತೂರಿದ ಬಿಜೆಪಿ ನಾಯಕರನ್ನು ಬಂಧಿಸತೊಡಗಿದ್ದಾರೆ. ಇದು ಕಲ್ಲಡ್ಕ ಭಟ್ಟನನ್ನು ಜಾಗೃತಗೊಳಿಸಿದೆ.

ಪುಟ 10ಕ್ಕೆ

ನೀಚ ಅಜಲು ಪದ್ಧತಿಗೆ ಮರುಜೀವ



ವಾಸುದೇವ ಉಚ್ಚಿಲ

ಅಜಲು ಪದ್ಧತಿ ಎಂಬ ಆಚರಣೆಯ ಬಗ್ಗೆ ಉಡುಪಿ, ದಕ್ಷಿಣ ಕನ್ನಡ, ಕಾಸರಗೋಡು ಜಿಲ್ಲೆಗಳ ಹೊರತು ಬೇರೆ ಭಾಗದ ಜನ ಕೇಳಿರಲಾರರು. ಅಸ್ಪೃಶ್ಯತೆಗೆ ಸಂಬಂಧಿಸಿದ ಆಚರಣೆ ಇದಾಗಿದ್ದು ಕಾನೂನು ಮೂಲಕ ನಿಷೇಧಿತವಾಗಿದೆ. ಅಂಥ ಆಚರಣೆಯೊಂದನ್ನು ಮೇಲು ಜಾತಿಯವರು ಮಾಡಿಸಿದ ಘಟನೆ ವಾರದ ಹಿಂದೆ ನಡೆದಿದ್ದು ಅದೀಗ ಕರಾವಳಿ ಜಿಲ್ಲೆಗಳಲ್ಲಿ ಚರ್ಚೆಯ ವಿಷಯವಾಗಿದೆ. ಮಡೆಸ್ನಾನ ಸಂಬಂಧವಾಗಿ ಹಲ್ಲೆ ದೌರ್ಜನ್ಯಗಳು, ಚರ್ಚೆ-ಪ್ರತಿಚರ್ಚೆಗಳು ನಡೆಯುತ್ತಿರುವ ಬೆನ್ನಿಗೇ ವಿದ್ಯಾವಂತರ ಜಿಲ್ಲೆಯಲ್ಲಿ ಮತ್ತೊಂದು ಪ್ರಕರಣ -ಅಜಲು - ನಡೆದಿದೆ.

ಕೊರಗರು ಕರಾವಳಿಯ ದಲಿತರಲ್ಲಿಯೇ ಅತ್ಯಂತ ನಿಕೃಷ್ಟ ಸ್ಥಿತಿಯಲ್ಲಿರುವ ಜಾತಿ ಸಮುದಾಯ. ಇವರು ಆದಿವಾಸಿ ಬುಡಕಟ್ಟಿನವರೂ ಹೌದು; ಅಸ್ಪೃಶ್ಯ ದಲಿತರೂ ಹೌದು. ಸರಕಾರಿ ದಾಖಲೆಗಳಲ್ಲಿ ಪರಿಶಿಷ್ಟ ಪಂಗಡಗಳಲ್ಲಿ ಕಾಣಿಸಲಾಗಿದೆ. ಕರಾವಳಿ ಜಿಲ್ಲೆಗಳಲ್ಲಿ ಊರಿನಿಂದ ದೂರವಾಗಿ ಕಾಡುಗಳ ಅಂಚುಗಳಲ್ಲಿ ಇವರು ವಾಸಿಸುತ್ತಿದ್ದರು. ಕಾಡಿನ ಬಿದಿರು, ಬೆತ್ತ ಬೀಳಲು ಸಂಗ್ರಹಿಸಿ ಬುಟ್ಟಿ, ಕುಕ್ಕೆ ಇತ್ಯಾದಿಗಳನ್ನು ಹೆಣೆದು ಮಾರಿ ಜೀವನ ನಡೆಸುತ್ತಾರೆ.



ಹಿಂದಿನ ಕಾಲದಲ್ಲಿ ಕಾಡಿನಲ್ಲಿ ಬೇಟೆ, ಮೀನು ಶಿಕಾರಿ ಮಾಡಿಯೂ ಆಹಾರ ಸೇವನೆ ಮಾಡುತ್ತಿದ್ದರು. ತೀರಾ ಇತ್ತೀಚಿನವರೆಗೂ ಸರಿಯಾದ ಮನೆಯೇ ಇವರಿಗೆ ಇರಲಿಲ್ಲ. ಹರಕು ಗುಡಿಸಲುಗಳಲ್ಲಿ ವಾಸವಿದ್ದರು. ಡೋಲಿ, ಕೊಳಲು ನುಡಿಸುವುದು ಅವರ ಮನೋರಂಜನೆ. ಇತ್ತೀಚೆಗೆ ಅವರಲ್ಲಿ ಕೆಲವರು ಪೇಟೆ ಪಟ್ಟಣಗಳಿಗೆ ಬಂದು ಪೌರಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದಾರೆ. (ತಿಂಗಳ ಹಿಂದೆ ಮಂಗಳೂರು ತಾಲೂಕಿನ ಕಿನ್ನಿಗೋಳಿ ಎಂಬಲ್ಲಿ ಕೊರಗ ಬಬ್ಬಾತ ಶೌಚಾಲಯದ ಗುಂಡಿಗೆ ಇಳಿದು ಮೃತನಾದ ಘಟನೆಯೂ ನಡೆದಿದೆ.)

ಕರಾವಳಿಯ ಜಾತಿ ಶ್ರೇಣಿಯಲ್ಲಿ ಅತ್ಯಂತ ಕೆಳಗಿನವರಾದ ಇವರು ಮೇಲು ಜಾತಿಯವರಿಗಾಗಿ ಕೆಲವು ಸೇವೆಗಳನ್ನು ಬಿಟ್ಟಿಯಾಗಿ, ಕೆಲವೊಮ್ಮೆ ಹಣ ಪಡೆದು ಕಡ್ಡಾಯವಾಗಿ ಮಾಡಬೇಕಿತ್ತು. ಅಂಥ ಕಡ್ಡಾಯ ಸೇವೆಗೆ 'ಅಜಲು' ಎಂದು ಹೆಸರು. ಇದರಲ್ಲಿ ದೇವಾಲಯಗಳ ಜಾತ್ರೆ ವೇಳೆ ಡೋಲು ಬಾರಿಸುವುದು, ಗ್ರಾಮದ ಶ್ರೀಮಂತರು ಸತ್ತಾಗ ಡೋಲು ಬಾರಿಸುವುದು, ಊರಿನ ಜಾತ್ರೆ ಹಾಗೂ ಹಬ್ಬಗಳಿಗೆ ವಾರ ಮೊದಲು ಮನೆ ಮನೆಗಳಿಗೆ ಹೋಗಿ ಡೋಲು ಬಾರಿಸುವುದು, ಕಂಬಳ ನಡೆಯುವ ಸ್ಥಳದಲ್ಲಿ ಹಿಂದಿನ ದಿನ ರಾತ್ರಿ ಕಂಬಳಗದ್ದೆ ಸಮೀಪ ಕುಟುಂಬ ಸಮೇತ ಜಾಗರವಿದ್ದು ಡೋಲು ಬಾರಿಸುವುದು (ಇದಕ್ಕೆ 'ಪನಿ ಕುಳ್ಳುನಿ' ಅಂದರೆ 'ಮಂಜುಹನಿಗೆ ಕುಳಿತುಕೊಳ್ಳುವುದು' - ಎನ್ನುತ್ತಾರೆ.) ಮೇಲ್ಜಾತಿಯವರ ಮಕ್ಕಳಿಗೆ ಕಾಯಿಲೆ ಅನಾರೋಗ್ಯ ಆದರೆ ಅವರು ಅನ್ನದಲ್ಲಿ ಉಗುರು ,ಕೂದಲು ಬೆರೆಸಿ ನೀಡಿದಾಗ ಅದನ್ನು ಪಡೆದುಕೊಂಡು ಸೇವಿಸುವುದು (ಇದರಿಂದ ಕಾಯಿಲೆ ದೂರವಾಗುವುದು ಎಂಬ ನಂಬಿಕೆ) ಮೇಲ್ಜಾತಿಯವರು ತಮ್ಮ ಹಸುಗೂಸುಗಳನ್ನು ಕೊರಗ ಹೆಂಗಸರಿಗೆ ಮೊರದಲ್ಲಿಟ್ಟು ನೀಡಿದಾಗ ಅದನ್ನು ಸ್ವೀಕರಿಸಿ (ಕೆಲವೊಮ್ಮೆ ಮೊಲೆ ಹಾಲುಣಿಸಿ) ವಾಪಾಸು ಮಾಡುವುದು (ಮಕ್ಕಳಿಗೆ ಬರುವ ಬಾಧೆಗಳು ಕೊರಗರಿಗೆ ವರ್ಗಾವಣೆ ಆಗುತ್ತವೆ ಎಂಬ ನಂಬಿಕೆ), ಮೇಲ್ಜಾತಿಯವರು ಉಂಡ ಎಲೆಯಲ್ಲಿ ಬಿದ್ದ ಎಂಜಲನ್ನವನ್ನು ಸೇವಿಸುವುದು - ಇತ್ಯಾದಿ ಅಜಲು ಪದ್ಧತಿಯ ಹಲವು ವಿಧಿಗಳು. ಅನ್ನಾಹಾರಗಳಿಗೆ ದಿಕ್ಕೇ ಇಲ್ಲದಿದ್ದ ಕೊರಗ ಸಮುದಾಯಗಳು ಇದನ್ನು ತಮ್ಮ ಕರ್ತವ್ಯವೆಂಬಂತೆ ಮಾಡುತ್ತಾ ಬಂದಿವೆ. ಶಿಕ್ಷಣದ ಪ್ರಸಾರದಿಂದಲಾಗಿ ಎಂಜಲೆಲೆ ನೀಡುವುದೂ, ಎಂಜಲು ಉಣ್ಣುವುದೂ ಕೆಲವು ವರ್ಷಗಳಿಂದೀಚೆಗೆ ನಿಂತು ಹೋಗಿದೆ.

ಅಸ್ಪೃಶ್ಯತೆಯ ಘೋರ ಆಚರಣೆಯಾದ ಅಜಲು ಪದ್ಧತಿಯನ್ನು " ಅಜಲು ಆಚರಣೆ ನಿಷೇಧ ಕಾಯಿದೆ 1997"ರ ರಾಜ್ಯ ಸರ್ಕಾರವೇ ನಿಷೇಧ ಮಾಡಿದೆ. ಆದರೆ ಆಚರಣೆಗಳಲ್ಲಿ ಕೆಲವು ಮುಂದುವರಿದೇ ಇವೆ, ದೇವಾಲಯ, ದೇವಸ್ಥಾನಗಳಲ್ಲಿ ಡೋಲು ಬಾರಿಸುವ ಕಡ್ಡಾಯವು ನಿಂತು ಹೋಗಿದೆ. ಡೋಲು ಬಾರಿಸಿದರೆ ಹಣ ಸಿಗುತ್ತದೆ ಎಂದು ಕೆಲವು ಕೊರಗರು ತಾವಾಗಿ ಜಾತ್ರೆ, ಹಬ್ಬಗಳ ಸಂದರ್ಭದಲ್ಲಿ ಮನೆ ಮನೆಗೆ ಹೋಗುವುದೂ ಉಂಟು. ಅದನ್ನೂ ತಿಳುವಳಿಕೆ ನೀಡುವ ಮೂಲಕ ನಿಲ್ಲಿಸಲು ಪ್ರಯತ್ನಿಸಲಾಗುತ್ತದೆ. ಅನ್ನದಲ್ಲಿ ಉಗುರು ಬೆರೆಸಿ ನೀಡುವ ಆಚರಣೆಗಳು ನಡೆಯುತ್ತಿರುವ ಬಗ್ಗೆ ವರದಿ ಆಗುತ್ತಿಲ್ಲ.

ಈಗ ಕೆಲವೇ ದಿನಗಳ ಹಿಂದೆ ಉಡುಪಿ ತಾಲೂಕಿನ ಕೊಕ್ಕರ್ಣೆ ಎಂಬಲ್ಲಿನ ವಡ್ಡಂಬೆಟ್ಟು ಕಂಬಳದ ಹಿಂದಿನ ದಿನ ಕೊರಗ ಕುಟುಂಬಗಳನ್ನು ಕಂಬಳದ ಗದ್ದೆಯಲ್ಲಿ ' ಪನಿ ಕುಳ್ಳುನಿ' ಅಜಲಿಗಾಗಿ ಇರಿಸಿದ್ದ ಬಗ್ಗೆ ಪೋಟೋ ಸಹಿತ ಪತ್ರಿಕೆಗಳಲ್ಲಿ ವರದಿಯಾಗಿದೆ. ಇದಕ್ಕೂ ಮೊದಲು ಇಂಥದೊಂದನ್ನು ಮಾಡಿಸಬಾರದೆಂದು ಸ್ಥಳೀಯ ಕೊರಗ ಸಂಘಗಳು ಒತ್ತಾಯಿಸಿದ್ದು, ಆ ಒತ್ತಾಯದ ಮೇರೆಗೆ ಕಂಬಳ ವ್ಯವಸ್ಥಾಪಕರು ಸ್ಥಳೀಯ ಬ್ರಹ್ಮಾವರ ಪೋಲೀಸು ಠಾಣೆಯಲ್ಲಿ ಮುಚ್ಚಳಿಕೆ ನೀಡಿದ್ದರು. ಆದರೆ ಈಗ ತಿಳಿದು ಬಂದಿರುವಂತೆ ಸ್ವಲ್ಪ ದೂರದ ಬಾರಕೂರಿನಿಂದ ದುಡ್ಡು ಕೊಟ್ಟು ಅದೇ ವ್ಯವಸ್ಥಾಪಕರು ಕೊರಗ ಕುಟುಂಬಗಳನ್ನು ಕರೆಸಿ ಅಜಲು ಮಾಡಿಸಿದ್ದರು; ಗಂಡಸರಿಗೆ ಚೆನ್ನಾಗಿ ಕುಡಿಸಿ ಡೋಲು ಬಾರಿಸುವಂತೆ ಮಾಡಿದ್ದರು. ಜಿಲ್ಲೆಯ ಕೊರಗ ಸಂಘಟನೆಗಳು ಇದು ಗೊತ್ತಾದ ಮರುದಿನ ಉಡುಪಿಯಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿ "ಅಜಲು ಆಚರಣೆ ನಿಷೇಧ ಕಾಯಿದೆ" ಯಂತೆ ಕ್ರಮ ಕೈಗೊಳ್ಳಲು ಆಗ್ರಹಿಸಿದ್ದಾರೆ. ಸರಕಾರ ಇನ್ನೂ ಕಾಯಿದೆಯಂತೆ ಕ್ರಮ ಕೈಗೊಂಡಿಲ್ಲ.

ಮಡೆಸ್ನಾನದಂಥ ಆಚರಣೆಯನ್ನು



ಸಮರ್ಥಿಸುವವರು, ಅದು ಆಚರಿಸುವವರ ಧಾರ್ಮಿಕ ನಂಬಿಕೆಗೆ ಸಂಬಂಧಪಟ್ಟುದು ಎಂದೇ ಹೇಳುತ್ತಿದ್ದಾರೆ. ಕೊರಗರು ಅಜಲನ್ನು ತಮ್ಮ ನಂಬಿಕೆಯಾಗಿಯೇ ಮಾಡಿರುತ್ತಾರೆ. ಯಾರೂ ಅವರನ್ನು ಒತ್ತಾಯಿಸಿರುವುದಿಲ್ಲ ಎಂಬುದಾಗಿ ವಡ್ಡಂಬೆಟ್ಟು ಕಂಬಳದ ಸಂಘಟಕರು ಹೇಳುತ್ತಿರಬಹುದು.

ತಮ್ಮನ್ನು ಅತ್ಯಂತ ಕೀಳಾಗಿ ಪರಿಗಣಿಸಿ ಇಂಥ ಸೇವೆಯನ್ನು ಮಾಡಿಸುತ್ತಿದ್ದಾರೆ ಎಂದು ಅರಿಯದಷ್ಟು ಮುಗ್ಧರು ಕೊರಗ ಸಮುದಾಯದಲ್ಲಿದ್ದಾರೆ.ಆಹಾರ, ಹಣದ ತೀವ್ರ ಅಭಾವ ಅನುಭವಿಸುವ ಕೊರಗರು ಕಾನೂನು ಏನೇ ಹೇಳಲಿ ನಮಗೊಂದಿಷ್ಟು ಬಾಯಿಗೆ ತುತ್ತು ಎಂದು ಅಜಲು ನಡೆಸಿಕೊಡುವವರಿದ್ದಾರೆ. ಕಾನೂನಿನ ಪ್ರಕಾರ, ಅಜಲು ಮಾಡಿಸಿದವರಿಗೆ ಮಾತ್ರ ಶಿಕ್ಷೆಯುಷ್ಟೇ ಎಂದು ಭಾವಿಸಿ ಸ್ವಾರ್ಥಿಗಳಾಗಿರುವ ಕೊರಗರೂ ಇರಬಹುದು. ಅಪೂರ್ವವಾಗಿ ಸಿಗುವ ಅನ್ನ, ಹಣ, ಹೆಂಡಗಳ ಭಿಕ್ಷೆಗಾಗಿ ಕೊರಗರು ಮೈಲುಗಟ್ಟಲೆ ನಡೆದು ಅಜಲು ನಡೆಸಿಕೊಡುತ್ತಾರಾದರೆ, ಅವರನ್ನು ಆ ಪರಿಸ್ಥಿತಿಗೆ ದೂಡಿದ ಆಧುನಿಕ ಸಮಾಜದ ಅಭಿವೃದ್ಧಿ ಯೋಜನೆಗಳ ಅರ್ಥವೇನು ಎಂಬುದನ್ನು ಪ್ರಶ್ನಿಸಬೇಕಾಗಿದೆ.

ಪರಿಶಿಷ್ಟ ಪಂಗಡಗಳಲ್ಲೇ ಆದಿವಾಸಿಗಳು/ ಮೂಲನಿವಾಸಿಗಳು ಗಳಿಗಾಗಿನ ಯೋಜನೆಯಲ್ಲಿ ಕೊರಗರಿಗಾಗಿ ಹಣಕಾಸನ್ನು ಕೇಂದ್ರ ಸರಕಾರ ಕಾದಿರಿಸಿದೆ. ಆದರೆ ಅಧ್ಯಯನದ ಪ್ರಕಾರ ಕೊರಗರ ಜನಸಂಖ್ಯೆ ಏರಿಕೆಯ ಪ್ರಮಾಣ ಇತರ ಸಮುದಾಯಗಳಿಗಿಂತ ಕಡಿಮೆಯಾಗಿದೆ. ಅವರಲ್ಲಿ ತೀವ್ರತರ ಅಪೌಷ್ಟಿಕತೆ ಇದೆ. ಅಕಾಲ ಸಾವಿನ ಪ್ರಮಾಣ ಹೆಚ್ಚಿದೆ. ಕ್ಷಯ ಹಾಗೂ ಇತರ ಕಾಯಿಲೆಗಳಿಂದ ಸಾಕಷ್ಟು ಜನ ಬಳಲುತ್ತಿದ್ದಾರೆ. ಪೇಟೆ ಪಟ್ಟಣಗಳಲ್ಲಿ ಪೌರಕಾರ್ಮಿಕರಿಗಾಗಿ ಕೆಲಸ ಮಾಡುವವರ ಪರಿಸ್ಥಿತಿಯೂ ಹೀನಾಯವಾಗಿದೆ. ಕೊರಗರ ಅಭಿವೃದ್ಧಿಗಾಗಿ ಮುಹಮದ್ ಪೀರಾ ಸಮಿತಿ ನೀಡಿದ್ದ ವರದಿಯನ್ನು ಸರಕಾರ ಜಾರಿ ಮಾಡುತ್ತಿಲ್ಲ. ಎಲ್ಲ ಕೊರಗ ಕುಟುಂಬಗಳಿಗೂ ಕೃಷಿ, ಜಮೀನು, ವಸತಿಗಾಗಿ ನಿವೇಶನ ಹಾಗೂ ವಸತಿ ಒದಗಿಸಬೇಕೆಂಬ ಶಿಫಾರಸುಗಳು ಕಡೆಗಣಿಸಲ್ಪಟ್ಟಿವೆ. ಮಂಗಳೂರು ನಗರ ಪಾಲಿಕೆಯ ವ್ಯಾಪ್ತಿಯ ಉದಾಹರಣೆ ಹೇಳುವುದಾದರೆ, ಇಲ್ಲಿನ ನಂತೂರು ಎಂಬಲ್ಲಿ ರಾಷ್ಟ್ರೀಯ ಹೆದ್ದಾರಿ ಅಗಲೀಕರಣಗೊಂಡಾಗ ಒಕ್ಕಲೆಬ್ಬಿಸಿದ್ದ 6 ಕೊರಗ ಕುಟುಂಬಗಳಿಗೆ ವರ್ಷ ಒಂದು ದಾಟಿದರೂ ಸರ್ಕಾರ ನಿವೇಶನ ಮಂಜೂರು ಮಾಡಿಲ್ಲ. ಪಾಲಿಕೆಯ ಒಳಗೆ ಗುರುತಿಸಲಾದ ಸರ್ಕಾರಿ ನಿವೇಶನಗಳ ಮಂಜೂರು ಮಾಡಲು ಪತ್ರಗಳು ಹೆದ್ದಾರಿ ಇಲಾಖೆ, ಪಾಲಿಕೆ, ಡೀಸಿ ಕಚೇರಿ, ರಾಜ್ಯ ಸರ್ಕಾರ ಎಂದು ಅಡ್ಡಾಡುತ್ತಲೇ ಇವೆ. ಆದಿವಾಸಿ ಬುಡಕಟ್ಟು ಬಗ್ಗೆ ಸರಕಾರಕ್ಕೆ ಇರುವ ಕಾಳಜಿಯ ಸ್ವರೂಪವನ್ನು ಇದು ವಿವರಿಸುತ್ತದೆ.

ಅಜಲು ಆಚರಿಸಲು ಕಾರಣರಾದ ವಡ್ಡಂಬೆಟ್ಟು ಕಂಬಳದ ವ್ಯವಸ್ಥಾಪಕರ ಮೇಲೆ ಅಜಲು ಆಚರಣೆ ನಿಷೇಧ ಕಾಯಿದೆಯನ್ವಯ ಶೀಘ್ರವೇ ಸರ್ಕಾರ ಕ್ರಿಮಿನಲ್ ಕ್ರಮ ಕೈಗೊಳ್ಳಬೇಕಾಗಿದೆ. ಬಿಜೆಪಿ ಸರ್ಕಾರಕ್ಕೆ ನಿಜಕ್ಕೂ ಇಂತಹ ಕ್ರಮ ಕೈಗೊಳ್ಳುವ ಮನಸ್ಸಿದೆಯಾ ಎಂಬುದೇ ಈಗ ಗಂಭೀರವಾದ ಪ್ರಶ್ನೆ.

ತ್ವರಿತವಾಗಿ ಹದಗೆಡುತ್ತಿರುವ ಆರ್ಥಿಕ ಸನ್ನಿವೇಶದಲ್ಲಿ ಯುಪಿಎ-2 ಸರಕಾರ ತನ್ನ ಗಮನವನ್ನು ನಮ್ಮ ಜನಗಳ ಕೊಳ್ಳುವ ಸಾಮರ್ಥ್ಯವನ್ನು ವಿಸ್ತರಿಸುವತ್ತ ಕೇಂದ್ರೀಕರಿಸಿ ಆಂತರಿಕ ಬೇಡಿಕೆಯನ್ನು ಹೆಚ್ಚಿಸುವ ಬದಲು, ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ಮತ್ತು ಕಾರ್ಪೊರೇಟ್ ಭಾರತದ ಗರಿಷ್ಟ ಲಾಭಗಳಿಗೆ ಅವಕಾಶಗಳನ್ನು ವಿಸ್ತರಿಸುವ ತವಕದಲ್ಲಿ 'ಮುಂದಿನ ಪೀಳಿಗೆಯ ಸುಧಾರಣೆ'ಗಳ ನಿಟ್ಟಿನಲ್ಲಿ ಸಾಗಿದೆ. ಅದಕ್ಕೆ ಬಿಜೆಪಿಯ ಸಂಪೂರ್ಣ ಸಹಕಾರವೂ ಇದೆ. ಆದ್ದರಿಂದ ಲೋಕಪಾಲದ ಸ್ಥಾಪನೆಗೆ ಒಂದು ಪರಿಣಾಮಕಾರಿ ಶಾಸನವನ್ನು ಕೈಗೊಳ್ಳುವಂತೆ ಮತ್ತು ಆ ಬೃಹತ್ ಪ್ರಮಾಣದ ಹಣವನ್ನು ಜನತೆಯ ಕಲ್ಯಾಣದತ್ತ ತಿರುಗಿಸುವಂತೆ ಯುಪಿಎ ಸರಕಾರದ ಮೇಲೆ ಒತ್ತಡಗಳನ್ನು ಮುಂದುವರೆಸುತ್ತಲೇ, ಸರಕಾರ ತನ್ನ ಸದ್ಯದ ಅರ್ಥಿಕ ಸುಧಾರಣೆಗಳ ದಿಕ್ಕನ್ನು ಬದಲಿಸುವಂತೆ ಕೂಡ ಒತ್ತಡಗಳನ್ನು ಹಾಕುವುದನ್ನು ಮರೆತು ಬಿಡಬಾರದು.

ಪರಿಣಾಮಕಾರಿ ಲೋಕಪಾಲ ವ್ಯವಸ್ಥೆಯೊಂದಿಗೆ ಆರ್ಥಿಕ ಧೋರಣೆಯ ದಿಕ್ಕು ಬದಲಾಯಿಸಲೂ ಹೋರಾಟ ಅಗತ್ಯ

'ಪೀಪಲ್ಸ್ ಡೆಮಾಕ್ರೆಸಿ' ವಾರಪತ್ರಿಕೆಯ ಡಿಸೆಂಬರ್ 22ರ, ಸಂಚಿಕೆಯ ಸಂಪಾದಕೀಯ

ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರವನ್ನು ಎದುರಿಸುವ ಕ್ರಿಯೆಯನ್ನು ಆರಂಭಿಸಲಿಕ್ಕಾಗಿ ಲೋಕಪಾಲ ಶಾಸನವನ್ನು ತರಬೇಕೆಂಬ ತುರ್ತಿನ ಸಹಜ ಕಾಳಜಿಯ ನಡುವೆ, ಈಗಿರುವ ಗಂಭೀರ ಆರ್ಥಿಕ ಸನ್ನಿವೇಶವನ್ನು ಮತ್ತು ವಿಶಾಲ ಭಾರತೀಯ ಜನಸಮೂಹಗಳನ್ನು ಇನ್ನಷ್ಟು ಶಕ್ತಿಗುಂದಿಸಲಿರುವ ಒಂದು ತೀಕ್ಷ್ಣ ಬಿಕ್ಕಟ್ಟಿನ ಮುನ್ನೆಚ್ಚರಿಕೆಗಳನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ.

ಯುಪಿಎ-2 ಸರಕಾರ, ತ್ವರಿತವಾಗಿ ಹದಗೆಡುತ್ತಿರುವ ಆರ್ಥಿಕ ಸನ್ನಿವೇಶದಲ್ಲಿ ಕಾರ್ಪೊರೇಟ್ ಭಾರತದ ಮಂದಿಯಲ್ಲಿ ತುಸು ವಿಶ್ವಾಸ ತುಂಬುವ ಪ್ರಯತ್ನ ನಡೆಸಲು ತನ್ನ 'ಸಂಕಟ ಹರಣ' ಹಣಕಾಸು ಮಂತ್ರಿಗಳನ್ನು ಹಚ್ಚಿತು. ಕೈಗಾರಿಕಾ ಉತ್ಪಾದನೆಯ ಸೂಚ್ಯಂಕ ಅಕ್ಟೋಬರ್ 2011ರಲ್ಲಿ ಸೊನ್ನೆಯ ಕೆಳಗೆ 5.1 ಶೇ.ಕ್ಕೆ ಇಳಿದಿದೆ. ರೂಪಾಯಿ ಮೌಲ್ಯ ಇದುವರೆಗಿನ ಚಾರಿತ್ರಿಕ ದಾಖಲೆಯಾದ ಡಾಲರಿಗೆ 54ರೂ.ನ್ನು ಕೂಡ ಬೇಧಿಸಿ ಕೆಳಗೆ ಕುಸಿಯುತ್ತಲೇ ಇದೆ. ರಫ್ತುಗಳು, ರೂಪಾಯಿ ಬೆಲೆ ಇಳಿಯುತ್ತಿದ್ದರೂ, ಅದರ ಸಹಜ ಪ್ರಯೋಜನ ಪಡೆಯಲಾರದೆ ವಿಪರೀತ ಇಳಿಕೆ ತೋರುತ್ತಿವೆ. ಜಿಡಿಪಿ ಬೆಳವಣಿಗೆಯ ಅಂದಾಜನ್ನು ತೀವ್ರವಾಗಿ ಕೆಳಗಿಳಿಸಲಾಗುತ್ತಿದೆ. ರಾಜ್ಯ ಸಭೆಯಲ್ಲಿ ಇನ್ನೂ 63,180 ಕೋಟಿ ರೂ.ಗಳ ಹೆಚ್ಚಿನ ಹಣವನ್ನು ಮಂಜೂರು ಮಾಡಿದ ಹಣ ವಿನಿಯೋಗ ಮಸೂದೆಯ ಮೇಲಿನ ಚರ್ಚೆಗೆ ಉತ್ತರಿಸುತ್ತ ಹಣಕಾಸು ಮಂತ್ರಿಗಳು ಭಾರತಕ್ಕೆ "ಬಿಕ್ಕಟ್ಟನ್ನು ಮೀರಿ ನಿಂತು ಮತ್ತೆ ಪುಟಿದೇಳುವ ಸಾಮರ್ಥ್ಯ ಇದೆ" ಎಂದರು. ಭಾರತದ ಆರ್ಥಿಕತೆ ಮತ್ತೆ ಬೆಳವಣಿಗೆಯ ಹಾದಿಗೆ ತ್ವರಿತವಾಗಿ ಮರಳುವಂತೆ ಮಾಡುವ ಪ್ರಮುಖ ಅಂಶವೆಂದರೆ ಇನ್ನಷ್ಟು ಹಣಕಾಸು ಉದಾರೀಕರಣದ ಸುಧಾರಣೆಗಳ ಮೇಲೆ ಒಮ್ಮತವನ್ನು ಕಟ್ಟಿ ಬೆಳೆಸುವುದು ಎಂದು ಅವರು ಒತ್ತಿ ಹೇಳಿದರು. ಹೀಗೆ ಹೇಳುವಾಗ ಅವರು ಇಂತಹ ಕ್ರಮಗಳಿಗೆ ಬೆಂಬಲ ಕೊಡಿ ಎಂದು ಪ್ರಧಾನ ಪ್ರತಿಪಕ್ಷ ಬಿಜೆಪಿಗೆ ಮನವಿ ಮಾಡಿಕೊಳ್ಳುತ್ತಿದ್ದಾರೆಂಬುದು ಸ್ಪಷ್ಟ. ಈ ಸುಧಾರಣೆಗಳಲ್ಲಿ ಹಲವು ಹಿಂದಿನ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ಯೋಚಿಸುತ್ತಿದ್ದವುಗಳೇ ಎಂಬುದನ್ನು ನೆನಪಿಸುವಲ್ಲಿಯೂ ಅವರು ವಿಳಂಬ ಮಾಡಲಿಲ್ಲ.

ಬಿಜೆಪಿಯಿಂದಲೂ ಇಂತಹ ಸಹಕಾರ ತಕ್ಷಣ ಹೊಮ್ಮಿಬರುತ್ತಿದೆ ಎಂಬುದೂ ಖಚಿತ. ರಾಜ್ಯಸಭೆಯಲ್ಲಿ ಎಲ್‌ಐಸಿ(ತಿದ್ದುಪಡಿ) ಮಸೂದೆಯಲ್ಲಿ ಸಾರ್ವಜನಿಕ ವಲಯದ ಜೀವ ವಿಮೆಯಲ್ಲಿ ಪಾಲಿಸಿದಾರರಿಗೆ ಹಂಚುವ ಲಾಭಾಂಶವನ್ನು 95ಶೇ.ದಿಂದ 90ಶೇ.ಕ್ಕೆ ಇಳಿಸುವ ಅಂಶಕ್ಕೆ ಸಿಪಿಐ(ಎಂ) ಮಂಡಿಸಿದ ತಿದ್ದುಪಡಿಯ ಮೇಲಿನ ಮತದಾನದಲ್ಲಿ ಬಿಜೆಪಿ ಯುಪಿಎ-2 ಸರಕಾರದ ರಕ್ಷಣೆಗೆ ಬಂದಿರದಿದ್ದರೆ ಅದು ಸೋತು ಹೋಗುತ್ತಿತ್ತು. ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಪೆನ್ಶನ್ ನಿಧಿಯ ಖಾಸಗೀಕರಣ ಮತ್ತು ಇನ್ನಷ್ಟು ಬ್ಯಾಂಕಿಂಗ್ ಸುಧಾರಣೆಗಳನ್ನು ಕುರಿತ ಶಾಸನಗಳಲ್ಲಿ ಪರಸ್ಪರ ಸಹಕರಿಸಲು ಒಪ್ಪಿಕೊಂಡಿವೆ.

ಎಲ್ಲವೂ ಕಾರ್ಪೊರೇಟುಗಳಿಗಾಗಿ

ಈ ಸುಧಾರಣೆಗಳ ಉದ್ದೇಶ ಭಾರತಕ್ಕೆ ಬಂದು ಹೆಚ್ಚಿನ ಲಾಭ ಗಿಟ್ಟಿಸಲು ಅಂತರ್ರಾಷ್ಟ್ರೀಯ ಹೂಡಿಕೆದಾರರು ಮತ್ತು ವಿದೇಶಿ ಹಣಕಾಸು ಬಂಡವಾಳವನ್ನು ಓಲೈಸುವುದು. ಈ ರೀತಿ ಹರಿದು ಬರುವ ವಿದೇಶಿ ಬಂಡವಾಳ ಭಾರತದ ಹಣಕಾಸು ಬ್ಯಾಲೆನ್ಸ್ ಶೀಟುಗಳನ್ನು ಸುಂದರಗೊಳಿಸುತ್ತವೆ, ಕಾರ್ಪೊರೇಟ್ ಭಾರತದ ಮಂದಿಯ ವಿಶ್ವಾಸವನ್ನು ಮತ್ತು ಶೇರು ಸೂಚ್ಯಂಕವನ್ನು ಹೆಚ್ಚಿಸುತ್ತದೆ ಎಂಬುದು ಇವರ ನಿರೀಕ್ಷೆ. ಇದು 'ಫೀಲ್ ಗುಡ್' ಅಂಶವನ್ನು ಅಂದರೆ 'ಚೆನ್ನಾಗಿದೆ ಎಂಬ ಭಾವನೆ'ಯನ್ನು ಉಂಟು ಮಾಡುತ್ತದಂತೆ.



ಕೃಪೆ: ದಿ. ಹಿಂದೂ

ಆದರೇನು ಮಾಡುವುದು, ಇವೆಲ್ಲ 'ಆಮ್ ಆದ್ಮಿ'ಯ ಜೀವನಾಧಾರವನ್ನು ಉತ್ತಮಪಡಿಸುವಲ್ಲಿ ಯಾವ ಉಪಯೋಗಕ್ಕೂ ಬರುವಂತದ್ದಲ್ಲ. ತದ್ವಿರುದ್ಧವಾಗಿ, ಈ ರೀತಿ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ತನ್ನ ಲಾಭವನ್ನು ಗರಿಷ್ಟಗೊಳಿಸಿಕೊಳ್ಳಲು ಬಹಳಷ್ಟು ದಾರಿಗಳ ಸೃಷ್ಟಿ ನಮ್ಮ ವಿಶಾಲ ಜನಸಮೂಹಗಳನ್ನು ಇನ್ನಷ್ಟು ಬಡವರಾಗಿಸುತ್ತದಷ್ಟೇ.

ಅಲ್ಲದೆ, ವೆಚ್ಚದ ಬಾಬ್ತುಗಳ ಮಟ್ಟ ಏರುತ್ತಿರುವುದರಿಂದ ಹಣಕಾಸು ಕೊರತೆ ಹೆಚ್ಚುತ್ತಿದ್ದು ಬಜೆಟ್ ಹಾಕಿರುವ ಮಿತಿಯನ್ನು ದಾಟುತ್ತಿರುವುದರಿಂದ ಆತಂಕಗೊಂಡಿರುವ ಸರಕಾರ, ಇಂತಹ ಸುಧಾರಣೆಗಳಿಂದ ಈ ಪ್ರವೃತ್ತಿಗೆ ತಡೆ ಬೀಳುತ್ತದೆ ಎಂಬ ನಿರೀಕ್ಷೆ ಇಟ್ಟುಕೊಂಡಿದೆ. ವಿದೇಶಿ ಬಂಡವಾಳದ ಹರಿವು ಜಮಾ-ಖರ್ಚು ಪುಸ್ತಕಗಳಲ್ಲಿ ಒಂದು ಆರೋಗ್ಯಕರ ಚಿತ್ರವನ್ನು ಕೊಡಬಹುದು, ಆದರೆ ಅದು ನಮ್ಮ ಆರ್ಥಿಕದ ಮೂಲಭೂತ ಅಂಶಗಳಿಗೆ ಹಾನಿಯುಂಟು ಮಾಡುತ್ತದೆ. ಈ ಸುಧಾರಣೆಗಳು ಶೇರು ಸೂಚ್ಯಂಕಗಳನ್ನು ಮೇಲಕ್ಕೆತ್ತಬಹುದು. ಆದರೆ ಇದು ಮಾರುಕಟ್ಟೆಯಲ್ಲಿ ಬಂಡವಾಳ ತೊಡಗಿಸಿ ಹೆಚ್ಚಿನ ಲಾಭ ಗಿಟ್ಟಿಸಲು ಕಾರ್ಪೊರೇಟ್ ಭಾರತಕ್ಕೆ ಅವಕಾಶ ನೀಡಿದರೂ, ಬಹುಪಾಲು ಜನಸಮೂಹಗಳ ಜೀವನಾಧಾರವನ್ನೇನೂ ಉತ್ತಮ ಪಡಿಸದು.

ಸಬ್ಸಿಡಿ ಧನರಿಗಲ್ಲ, ಜನರಿಂದಲೇ

ಸಂಸತ್ತಿನಿಂದ ಹೆಚ್ಚಿನ ಖರ್ಚುಗಳಿಗೆ ಮಂಜೂರಾತಿ ಕೇಳುತ್ತ ಹಣಕಾಸು ಮಂತ್ರಿಗಳು ಮುಖ್ಯವಾಗಿ ದೇಶದಲ್ಲಿ ಇಂಧನಗಳ ಆಮದು ಖರ್ಚು ಮತ್ತು ಬೆಳೆಯುತ್ತಿರುವ ಸಬ್ಸಿಡಿಗಳ ಒತ್ತಡಗಳ ಬಗ್ಗೆ ಮಾತಾಡಿದರು. ವಾರ್ಷಿಕ ಸಬ್ಸಿಡಿ ಖರ್ಚುಗಳು ಒಂದು ಲಕ್ಷ ಕೋಟಿ ರೂ.ಗಳನ್ನೂ ದಾಟುತ್ತಿದೆ ಎಂದು ಗೋಳಾಡಿದರು. ತಮಾಷೆಯೆಂದರೆ, ಕೇಂದ್ರ ಖಜಾನೆಗೆ ಈ ವರ್ಷ ಇದುವರೆಗೆ ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ತೆರಿಗೆಗಳ ರೂಪದಲ್ಲಿ 1.3 ಲಕ್ಷ ಕೋಟಿ ರೂ.ಗಳ ಆದಾಯವನ್ನು ಬಾಚಿಕೊಂಡಿರುವ ಬಗ್ಗೆ ಸಂಸತ್ತಿನಲ್ಲಿ ಪ್ರಶ್ನಿಸಿದಾಗ ಅವರು ಮೌನವಾಗಿದ್ದರು, ವಾಸ್ತವವಾಗಿ ಸ್ಪಷ್ಟೀಕರಣ ನೀಡಲು ನಿರಾಕರಿಸಿದರು. ಅಂದರೆ ಇದು ಬಡವರಿಗೆ ನೀಡುವ ಸಬ್ಸಿಡಿಗಳನ್ನೂ ಮೀರುವ ಆದಾಯ. ಇವುಗಳಲ್ಲಿ ಬಹುಪಾಲು ಪೆಟ್ರೋಲಿಯಂ ಉತ್ಪನ್ನಗಳ ದರಗಳನ್ನು ಏರಿಸಿರುವುದರಿಂದ ಗಳಿಸಿರುವ ಆದಾಯ; ಇವುಗಳ ಹೊರೆಗಳನ್ನು ಅಂತಿಮವಾಗಿ ಜನರೇ ಹೊರಬೇಕು. ಅಂದರೆ, ಸರಕಾರ ಜನರಿಗೆ ಸಬ್ಸಿಡಿ ಕೊಡುವ ಬದಲು, ನಿಜವಾಗಿ, ಜನರೇ ಸರಕಾರಕ್ಕೆ 30,000 ಕೋಟಿ ರೂ.ಗಳಷ್ಟು ಸಬ್ಸಿಡಿ ಕೊಡುತ್ತಿದ್ದರೆಂದಾಗುತ್ತದೆ.

ಈ 'ಮುಂದಿನ ಪೀಳಿಗೆಯ ಸುಧಾರಣೆಗಳ' ಮೂಲಕ ಹೆಚ್ಚಿನ ಲಾಭಗಳಿಂದಾಗಿ ಕಾರ್ಪೊರೇಟ್ ಭಾರತದ ಮಂದಿಯ ಕೈಗಳಲ್ಲಿ ಶೇಖರಣೆಯಾಗುವ ಬಂಡವಾಳವನ್ನು ಅವರು ಹೂಡಿಕೆಗಳಿಗೆ ಬಳಸುತ್ತಾರೆ, ಅದು ಜಿಡಿಪಿ ವೃದ್ಧಿಗೆ ಉತ್ತೇಜನೆ ಕೊಡುತ್ತದೆ ಎಂಬ ನಿರೀಕ್ಷೆ ಸರಕಾರದ್ದು. ಆದರೆ ಇದು, ಇಂತಹ ಹೂಡಿಕೆಗಳು ತಂತಾನೇ ಬೆಳವಣಿಗೆಗೆ ಹಾದಿ ಮಾಡಿಕೊಡುತ್ತವೆ ಎಂಬ ತಪ್ಪು ಕಲ್ಪನೆಯ ಮೇಲೆ ನಿಂತಿದೆ. ಇಂತಹ ಹೂಡಿಕೆಗಳಿಂದ ಉತ್ಪಾದನೆಯಾದದ್ದು ಮಾರಾಟವಾದರೆ ಮಾತ್ರವೇ ಬೆಳವಣಿಗೆ ಸಂಭವಿಸುತ್ತದೆ ಎಂಬ ಸಂಗತಿಯನ್ನು ಗಮನಿಸದಿರುವುದೇ ಇದರಲ್ಲಿರುವ ಪ್ರಮುಖ ತಪ್ಪು. ಆದರೆ ಆ ಉತ್ಪಾದನೆಗಳು ಮಾರಾಟವಾಗಬೇಕಾದರೆ ಅವಕ್ಕೆ ಬೇಡಿಕೆ ಉಂಟಾಗಬೇಕು. ಅದಕ್ಕೆ ಜನಗಳ ಕೈಗಳಲ್ಲಿ ಕೊಳ್ಳುವ ಸಾಮರ್ಥ್ಯ ಬರಬೇಕು.

ಆದರೆ ಜನಗಳ ಈ ಕೊಳ್ಳುವ ಸಾಮರ್ಥ್ಯವೇ, ಎಲ್ಲ ಜೀವನಾವಶ್ಯಕ ಸರಕುಗಳ ಬೆಲೆಗಳ ನಿರಂತರ ಏರಿಕೆಗಳಿಂದಾಗಿ ತೀವ್ರವಾಗಿ ಕುಸಿಯುತ್ತಿದೆ. ಆಂತರಿಕ ಬೇಡಿಕೆ ಈ ರೀತಿ ಕುಂಠಿತವಾಗಿರುವುದೇ ಸರಕು ಉತ್ಪಾದನೆಯ ಬೆಳವಣಿಗೆ ದರದಲ್ಲಿ, ಮತ್ತು ಅದರ ಪರಿಣಾಮವಾಗಿ ಕೈಗಾರಿಕಾ ಉತ್ಪಾದನೆಯ ಸೂಚ್ಯಂಕದಲ್ಲಿ ತೀವ್ರ ಇಳಿಕೆಗೆ ಬಹುಮಟ್ಟಿಗೆ ಕಾರಣ.

ಏಕೆ ಈ ಬಿಕ್ಕಟ್ಟು?

ಸರಕಾರ ತನ್ನ ಗಮನವನ್ನು ನಮ್ಮ ಜನಗಳ ಕೊಳ್ಳುವ ಸಾಮರ್ಥ್ಯವನ್ನು ವಿಸ್ತರಿಸುವತ್ತ ಕೇಂದ್ರೀಕರಿಸಿ ಆಂತರಿಕ ಬೇಡಿಕೆಯನ್ನು ಹೆಚ್ಚಿಸದಿದ್ದರೆ, ಹೂಡಿಕೆಗೆ ಲಭ್ಯವಾಗುವ ಬಂಡವಾಳವನ್ನು ಒದಗಿಸಲು ಎಷ್ಟೇ ಪ್ರಯತ್ನಪಟ್ಟರೂ ಅದರಿಂದ ಬೆಳವಣಿಗೆ ಉಂಟು ಮಾಡುವುದು ಸಾಧ್ಯವಾಗುವುದಿಲ್ಲ. ಇದು ಸರಕಾರ ಬಹಳ ಅಗತ್ಯವಿರುವ ನಮ್ಮ ಮೂಲರಚನೆಗಳನ್ನು ಕಟ್ಟಲು ಸಾರ್ವಜನಿಕ ಹೂಡಿಕೆಗಳನ್ನು ದೊಡ್ಡ ಪ್ರಮಾಣದಲ್ಲಿ ಕೈಗೊಂಡರೆ ಮಾತ್ರವೇ ಸಾಧ್ಯ. ಇದು ಹೆಚ್ಚಿನ ಉದ್ಯೋಗಾವಕಾಶಗಳನ್ನು ನಿರ್ಮಿಸಿ, ಆಮೂಲಕ ಆಂತರಿಕ ಬೇಡಿಕೆಯನ್ನು ವಿಸ್ತರಿಸುತ್ತದೆ. ಇದನ್ನು ಮಾಡುವ ಬದಲು, ಯುಪಿಎ-2 ಸರಕಾರ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ಮತ್ತು ಕಾರ್ಪೊರೇಟ್ ಭಾರತದ ಗರಿಷ್ಟ ಲಾಭಗಳಿಗೆ ಅವಕಾಶಗಳನ್ನು

ಪುಟ 15ಕ್ಕೆ

೬೦ ದಿನ ಸಮ್ಮಿಶ್ರ ಸರ್ಕಾರಗಳ ಸಂದರ್ಭಕ್ಕೂ ಅಥವಾ 2008ರ ನಂತರ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರದ ಈ ಅವಧಿಯಲ್ಲಿಯೂ ಜಿಲ್ಲೆಯನ್ನು ಅಭಿವೃದ್ಧಿಯತ್ತ ತೆಗೆದುಕೊಂಡು ಹೋಗುವ ಪ್ರಯತ್ನಗಳು ಹೆಚ್ಚು ನಡೆಯಲಿಲ್ಲ. ಕೈಗಾರಿಕೆ, ಕೃಷಿ, ಆರೋಗ್ಯ, ಶೈಕ್ಷಣಿಕ ರಂಗಗಳಲ್ಲಿ ಜಿಲ್ಲೆಯನ್ನು ಆರ್ಥಿಕವಾಗಿ ಮುನ್ನೆಡುಸುವಂತಹ ಯಾವುದೇ ವಿಶೇಷ ಯೋಜನೆ ಅಥವಾ ಘಟಕಗಳು ಬರಲಿಲ್ಲ.

ಕುಡಿಯುವ ನೀರಿನ ವಿಚಾರದಲ್ಲಿ ಕೊಳವೆ ಬಾವಿಗಳನ್ನು ಕೊರೆಯಲು ಸಾಕಷ್ಟು ಹಣ ಖರ್ಚು ಮಾಡುತ್ತಿದ್ದರೂ ನಂತರದ ಕೆಲಸಗಳಾದ.ವಿದ್ಯುತ್ ಸಂಪರ್ಕ, ಮೋಟಾರ್ ಪೈಪ್‌ಲೈನ್ ಅಳವಡಿಕೆ ಸಂದರ್ಭದಲ್ಲಿ ನಿರ್ಲಕ್ಷತೆ ತೋರುತ್ತಿದ್ದು, ನೀರಿನ ಸಮಸ್ಯೆ ನಿರಂತರವಾಗಿ ಕಾಡುತ್ತಿದೆ. ಶಾಶ್ವತ ಕುಡಿಯುವ ನೀರಿನ ಯೋಜನೆಗಳಾದ ಯರ್ರಗೋಳ್ ಮತ್ತು ಮಾರ್ಕಂಡೇಯ ಯೋಜನೆಗಳಿಗೆ ಹಣ ಬಿಡುಗಡೆಯಾಗದೆ ಕೆಲಸಗಳು ಪ್ರಗತಿಯಾಗಲಿಲ್ಲ. ಹತ್ತಾರು ವರ್ಷಗಳಿಂದ ಜಿಲ್ಲೆಗೆ ಶಾಶ್ವತ ನೀರಾವರಿ ಯೋಜನೆಗಳು ಜಾರಿಗೊಳಿಸುವ ಬಗ್ಗೆ ಸರ್ಕಾರದ ಮೇಲೆ ನಿರಂತರ ಒತ್ತಡ ಹೇರುತ್ತಿದ್ದರು. ಸರ್ಕಾರ ಇಚ್ಛಾಶಕ್ತಿ ತೋರುತ್ತಿಲ್ಲ. ಜಿಲ್ಲೆಯ ಯಾವುದೇ ಪಕ್ಷದ ಶಾಸಕರು ಈ ವಿಚಾರವನ್ನು ಗಂಭೀರವಾಗಿ ತೆಗೆದುಕೊಳ್ಳಲಿಲ್ಲ. ಕೆಲವರು ರಾಜಕೀಯ ವೇದಿಕೆಯನ್ನು ರೂಪಿಸಿಕೊಳ್ಳಲು ಈ ವಿಚಾರದಲ್ಲಿ ಸಮಾವೇಶಗಳನ್ನು ಸಂಘಟಿಸಿದರೆ, ಇನ್ನು ಕೆಲವು ಪ್ರಬಲ ರಾಜಕಾರಣಿಗಳು, ಶಾಶ್ವತ ನೀರಾವರಿ ಬಗ್ಗೆ ಎಂದೂ ಕಿವಿಕೊಡದವರು, ಒಂದು ಸಂದರ್ಭದಲ್ಲಿ ಈ ಯೋಜನೆಗಳ ಬಗ್ಗೆ ಅವಹೇಳನ ಮಾಡ್ತಿದವರು ಅವಕಾಶವಾದಿ ರಾಜಕಾರಣ ಮಾಡಲು ಮುಂದಾಗಿದ್ದಾರೆ. ಈ ಹೋರ್‍ಕಾಟವನ್ನು ಜನರ ಹೋರಾಟವಾಗಿ ಅಥವಾ ಸಮರಶೀಲ ಹೋರಾಟವಾಗಿ ತೆಗೆದುಕೊಂಡು ಅವರಿಗೆ ಹೋಗಲು ಸಾಧ್ಯವಾಗಿಲ್ಲ.

ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಕಳೆದ ನಾಲ್ಕು ವರ್ಷಗಳಿಂದ ಜಾರಿಯಲ್ಲಿದ್ದರೂ, ಜನರ ಕೈಗೆ ಕೆಲಸ ಕೊಡುವ ರೀತಿಯಲ್ಲಿ ಜಿಲ್ಲಾಡಳಿತ ಮುಂದಾಗಲಿಲ್ಲ. ಸಿಪಿಐ(ಎಂ) ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳ ಪ್ರಯತ್ನದಿಂದ ಕೋಲಾರ ತಾಲ್ಲೂಕಿನ ಎರಡು ಹೋಬಳಿಗಳಲ್ಲಿ ಸ್ವಲ್ಪಮಟ್ಟಿಗೆ ಜಾರಿಗೊಳಿಸಲು ಸಾಧ್ಯವಾಗಿದೆ. ಉಳಿಧ ತಾಲ್ಲೂಕುಗಳಲ್ಲಿ ಪ್ರಯತ್ನಗಳು ನಡೆದರೂ ಯಶಸ್ವಿಯಾಗಿ ಮುಂದೆ ಹೋಗಲು ಆಗಿಲ್ಲ. ಇಡೀ ಜಿಲ್ಲೆಯಲ್ಲಿ ಈ ಯೋಜನೆಯ ಪ್ರಯೋಜನ ಕೃಷಿ ಕಾರ್ಮಿಕರಿಗೆ ತಲುಪಿಸದೆ ಚುನಾಯಿತ ಪ್ರತಿನಿಧಿಗಳು, ಗುತ್ತಿಗೆದಾರರು, ಆಡಳಿತಾಧಿಕಾರಿಗಳು ಒಂದಾಗಿ ವ್ಯಾಪಕ ಭ್ರಷ್ಟಾಚಾರ ನಡೆಸಿ ವಿಫಲಗೊಳಿಸಿದ್ದಾರೆ. ರೇಗಾ ಜಾರಿ ಸಮಿತಿಗಳು ಬಲಿಷ್ಠವಾಗಿ ಕಟ್ಟಿರುವ ಹಳ್ಳಿಗಳಲ್ಲಿ ಕೆಲಸ ಕೊಡಿಸುವುದು ಮಾತ್ರವಲ್ಲದೆ ಕೂಲಿ ಕೊಡದಿದ್ದಾಗ ಅದಕ್ಕಾಗಿ ಹೋರಾಟಗಳನ್ನು ನಡೆಸಿ ಕೂಲಿ ಹಣ ಕೊಡಿಸಲು ಸಾಧ್ಯವಾಗಿದೆ.

ಜನಪರ ಹೋರಾಟಗಳ ನೆಲೆ ಕೋಲಾರದಲ್ಲಿ ತಲೆ ಎತ್ತಿ ನಿಂತಿರುವ ಅವಕಾಶವಾದಿ ರಾಜಕಾರಣದ ಸವಾಲು

ಕೋಲಾರ ಜಿಲ್ಲೆ ಹಲವು ಜನಪರ ಚಳುವಳಿಗಳ ನೆಲೆ. ಅಂತಹ ಜಿಲ್ಲೆಯಲ್ಲಿ ಈಗ ಅವಕಾಶವಾದಿ ರಾಜಕಾರಣ ವಿಜೃಂಭಿಸುತ್ತಿದೆ. ಜಿಲ್ಲೆಯ ಜನರ ಬದುಕಿನ ಪ್ರಶ್ನೆಗಳೇನು? ಚಳುವಳಿಯ ಮುಂದಿನ ಸವಾಲುಗಳೇನು? ಸಿಪಿಐ(ಎಂ)ಕೋಲಾರ ಜಿಲ್ಲಾ 14ನೇ ಸಮ್ಮೇಳನ ಈ ಎಲ್ಲಾ ಅಂಶಗಳ ಬಗ್ಗೆ ಚರ್ಚಿಸಿ ಜನ ಚಳುವಳಿಯ ಬಲವರ್ದನೆಗೆ ತೀರ್ಮಾನಿಸಿದೆ

ಕೃಷಿ ಪ್ರಧಾನವಾದ ಈ ಜಿಲ್ಲೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಾರಿಗೊಳಿಸಿದ ಹೊಸ ಆರ್ಥಿಕ ನೀತಿಗಳಿಂದ ಕೃಷಿ ರಂಗದ ಮೇಲೆ ಆದಂತಹ ಪರಿಣಾಮಗಳು ಇಡೀ ರೈತ ಸಮುದಾಯದ ಆಯ್ಕೆಗಳು ಮತ್ತು ಬೇಡಿಕೆಗಳನ್ನು ಬದಲಾಯಿಸಿ ಬಿಟ್ಟಿವೆ. ಕೃಷಿ ಹಲವಾರು ಸಮಸ್ಯೆಗಳಿಂದ ಬಿಕ್ಕಟ್ಟಿಗೆ ಸಿಕ್ಕಿದೆ. ಸಬ್ಸಿಡಿ ಕಡಿತ, ಮುಕ್ತ ಮಾರುಕಟ್ಟೆ ನೀತಿಗಳು ಕೃಷಿ ಮೇಲೆ ಹೂಡುವ ಬಂಡವಾಳ ಏರಿಕೆ ಬೆಲೆ ಕುಸಿತದ ಸಮಸ್ಯೆಗಳಿಂದ ಬಾರಿ ಮುಖ್ಯವಾಗಿ ನಮ್ಮ ಜಿಲ್ಲೆಯಲ್ಲಿ ಕಡಿಮೆ ಮಳೆ ಮತ್ತು ಅಂತರ ಜಲ ಕುಸಿತದಿಂದ ಕೃಷಿರಂಗ ಸಂಕಷ್ಟಕ್ಕೆ ಒಳಗಾಗಿದೆ. ಶೇ. 70% ರಷ್ಟು ಕೃಷಿಯನ್ನೇ ಅವಲಂಬಿಸಿದ್ದ ಜನ ಕೃಷಿಯಿಂದ ದೂರ ಸರಿದು ಅಸಂಘಟಿತ ಕಾರ್ಮಿಕರಾಗಿ ಪರಿವರ್ತನೆಯಾಗುತ್ತಿದ್ದಾರೆ. ಈ ಜಿಲ್ಲೆಯಲ್ಲಿ ದೊಡ್ಡ ರೀತಿಯಲ್ಲಿ ಅಸಂಘಟಿತ ಕಾರ್ಮಿಕ ವರ್ಗ ರೂಪುಗೊಳ್ಳುತ್ತಿದ್ದು, ಗ್ರಾಮೀಣ ಪ್ರದೇಶದ ಜನ ಬೆಂಗಳೂರು ಹಾಗೂ ಇನ್ನಿತರೆ ನಗರಗಳಿಗೆ ಕೆಲಸಕ್ಕಾಗಿ ವಲಸೆ ಹೋಗುತ್ತಿದ್ದಾರೆ.



ರೇಷ್ಮೆ ಹೈನುಗಾರಿಕೆ ಉದ್ದಿಮೆಗಳು ಜಿಲ್ಲೆಯ ಜನರ ಜೀವನಾಡಿಯಾಗಿತ್ತು. ಸರ್ಕಾರಗಳು ಇವುಗಳನ್ನು ರಕ್ಷಣೆ ಮಾಡುವ ಕ್ರಮಗಳನ್ನು ಅನುಸರಿಸದೆ ಮುಕ್ತ ಮಾರುಕಟ್ಟೆ ನೀತಿಗಳ ಜಾರಿ ವಿದೇಶಿ ಉತ್ಪನ್ನಗಳ ಮೇಲಿನ ಸುಂಕ ಕಡಿತದಿಂದ ಇವೆರಡು ಉದ್ದಿಮೆಗಳು ಅಪಾಯದ ಅಂಚಿನಲ್ಲಿವೆ.



ಜಿಲ್ಲೆಯ ಜನತೆಗೆ ಉದ್ಯೋಗವಕಾಶಗಳನ್ನು ಒದಗಿಸಿದ್ದ ಬಿಜಿಎಂಎಲ್ ನ ಮುಚ್ಚುವಿಕೆಯಿಂದ ಅಲ್ಲಿನ ಸಾವಿರಾರು ಜನ ಕೆಲಸವಿಲ್ಲದೆ ತಮ್ಮ ಜೀವನ ಪಾಡಿಗಾಗಿ ನಗರಗಳಿಗೆ ದಿನನಿತ್ಯ ಸಾವಿರಾರು ಸಂಖ್ಯೆಯಲ್ಲಿ ಹೋಗಿ ಬರುತ್ತಿದ್ದಾರೆ. ಚಿನ್ನದ ಗಣಿಯನ್ನು ಕೇಂದ್ರ ಸರ್ಕಾರವೇ ಮತ್ತೆ ಪುನರ್ ಆರಂಭಿಸಬೇಕೆಂದು ರಾಜ್ಯ ಹೈಕೋರ್ಟ್ ತೀರ್ಪು ನೀಡಿದ್ದರೂ. ಅದರ ವಿರುದ್ಧ ಆಡಳಿತ ಮಂಡಳಿ, ಅಧಿಕಾರಿಗಳ ಸಂಘಟನೆ ಸುಪ್ರೀಂ ಕೋರ್ಟ್‌ನಲ್ಲಿ ಕೇಸು ಹಾಕಿದೆ. ಸಿ.ಪಿ.ಐ(ಎಂ) ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳು ಹೋರಾಟ ಸಮಿತಿ ರಚಿಸಿಕೊಂಡು ಚಿನ್ನದ ಗಣಿ ಪುನರ್ ಆರಂಭಕ್ಕೆ ಕಾನೂನು ರೀತಿ ಹೋರಾಟ ನಡೆಸಲು ಮುಂದಾಗಿವೆ.

ಸಾರ್ವಜನಿಕ ಸಂಸ್ಥೆಯಾಗಿರುವ ಬೆಮೆಲ್ ಜಿಲ್ಲೆಯಲ್ಲಿದ್ದು, ಸಾವಿರಾರು ಜನ ಕೆಲಸ ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರದ ಧೋರಣೆಗಳಿಂದ ವಿವಿಧ ಉತ್ಪಾದನಾ ವಸ್ತುಗಳನ್ನು ಹೆಚ್ಚು ಮಾಡುವಂತಹ ಆರ್ಡರ್ಸ್ ಈ ಕಾರ್ಖಾನೆಗೆ ಬರುತ್ತಿಲ್ಲವೆಂದು ಇದರಿಂದ ಮುಂದಿನ ದಿನಗಳಲ್ಲಿ ಇನ್ನಷ್ಟು ಬಿಕ್ಕಟ್ಟಿಗೆ ಸಿಲುಕುವ ಲಕ್ಷಣಗಳು ಕಂಡು ಬರುತ್ತಿದೆ.

ಇತ್ತೀಚೆಗೆ ಗಾರ್ಮೆಂಟ್ಸ್ ಕಾರ್ಖಾನೆಗಳು ಅಲ್ಲಲ್ಲಿ ಸ್ಥಾಪಿತವಾಗುತ್ತಿದ್ದು, ಸಣ್ಣ ಪ್ರಮಾಣದಲ್ಲಿ ಉದ್ಯೋಗಗಳು ಸೃಷ್ಠಿಯಾಗಿದ್ದರೂ, ದೊಡ್ಡ ಸಂಖ್ಯೆಯಲ್ಲಿ ಉದ್ಯೋಗಗಳನ್ನು ಸೃಷ್ಟಿಸಲು ನರಸಾಪುರ ಕೈಗಾರಿಕಾ ಪ್ರದೇಶದಲ್ಲಿ ಹೀರೋಹೊಂಡಾ ಇನ್ನಿತರ ಕಂಪನಿಗಳು ಸ್ಥಾಪಿತವಾಗಲಿದ್ದು, ಕೆಲಸ ಆರಂಭಿಸುವ ಸಿದ್ಧತೆಯಲ್ಲಿವೆ. ಕೈಗಾರಿಕೆಗಳ ಸ್ಥಾಪನೆ ಹೆಸರಿನಲ್ಲಿ ಜಿಲ್ಲೆಯ ಕೆಲವು ಭಾಗಗಳಲ್ಲಿ ಫಲವತ್ತಾದ ಕೃಷಿ ಭೂಮಿಯನ್ನು ವಶಪಡಿಸಿಕೊಳ್ಳಲು ಸರ್ಕಾರ ಮುಂದಾಗಿರುವ ಕ್ರಮ ಸರಿ ಇಲ್ಲ. ಅಂತಹ ಭೂಮಿಗೆ ಸರಿಯಾದ ಪರಿಹಾರದ ಹಣವನ್ನು ನೀಡದೆ ಕೃಷಿಯಿಂದ ಜನರನ್ನು ವಕ್ಕಲೆಬ್ಬಿಸುವ ಪ್ರಯತ್ನಗಳು ನಡೆಯುತ್ತಿದ್ದು, ಇದರ ವಿರುದ್ಧ ಹೋರಾಟಗಳು ಹೆಚ್ಚು ನಡೆಯಬೇಕಾಗಿದೆ.

ಕೃಷಿ ಪ್ರಧಾನವಾದ ಈ ಜಿಲ್ಲೆಯಲ್ಲಿ ಕೃಷಿ ಕಡೆಗಣಿಸಿ ಬೇರೆ ರೀತಿಯಲ್ಲಿ ಅಭಿವೃದ್ಧಿ ಹೊಂದುವುದು ಸುಲಭದ ವಿಷಯವಲ್ಲ. ಕೃಷಿ ಆಧಾರಿತ ಕಾರ್ಖಾನೆಗಳು ಸ್ಥಾಪನೆ ಆಗುವುದು ತುಂಬಾ ಅವಶ್ಯಕತೆ ಇದೆ.

ಒಂದು ಸಂದರ್ಭದಲ್ಲಿ ಬಲಿಷ್ಠವಾಗಿ ಬೆಳೆದಿದ್ದ ದಲಿತ ಚಳಿವಳಿ ಮತ್ತು ಎಡ ಚಳುವಳಿಗಳ ಸಾಮಾಜಿಕ ಹೋರಾಟಗಳು ಹಾಗೂ ಪ್ರಗತಿಪರ ಆಲೋಚನೆಗಳಿಗೆ, ಚಿಂತನೆಗಳಿಗೆ ಕೊರತೆ ಇಲ್ಲದ ಈ ಜಿಲ್ಲೆಯಲ್ಲಿ ಆಗಾಗ ಜಾತಿ ಸಂಘರ್ಷಗಳು ನಡೆಯುತ್ತಾ ಬಂದಿವೆ. ಇಂತಹ ಸಂದರ್ಭದಲ್ಲಿ ಸಿಪಿಐ(ಎಂ) ಪಕ್ಷ ಮಧ್ಯ ಪ್ರವೇಶ ಮಾಡುತ್ತಾ ಬಂದಿದೆ.

ಕಳೆದ ನಾಲ್ಕು ವರ್ಷಗಳಲ್ಲಿ ದಲಿತರ ಮೇಲೆ ದಬ್ಬಾಳಿಕೆ ದೌರ್ಜನ್ಯಗಳು ನಡೆದ ಸಂದರ್ಭದಲ್ಲಿ ಪಕ್ಷ ಮಧ್ಯ ಪ್ರವೇಶ ಮಾಡಿದೆ. ಮಾಲೂರು ತಾಲ್ಲೂಕಿನಲ್ಲಿ ನಡೆದ ಕೊಲೆ, ದಲಿತರ ಭೂಮಿ ಪ್ರಶ್ನೆ ದಲಿತರಿಗೆ ಗ್ರಾಮಗಳಲ್ಲಿ ಬಹಿಷ್ಕಾರ ಮಾಡಿದಾಗ ಪಕ್ಷ ಆ ಸ್ಥಳ ಮತ್ತು ಗ್ರಾಮಗಳಿಗೆ ಬೇಟಿ ನೀಡಿ ಅವರಿಗೆ ನ್ಯಾಯ ಕೊಡಿಸಲು ಹೋರಾಟಗಳನ್ನು ರೂಪಿಸಿದೆ. ಹಲವು ಸಂದರ್ಭಗಳಲ್ಲಿ ಅವರ ಜೊತೆ ಜಂಟಿ ಹೋರಾಟಗಳಲ್ಲಿ ಭಾಗಿಯಾಗಿದೆ.

ಸರ್ಕಾರದವರು ನೀಡುವ ಸುಳ್ಳು ಅಂಕಿ-ಅಂಶಗಳ ಜಾಹಿರಾತುಗಳಿಂದ ಮೇಲ್ಜಾತಿಯ ಕೆಲವು ಪ್ರತಿಗಾಮಿಗಳಲ್ಲಿ ಸರ್ಕಾರದ ಹಣ ದಲಿತರಿಗೆ ಹೆಚ್ಚು ವೆಚ್ಚವಾಗುತ್ತದೆ ಎಂಬ ಹುಸಿ ಭ್ರಮೆ ಉಂಟಾಗಿ ದಲಿತ ವಿರೋಧಿ ಧೋರಣೆಯಿಂದ ಇವರು ಜಾತಿವಾರು ಸಂಘಗಳ ಮೂಲಕ ಆಗಾಗ ಪ್ರತಿಭಟನೆ, ಸಮಾವೇಶಗಳನ್ನು ಸಂಘಟಿಸಿದ್ದಾರೆ. ಸಮಾಜದ ಅಭಿವೃದ್ಧಿಗಾಗಿ, ಜಾತಿ ನಿವಾರಣೆಗಾಗಿ, ಅಸ್ಪೃಶ್ಯತೆ ವಿರುದ್ಧ ಸಾಮಾಜಿಕ ನ್ಯಾಯಕ್ಕಾಗಿ ಹೋರಾಟಗಳನ್ನು ನಡೆಸಿದ ಬಸವಣ್ಣ, ಕನಕದಾಸ, ವಾಲ್ಮೀಕಿ ಹೀಗೆ ಹಲವು ಸಮಾಜ ಸುಧಾರಕರನ್ನು ಅವರವರ ಜಾತಿಗೆ ನಾಯಕ, ದೇವರು ಎನ್ನುವ ರೀತಿಯಲ್ಲಿ ಬಿಂಬಿಸಲಾಗುತ್ತಿದೆ. ಇನ್ನು ಮುಂದುವರೆದು ಜನ ಆರಾಧಿಸುವ ದೇವರುಗಳು ಒಂದೊಂದು

ಪುಟ 12 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಚಿನ್ನದ ಗಣಿಯನ್ನೇಕೆ ಪುನರಾರಂಭ ಮಾಡುವುದಿಲ್ಲ !!!
ಅಪಾರ ಚಿನ್ನ ಸಿಗುವುದಿದ್ದರೂ, ಕೋರ್ಟ್ ಆದೇಶವಿದ್ದರೂ
ಸಿಪಿಐ(ಎಂ) ಕೋಲಾರ ಜಿಲ್ಲಾ ಸಮ್ಮೇಳನದ ಪ್ರಶ್ನೆ

ವರದಿ: ಎಂ.ವಿಜಯಕೃಷ್ಣ

ಕೋಲಾರ ಚಿನ್ನದ ಗಣಿಯನ್ನು ಸರ್ಕಾರವೇ ಪುನರ್ ಆರಂಭಿಸಲು ಒತ್ತಾಯಿಸಿ, ಜಿಲ್ಲೆಗೆ ಶಾಶ್ವತ ನೀರಾವರಿ ಯೋಜನೆ ಜಾರಿಗೆ ಒತ್ತಾಯಿಸಿ ಮತ್ತು ಭ್ರಷ್ಟ ರಾಜಕೀಯವನ್ನು ವಿರೋಧಿಸಿ, ಜನಪರ ರಾಜಕಾರಣಕ್ಕಾಗಿ ಒತ್ತಾಯಿಸಿ ಡಿಸೆಂಬರ್ 18, 19 ರಂದು ಕೆಜಿಎಫ್ ನಗರದಲ್ಲಿ ನಡೆದ ಸಿಪಿಐ(ಎಂ) ಪಕ್ಷದ ಕೋಲಾರ ಜಿಲ್ಲಾ 14ನೇ ಸಮ್ಮೇಳನ ಯಶಸ್ವಿಯಾಗಿ ನಡೆಯಿತು.

ಸಮ್ಮೇಳನಕ್ಕೆ ಮುನ್ನ ಜಿಲ್ಲೆಯ ವಿವಿಧ ಕಡೆಗಳಿಂದ ಬಂದಿದ್ದ ಸಾವಿರಾರು ಮಂದಿಯ ಬೃಹತ್ ರ್‍ಯಾಲಿಯು ಜ್ಯೋತಿಬಸು ನಗರ (ಕೆಜಿಎಫ್ ನಗರ)ದ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು. 14ನೇ ಜಿಲ್ಲಾ ಸಮ್ಮೇಳನದ ಪ್ರಯುಕ್ತ 14 ಪಕ್ಷದ ಧ್ವಜಗಳನ್ನು ಹಿಡಿದು ಶಿಸ್ತು ಬದ್ಧವಾಗಿ ಸಾಗಿದ ಮೆರವಣಿಗೆಯಲ್ಲಿ ಅರ್ಧಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸಿದ್ದು ವಿಶೇಷ. ಮೆರವಣಿಗೆಯ ಮಧ್ಯೆ ಅಲ್ಲಲ್ಲಿ ಭಾರೀ ದೊಡ್ಡ ಗಾತ್ರದ ಧ್ವಜಗಳು ಆಕರ್ಷಣೆಯಾಗಿತ್ತು. ಸಮ್ಮೇಳನದ ಘೋಷಣೆಗಳು ಮತ್ತು ಸರ್ಕಾರದ ಜನವಿರೋಧಿ ನೀತಿಗಳ ವಿರುದ್ಧ ಘೋಷಣೆಗಳು ಮುಗಿಲು ಮುಟ್ಟಿತ್ತು.

ನೆಹರು ಮೈದಾನದಲ್ಲಿ ನಡೆದ ಬಹಿರಂಗ ಸಭೆಯನ್ನು ಉದ್ಘಾಟಿಸಿದ ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಕಾಂ॥ವಿ.ಜೆ.ಕೆ.ನಾಯರ್ ಮಾತನಾಡಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬಡವರ ಪರವಾದ ಕಾರ್ಯಕ್ರಮಗಳನ್ನು ಜಾರಿಗೊಳಿಸದೇ ಶ್ರೀಮಂತರು ಮತ್ತು ಕಾರ್ಪೋರೇಟ್ ಕಂಪನಿಗಳಿಗೆ ಭಾರೀ ಪ್ರಮಾಣದಲ್ಲಿ ತೆರಿಗೆ ವಿನಾಯಿತಿ ನೀಡುತ್ತಿಗಿವೆ. ಕಳೆದ ಮೂರು ವರ್ಷಗಳಲ್ಲಿ ಕೇಂದ್ರ ಸರ್ಕಾರ 21 ಲಕ್ಷ ಕೋಟಿಯಷ್ಟು ತೆರಿಗೆ ವಿನಾಯಿತಿಯನ್ನು ನೀಡಿದೆ. ಇದೇ ಸಂದರ್ಭದಲ್ಲಿ ಕಡು ಬಡತನದಿಂದ ನರಳುತ್ತಿರುವವರಿಗೆ ಮತ್ತು ಅಸಂಘಟಿತ ಕಾರ್ಮಿಕರ ಕುಟುಂಬಕ್ಕೆ ಪ್ರತಿ ತಿಂಗಳು 35 ಕೆ.ಜಿ. ಅಕ್ಕಿ ನೀಡುವ ಆಹಾರ ಹಕ್ಕಿನ ಖಾತ್ರಿ ಮತ್ತಿತರರ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕೆಂದು ಸತತವಾಗಿ ಹೋರಾಟ ಮಾಡುತ್ತಿದ್ದರೂ ಬಡವರನ್ನು ನಿರ್ಲಕ್ಷಿಸಿದ್ದಾರೆ ಎಂದು ಆಕ್ರೋಷ ವ್ಯಕ್ತಪಡಿಸಿದರು.



ಬೆಲೆ ಏರಿಕೆ ಜನತೆಯನ್ನು ತೀವ್ರ ರೀತಿಯಲ್ಲಿ ಬಾಧಿಸುತ್ತಿದ್ದರೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬೆಲೆ ಏರಿಕೆಯನ್ನು ತಡೆಗಟ್ಟಲು ಯಾವುದೇ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ. ಬದಲಿಗೆ ಬೆಲೆ ಏರಿಕೆಗೆ ಮೂಲ ಕಾರಣವಾದ ತೈಲ ಉತ್ಪನ್ನಗಳ ಬೆಲೆಗಳನ್ನು ಹೆಚ್ಚಿಸುತ್ತಿದೆ. ಸಮಾಜವಾದಿ ರಾಷ್ಟ್ರಗಳಲ್ಲಿ ಬೆಲೆ ಏರಿಕೆಯನ್ನು ಸಮರ್ಥವಾಗಿ ಎದುರಿಸಲಾಗುತ್ತಿದೆ ಎಂದು ತಿಳಿಸಿದರು.

ಕೋಲಾರ ಚಿನ್ನದ ಗಣಿಯನ್ನು ಕೇಂದ್ರ ಸರ್ಕಾರವೇ ಪುನರ್ ಆರಂಭಿಸಬೇಕೆಂದು ಹೈಕೋರ್ಟ್ ತೀರ್ಪು ನೀಡಿದೆ. ಆದರೆ ಕೇಂದ್ರ ಸರ್ಕಾರ ಮತ್ತು ಬಿಜಿಎಂಎಲ್‌ನ ಅಧಿಕಾರಿಗಳ ಸಂಘ ಈ ತೀರ್ಪಿನ ವಿರುದ್ಧ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದೆ. ಕೇಂದ್ರ ಸರ್ಕಾರ ಚಿನ್ನದ ಗಣಿಯನ್ನು ವಿದೇಶಿ ಕಂಪನಿಗಳಿಗೆ ಕಡಿಮೆ ಬೆಲೆಗೆ ಮಾರಾಟ ಮಾಡಲು ತುದಿಗಾಲಿನಲ್ಲಿ ನಿಂತಿದ್ದಾರೆ. ಚಿನ್ನದ ಗಣಿಯ ಪ್ರದೇಶದಲ್ಲಿ 37 ದಶಲಕ್ಷ ಟನ್ ಸೈನೇಡ್ ಮಣ್ಣಿದ್ದು, ಈ ಮಣ್ಣಿನಲ್ಲಿ ಪ್ರತಿ ಟನ್‌ಗೆ 0.70 ಗ್ರಾಂ ಚಿನ್ನ ಇದೆ ಎಂದು ತಜ್ಞರು ವರದಿ ನೀಡಿದೆ. ಈ ಸೈನೆಡ್ ಮಣ್ಣಿನಲ್ಲಿ ಅಂದಾಜು 60 ಸಾವಿರ ಕೋಟಿ ಬೆಲೆ ಚಿನ್ನವಿದೆ ಮತ್ತು ಗಣಿಗಾರಿಕೆ ನಡೆಸಲು ಇನ್ನೂ ಸಾಕಷ್ಟು ಪ್ರಮಾಣದಲ್ಲಿ ಅದಿರು ಇದೆ. ಆದ್ದರಿಂದ ಕೂಡಲೇ ಚಿನ್ನದ ಗಣಿಯನ್ನು ಕೇಂದ್ರ ಸರ್ಕಾರವೇ ಪುನರ್ ಆರಂಭಿಸಬೇಕೆಂದು ವಿ.ಜೆ.ಕೆ. ನಾಯರ್ ಆಗ್ರಹಪಡಿಸಿದರು.





ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ತಮಿಳು ದಿನ ಪತ್ರಿಕೆ ತಿಕ್‌ದೀರ್‌ನ ಸಂಪಾದಕರು ಹಾಗೂ ತಮಿಳುನಾಡು ಸಿಪಿಐ(ಎಂ) ಪಕ್ಷದ ಮುಖಂಡರಾದ ಅಗತ್ಯಲಿಂಗಂ ಮಾತನಾಡಿ ತಮಿಳುನಾಡಿನ ಕೂಡಂಕುಲಂನಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಅಣು ವಿದ್ಯುತ್ ಸ್ಥಾವರಕ್ಕೆ 2000 ಕೋಟಿ ಖರ್ಚು ಮಾಡಲಾಗಿದ್ದು, ಎಷ್ಟು ವಿರೋಧ ಬಂದರೂ ಈ ಸ್ಥಾವರನ್ನು ಪ್ರಾರಂಭಿಸುವುದಾಗಿ ಪ್ರಧಾನಿ ಮನಮೋಹನ್‌ಸಿಂಗ್ ಹೇಳಿದ್ದಾರೆ. ಆದರೆ ಕೋಲಾರ ಚಿನ್ನದ ಗಣಿ ಪ್ರದೇಶದಲ್ಲಿ ಸಾವಿರಾರು ಕೋಟಿ ಮೌಲ್ಯದ ಚಿನ್ನ ಇದ್ದರೂ ಗಣಿಯನ್ನು ಮತ್ತೆ ಪ್ರಾರಂಭಿಸದೇ ಇರುವುದು ಖಂಡನೀಯ. ಗಣಿ ಪ್ರಾರಂಭಿಸಲು ಒತ್ತಾಯಿಸಿ ಇನ್ನಷ್ಟು ತೀವ್ರ ರೀತಿಯಲ್ಲಿ ಹೋರಾಟಗಳನ್ನು ರೂಪಿಸಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ಕೇಂದ್ರ ಸರ್ಕಾರವು ಚಿಲ್ಲರೆ ಮಾರುಕಟ್ಟೆಯಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಗೆ ಅವಕಾಶ ಕಲ್ಪಿಸಲು ಹೊರಟಿದೆ. ಇದರಿಂದ ದೇಶದಲ್ಲಿ ಸಣ್ಣ ಸಣ್ಣ ಅಂಗಡಿಗಳನ್ನು ಇಟ್ಟುಕೊಂಡು ಜೀವನ ಮಾಡುತ್ತಿರುವ ಅಂದಾಜು 4 ಕೋಟಿ ಮಂದಿ ಬೀದಿ ಪಾಲಾಗಲಿದ್ದಾರೆ. ವಾಲ್‌ಮಾರ್ಟ್, ಟೆಸ್ಕೋನಂತಹ ಬಹುರಾಷ್ಟ್ರೀಯ ಕಂಪನಿಗಳು ಮಾರುಕಟ್ಟೆಯ ಮೇಲೆ ಏಕಸೌಮ್ಯ ಸಾಧಿಸಿ ಮುಂದಿನ ದಿನಗಳಲ್ಲಿ ಸರಕುಗಳ ಬೆಲೆಗಳು ಭಾರೀ ಹೆಚ್ಚಳವಾಗುವ ಸಾಧ್ಯತೆ ಇದೆ. ಅಲ್ಲದೇ ಆಹಾರ ಭದ್ರತೆಗೂ ಇದರಿಂದ ಪೆಟ್ಟಾಗಲಿದೆ. ಈ ಜನವಿರೋಧಿ ನೀತಿಯ ವಿರುದ್ಧ ಎಲ್ಲ ವಿಭಾಗದ ಜನ ಹೋರಾಟ ಮಾಡಬೇಕಾಗಿದೆ ಎಂದು ಅಗತ್ಯಲಿಂಗಂ ಕರೆ ನೀಡಿದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಕಾಂ॥ಜಿ.ಸಿ.ಬಯ್ಯಾರೆಡ್ಡಿರವರು ಮಾತನಾಡಿ ಕೋಲಾರ ಜಿಲ್ಲೆಯ ರಾಜಕಾರಣ ರಾಜ್ಯಕ್ಕೆ ಮಾದರಿಯಾಗಿತ್ತು. ಕೆ.ಎಸ್.ವಾಸನ್, ವಿ.ಎಂ.ಗೋವಿಂದನ್, ಟಿ.ಎಸ್.ಮಣಿ, ವೆಂಕಟಗಿರಿಯಪ್ಪ, ಅಪ್ಪಸ್ವಾಮಿರೆಡ್ಡಿ, ಟಿ.ಕೆ.ಗಂಗಿರೆಡ್ಡಿ, ಆರ್.ವೆಂಕಟರಾಮಯ್ಯ, ಪಟ್ಟಾಭಿರಾಮನ್ ಮತ್ತಿತರರು ಜನಪರ ಚಳುವಳಿ ಮೂಲಕ ರಾಜಕಾರಣ ನಡೆಸಿ ಇಡೀ ರಾಜ್ಯಕ್ಕೆ ಮಾದರಿಯಾಗಿದ್ದರು. ಆದರೆ ಇಂದು ರಿಯಲ್ ಎಸ್ಟೇಟ್ ಏಜೆಂಟರು, ಕೆರೆ ಕುಂಟೆಗಳನ್ನು ಗುಳುಂ ಮಾಡಿದ ಕಳ್ಳರು

ಪುಟ 15ಕ್ಕೆ

ನೆರೆ ಹೊರೆ

ಕಾಲೇಜ್‌ನಲ್ಲೂ ಭಯೋತ್ಪಾದನೆಯ ತಾಂಡವ

ಪಶ್ಚಿಮ ಬಂಗಾಳದಲ್ಲಿ ಈಗ ಕಾಲೇಜಿನಲ್ಲೂ ಹಿಂಸಾಚಾರ ಹಾಗೂ ಭಯದ ವಾತಾವರಣ ಹಬ್ಬಿದೆ. ರಾಜ್ಯದ ಆಡಳಿತ ನೆರವು ಹಾಗೂ ಟಿಎಂಸಿ ಕಾರ್ಯಕರ್ತರ ಸಕ್ರಿಯ ಕಾರ್ಯಾಚರಣೆಯಿಂದ ಭಯೋತ್ಪಾದನೆಯನ್ನು ಹಬ್ಬಿಸಲಾಗುತ್ತಿದೆ. ಒಂದಲ್ಲ ಒಂದು ಕಾಲೇಜುಗಳಲ್ಲಿ ದಿನನಿತ್ಯ ನೂರಾರು ವಿದ್ಯಾರ್ಥಿಗಳ ಮೇಲೆ ಅಮಾನುಷ ಹಲ್ಲೆ ನಡೆಸಲಾಗುತ್ತಿದೆ. ಕಾಲೇಜುಗಳನ್ನು ಪ್ರವೇಶಿಸಲು, ಪರೀಕ್ಷೆಗಳನ್ನು ಎದುರಿಸಲೂ ವಿದ್ಯಾರ್ಥಿಗಳಿಗೆ ಅನುಮತಿ ಅವಕಾಶ ನೀಡುತ್ತಿಲ್ಲ.

ಇನ್ನೊಂದು ಘಟನೆಯಲ್ಲಿ ದಕ್ಷಿಣ 24 ಪರಗಣ ಜಿಲ್ಲೆಯ ದಿನಬಂಧು ಆಂಡ್ರೂಸ್ ಕಾಲೇಜಿನಲ್ಲಿ ಎಡಪಂಥೀಯ ವಿದ್ಯಾರ್ಥಿ ಸಂಘಟನೆ ನಾಯಕರ ಮೇಲೆ ಹಲ್ಲೆ ನಡೆಸಲಾಗಿದೆ. ಜಾಧವ್‌ಪುರದ ಈ ಕಾಲೇಜು ಪ್ರಬಲ ಎಡ ವಿದ್ಯಾರ್ಥಿ ಚಳವಳಿಗೆ ಖ್ಯಾತಿ ಪಡೆದಿತ್ತು. ಡಿಸೆಂಬರ್ 23ರಂದು ನಡೆಯಲಿರುವ ವಿದ್ಯಾರ್ಥಿ ಸಂಘದ ಚುನಾವಣೆಗೆ ಎಸ್‌ಎಫ್‌ಐನ ವಿದ್ಯಾರ್ಥಿ ನಾಯಕರಿಗೆ ನಾಮಪತ್ರ ಸಲ್ಲಿಸದಂತೆ ತಡೆಯಲಾಯಿತು. ಡಿಸೆಂಬರ್ 13ರಂದು ಸಮಾಜವಿರೋಧಿಗಳು, ದುಷ್ಕರ್ಮಿಗಳು ಹಾಗೂ ಗೂಂಡಾ ಪಡೆಗಳಿಂದ ಜಿಲ್ಲೆಯಾದ್ಯಂತ ವಿದ್ಯಾರ್ಥಿ ನಾಯಕರು ಮತ್ತು ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಲಾಯಿತು. 10ಕ್ಕೂ ಹೆಚ್ಚು ವಿದ್ಯಾರ್ಥಿ ನಾಯಕರು ಗಂಭೀರ ಗಾಯಗೊಂಡು ಆಸ್ಪತ್ರೆ ಸೇರಬೇಕಾಯಿತು. ಇದರಲ್ಲಿ ಎಸ್‌ಎಫ್‌ಐನ ಮಾಜಿ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಕಲ್ಲೋಲ್ ರಾಯ್ ಅವರಿಗೂ ಗಂಭೀರ ಗಾಯವಾಗಿದ್ದು, ಅವರೂ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಮರುದಿನ ಕಾಲೇಜಿನಲ್ಲಿ ಟಿಎಂಸಿ ಗೂಂಡಾಗಳು ಇಟ್ಟಿಗೆ ತುಂಡುಗಳಿಂದ ಪ್ರಹಾರ ನಡೆಸಿದರು. ಎಲ್ಲವೂ ಸಿಎಂ ಗಮನದಲ್ಲೇ ನಡೆಯುತ್ತಿದೆ ಎಂಬುದನ್ನು ತಿಳಿದು ಪೊಲೀಸರು ಸುಮ್ಮನಾಗಿದ್ದರು. ಈ ಮಧ್ಯೆ, ಟಿಎಂಸಿಯ ವಿದ್ಯಾರ್ಥಿ ಸಂಘಟನೆ ನಾಯಕರು ನಾಮಪತ್ರ ಸಲ್ಲಿಸಿದರು. ಇಷ್ಟಾದರೂ 94 ಸ್ಥಾನಗಳ ಪೈಕಿ ಕೇವಲ 58 ಅಭ್ಯರ್ಥಿಗಳನ್ನು ಅವರು ಕಣಕ್ಕಿಳಿಸಿದರು. ಹೊರಗಿನ ಶಕ್ತಿಗಳ ಬೆಂಬಲದಿಂದ ಈ ಬಾರಿಯ ಚುನಾವಣೆಯಲ್ಲಿ ಟಿಎಂಸಿ ವಿದ್ಯಾರ್ಥಿ ಸಂಘಟನೆ ಜಯ ದಾಖಲಿಸಿತು.

ಇದೇ ರೀತಿಯ ಹಿಂಸಾತ್ಮಕ ತಂತ್ರವನ್ನು ದಕ್ಷಿಣ ಕೊಲ್ಕತ್ತಾದ ಜ್ಯೋತಿಷ್ ರಾಯ್ ಕಾಲೇಜಿನಲ್ಲೂ ನಡೆಸಲಾಯಿತು. ಪೂರ್ವ ಕೊಲ್ಕತ್ತಾದ ಬೆಲೆಘಾಟ್‌ನ ಗುರುದಾಸ್ ಕಾಲೇಜ್‌ನಲ್ಲಿ ಇದೇ ಅವಸ್ಥೆ ನಡೆಯಿತು. ಹೂಗ್ಲಿಯ ಶ್ರೀರಾಂಪುರದ ಕಾಲೇಜ್‌ನಲ್ಲೂ ಪರಿಸ್ಥಿತಿ ಭಿನ್ನವಾಗಿರಲಿಲ್ಲ. ವಿದ್ಯಾರ್ಥಿಗಳಲ್ಲಿ ಭಯ ಹುಟ್ಟಿಸುವ ಮೂಲಕ ಹಾಗೂ ಹಿಂಸಾತ್ಮಕ ಕಾರ್ಯತಂತ್ರದಿಂದ ವಿದ್ಯಾರ್ಥಿ ಸಂಘದ ಚುನಾವಣೆ ನಡೆಯಿತು.

ಎಸ್‌ಎಫ್‌ಐ ನೇತೃತ್ವದಲ್ಲಿ ವಿದ್ಯಾರ್ಥಿ ಸಂಘಟನೆ ಅಸ್ತಿತ್ವಕ್ಕೆ ಬರಬಾರದು ಮತ್ತು ವಿದ್ಯಾರ್ಥಿ ಸಂಘದಲ್ಲಿ ಎಸ್‌ಎಫ್‌ಐ ಪ್ರಾಬಲ್ಯವನ್ನು ದಮನಿಸಬೇಕು ಎಂಬ ಏಕೈಕ ಉದ್ದೇಶದಿಂದ ಈ ಸರಣಿ ಹಿಂಸೆಗಳು ರಾಜ್ಯಾದ್ಯಂತ ನಡೆಯಿತು.

ಈ ಸರಣಿ ಹಿಂಸಾ ಕೃತ್ಯವನ್ನು ಎಸ್‌ಎಫ್‌ಐ ತೀವ್ರವಾಗಿ ಖಂಡಿಸಿದೆ.

★

ಕೊಲ್ಕತ್ತಾದಲ್ಲಿ ಎಡರಂಗದಿಂದ ಸಾಮೂಹಿಕ ಅಸಹಕಾರ ಚಳವಳಿ

ಜನವಿರೋಧಿ ತೃಣಮೂಲ ಸರ್ಕಾರದ ವಿರುದ್ಧ ಪ್ರತಿಪಕ್ಷ ಎಡರಂಗ ಜನಾಂದೋಲನದ ಮೂಲಕ ಸಮರ ಸಾರಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಕ್ರಮದಿಂದಾಗಿ ಅಗತ್ಯ



ವಸ್ತುಗಳ ಬೆಲೆಯಲ್ಲಿ ಭಾರೀ ಏರಿಕೆಯಾಗಿದೆ. ಇನ್ನೊಂದೆಡೆ ಪ್ರತಿಪಕ್ಷಗಳ ಕಾರ್ಯಕರ್ತರ ಮೇಲೆ ಹಿಂಸಾಚಾರವನ್ನು ಹರಿಯಬಿಡಲಾಗಿದೆ. ಈ ದಾಳಿಯನ್ನು ದಮನಿಸಲು ಸಾಮೂಹಿಕ ಅಸಹಕಾರ ಚಳವಳಿಯನ್ನು ಎಡರಂಗದ ನಾಯಕರು ಆರಂಭಿಸಿದ್ದಾರೆ. ಎಡರಂಗದ ಅಧ್ಯಕ್ಷ ಬಿಮನ್ ಬಸು ಹಾಗೂ ಪ್ರತಿಪಕ್ಷ ನಾಯಕ ಸೂರ್ಯಕಾಂತ್ ಮಿಶ್ರಾ ನೇತೃತ್ವದಲ್ಲಿ 6000ಕ್ಕೂ ಹೆಚ್ಚು ಪ್ರತಿಭಟನಾಕಾರರು ಬಂಧನಕ್ಕೊಳಗಾದರು.

ಬಂಧನಕ್ಕೂ ಮುನ್ನ ಪ್ರತಿಭಟನಾಕಾರರನ್ನು ಉದ್ದೇಶಿಸಿ ಭಾಷಣ ಮಾಡಿದ ಬಿಮನ್ ಬಸು, ರಾಜ್ಯದ ಜ್ವಲಂತ ಸಮಸ್ಯೆಗಳನ್ನು ಪ್ರಸ್ತಾಪಿಸಿದರು. ಜನತೆಯ ಸಮಸ್ಯೆಯನ್ನು ಬಗೆಹರಿಸಲು ಮಮತಾ ಸರ್ಕಾರ ಎಳ್ಳಷ್ಟೂ ಕಾಳಜಿ ವಹಿಸುತ್ತಿಲ್ಲ ಎಂದು ಟೀಕಿಸಿದರು. ರಾಜ್ಯಾದ್ಯಂತ ಹಿಂಸಾಚಾರವನ್ನು ಹರಿಯಬಿಡಲಾಗಿದ್ದು, ಜನರು ಚಳವಳಿ ಹಾಗೂ ಪ್ರಬಲ ಹೋರಾಟದ ಮೂಲಕ ಪಡೆದ ಜಯವನ್ನು ಹತ್ತಿಕ್ಕಲು ಈ ಕೃತ್ಯಕ್ಕೆ ಇಳಿದಿದೆ ಎಂದು ಹೇಳಿದರು. ಇತ್ತೀಚಿನ ಕೆಲ ದಿನಗಳಲ್ಲಿ 48ಕ್ಕೂ ಹೆಚ್ಚು ಎಡ ಕಾರ್ಯಕರ್ತರನ್ನು ಅಮಾನುಷವಾಗಿ ಹತ್ಯೆ ಮಾಡಲಾಗಿದೆ. ಜನವಿರೋಧಿ ನೀತಿಗಳು ಸಾಮಾನ್ಯ ಜನರನ್ನು ಕಿತ್ತು ತಿನ್ನುತ್ತಿದೆ. ಈ ದಾಳಿಗಳ ವಿರುದ್ಧ ಅಸಹಕಾರ ಚಳವಳಿ ನಡೆಯುತ್ತಿದೆ ಎಂಬುದನ್ನು ಬಿಮನ್ ಬಸು ಜನತೆಗೆ ಸ್ಪಷ್ಟಪಡಿಸಿದರು.

ಸಿಪಿಐ, ಆರ್‌ಎಸ್‌ಪಿ ಹಾಗೂ ಫಾರ್ವರ್ಡ್ ಬ್ಲಾಕ್‌ನ ಮುಖಂಡರೂ ಪ್ರತಿಭಟನಾ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಜಿಲ್ಲಾವಾರು ಅಸಹಕಾರ ಚಳವಳಿ ಬಳಿಕ ರಾಜ್ಯ ಕೇಂದ್ರದಲ್ಲಿ ಈ ಬೃಹತ್ ಚಳವಳಿಯನ್ನು ಹಮ್ಮಿಕೊಳ್ಳಲಾಗಿತ್ತು. ನಾಗರಿಕ ಹಕ್ಕುಗಳಿಗಾಗಿ ನಡೆದ ಈ ಹೋರಾಟದಲ್ಲಿ ವಿವಿಧ ಜನವಿಭಾಗಗಳಿಂದ ವ್ಯಾಪಕ ಬೆಂಬಲ ವ್ಯಕ್ತವಾಗಿತ್ತು.

● ಸಿಮ್ಮಿಕ್ಷಿ

ಜ್ಞಾನೇಶ್ವರಿ ಎಕ್ಸ್‌ಪ್ರೆಸ್ ದುರಂತ ಯಾರು ಹೊಣೆ?


ಕೊನೆಗೂ ಸತ್ಯ ಹೊರಬಿದ್ದಿದೆ. ಆದರೆ, ಇದು ಗುಪ್ತವಾಗಿ ಉಳಿದಿತ್ತು ಎಂದಲ್ಲ. ಆದರೆ, ಈ ಬಾರಿ ಅದನ್ನು ಸ್ವತಃ ತೃಣಮೂಲ ನಾಯಕಿ ಹಾಗೂ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸ್ಪಷ್ಟಪಡಿಸಿದ್ದಾರೆ. ಜ್ಞಾನೇಶ್ವರಿ ಎಕ್ಸ್‌ಪ್ರೆಸ್ ದುರಂತದಲ್ಲಿ ಮಾವೋವಾದಿಗಳ ಕೈವಾಡ ಇದೆ ಎಂಬುದನ್ನು ಅವರೇ ಹೇಳಿದ್ದು. ಈ ಕೃತ್ಯದ ಹೊಣೆಯನ್ನು ಹಿಂದೆ ಅವರು ಸಿಪಿಐ(ಎಂ) ಮೇಲೆ ಹೊರಿಸಲು ಪ್ರಯತ್ನಿಸಿದ್ದರು. ನೀವು ಯೋಚಿಸಿ ಇದರ ತಂತ್ರವೇನೆಂದು.

ಮತ್ತೆ ಕೊಳ್ಳಿ ಹಿಡಿದಿರುವ ಸಂಘ ಪರಿವಾರ

ಪುಟ 5 ರಿಂದ

ಮರುದಿನವೇ ಹಿಂದೂಗಳ ಮೇಲೆ 'ದೌರ್ಜನ್ಯ'ವನ್ನು ಖಂಡಿಸಿ ಸುಳ್ಯದ ಬೀದಿಗಳಲ್ಲಿ ಸಾವಿರಾರು ಜನರ ಮೆರವಣಿಗೆ ನಡೆಸಲಾಗಿದೆ. ಮುಸ್ಲಿಮರನ್ನು ಹೀನಾಮಾನವಾಗಿ ಬಯ್ಯಲಾಗಿದೆ. ಪೊಲೀಸರ ಲಾಠಿ ಕಿತ್ತುಕೊಳ್ಳುವ ಬೆದರಿಕೆ ಒಡ್ಡಲಾಗಿದೆ. ಮುಖ್ಯ ಭಾಷಣಕಾರರಾದ ಕಲ್ಲಡ್ಕ ಪ್ರಭಾಕರ ಭಟ್, ಸತ್ಯಜಿತ್ ಸುರತ್ಕಲ್ ಕಾನೂನಿನ ಎಲ್ಲಾ ಅಂಶಗಳನ್ನು ಗಾಳಿಗೆ ತೂರಿ ಪ್ರಚೋದನಾಕಾರಿ ಮಾತುಗಳನ್ನಾಡಿದ್ದಾರೆ. ಮುಸಲ್ಮಾನರಿಗೆ ಸರಿಯಾಗಿ ಪಾಠ ಕಲಿಸುವಂತೆ, ತಕ್ಕ ಪ್ರತ್ಯುತ್ತರ ನೀಡುವಂತೆ ಬಹಿರಂಗ ಕರೆ ನೀಡಲಾಗಿದೆ. ಎಂಬತ್ತರ ದಶಕದಲ್ಲಿ ನಡೆದ ಗಲಭೆಯನ್ನು ನೆನಪಿಸಿ, ಮರುಕಳಿಸುವ ಬೆದರಿಕೆ ಒಡ್ಡಲಾಗಿದೆ. ಸತ್ಯಜಿತ್ ಸುರತ್ಕಲ್‌ನ ಭಾಷಣವಂತೂ ಸುಳ್ಯದಲ್ಲಿ ಕೋಮುಗಲಭೆ ಗ್ಯಾರಂಟಿ ಎಂಬ ವಾತಾವರಣವನ್ನು ಮೂಡಿಸಿದೆ. ಸುರತ್ಕಲ್ ಕೋಮುಗಲಭೆಯ ಪೂರ್ವಭಾವಿ ಯಾಗಿಯೂ ಇದೇ ರೀತಿಯ ಪರಿಸ್ಥಿತಿಯನ್ನು ನಿರ್ಮಿಸಲಾಗಿತ್ತು. ಸುಳ್ಯದ ಮುಸಲ್ಮಾನರು ಪ್ರಾಣವನ್ನು ಅಂಗೈಯಲ್ಲಿಟ್ಟು ದಿನದೂಡುವಂತಾಗಿದೆ. ಜಾಮೀನು ಪಡೆದು ಹೊರಬಂದ ಬಜರಂಗಿಗಳನ್ನು ಸ್ವಾತಂತ್ರ್ಯ ಹೋರಾಟಗಾರರ ರೀತಿ ಊರಿಡೀ ಮೆರವಣಿಗೆ ನಡೆಸಲಾಗಿದೆ. ಆರ್.ಎಸ್.ಎಸ್. ಪರಿವಾರ ಸುಳ್ಯದಿಂದ ಹಿಡಿದು ಇಡೀ ಜಿಲ್ಲೆಗೆ ಗಲಭೆಯ ಬಿಸಿ ಹಬ್ಬಿಸುವ ಹುಮ್ಮಸ್ಸಿನಲ್ಲಿದೆ. ವಿಧಾನ ಸಭೆಯಲ್ಲಿಯೂ ಜಿಲ್ಲೆಯ ಬಿಜೆಪಿ ಶಾಸಕರು ಪೊಲೀಸರ ವಿರುದ್ಧ ಧ್ವನಿ ಎತ್ತಿದ್ದಾರೆ. ನಾಚಿಕೆ ಇಲ್ಲದೆ ಲವ್‌ಜಿಹಾದ್‌ನ ಕಥೆ ಕಟ್ಟಿದ್ದಾರೆ.

ಆತಂಕದ ಸಂಗತಿ ಎಂದರೆ ಸುಳ್ಯ ತಾಲೂಕಿನಲ್ಲಿ ಕೋಮುವಾದಿ ಶಕ್ತಿಗಳನ್ನು ಎದುರಿಸಲು ಯಾವುದೇ ಪ್ರಗತಿಪರ, ಜಾತ್ಯತೀತ ಚಳುವಳಿಗಳೇ ಇಲ್ಲ. ಇರುವ ಕಾಂಗ್ರೆಸ್ ಅಂತೂ ಇಲ್ಲಿ ಬಿಜೆಪಿಯ ಬಿ ಟೀಮ್, ಸುಳ್ಯದಲ್ಲಿ ಎಲ್ಲವೂ ಸಂಘಮಯಗೊಂಡಂತೆ ಕಾಂಗ್ರೆಸ್ ಪೂರ್ಣವಾಗಿ ಕೋಮುವಾದೀಕರಣಗೊಂಡಿದೆ. ಮೊನ್ನೆ ಮಡೆ ಸ್ನಾನ ಪ್ರಕರಣವನ್ನು ಸುಳ್ಯದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮುಂದೆ ನಿಂತು ಸಮರ್ಥಿಸಿದ್ದಾನೆ. ಸುಬ್ರಹ್ಮಣ್ಯದಲ್ಲಿ ನಡೆದ ಶಿವರಾಮು ಮೇಲಿನ ಹಲ್ಲೆ ಕೋರರಿಗೆ ಸನ್ಮಾನ ಕಾರ್ಯಕ್ರಮವನ್ನು ಹಿಂದುತ್ವವಾದಿಗಳ ಜೊತೆ ಸೇರಿ ಏರ್ಪಡಿಸಿದ್ದಾನೆ. ನ್ಯಾಯವಾದಿಯಾಗಿರುವ ಈತನೇ ಮಡೆ ಸ್ನಾನ ಪ್ರಕರಣದ ಆರೋಪಿಗಳ ಪರವಾದ ವಕೀಲ. ಪೊಲೀಸ್ ಠಾಣೆಗೆ ಕಲ್ಲು ತೂರಿದ ಸಾಬಿಗಳಿಗೆ ಹೊಡೆದ ಆರೋಪಿಗಳಿಗೂ ಇದೇ ಕಾಂಗ್ರೆಸ್ ನಾಯಕ ವಕಾಲತ್ತು ಹಾಕಿ ಜಮೀನು ಕೊಡಿಸಿದ್ದಾನೆ. ಸುಳ್ಯದಂತಹ ನತದೃಷ್ಟ ಊರಿನ ಸರ್ವನಾಶಕ್ಕೆ ಇನ್ನೇನು ಬೇಕು. ಇನ್ನು ಬೇಟೆಗಾರನ ದೃಷ್ಟಿಗೆ ಬಿದ್ದಿರುವ ಹರಿಣಗಳಂತಾಗಿರುವ ಮುಸಲ್ಮಾನರನ್ನು ರಕ್ಷಿಸುವವರಾರು? ಅವರಲ್ಲಿ ಆತ್ಮಸ್ಥೈರ್ಯವನ್ನು ಮೂಡಿಸುವವರಾರು. ಅದೂ PFI ನಂತಹ ಮತಾಂಧ, ತೀವ್ರವಾದಿ ಮುಸ್ಲಿಂ ಸಂಘಟನೆಗಳು ಮುಸ್ಲಿಮರಲ್ಲಿ ಅಭದ್ರತೆಯ ಭಾವನೆಯನ್ನು ಸೃಷ್ಟಿಸಿ ತನ್ನ ತೆಕ್ಕೆಗೆ ತೆಗೆದುಕೊಳ್ಳಲು ತೀವ್ರ ರೀತಿಯ ಪ್ರಯತ್ನವನ್ನು ನಡೆಸುತ್ತಿರುವಾಗ......ಕರಾವಳಿಯ ಜನತೆ ಆತ್ಮ ವಿಮರ್ಶೆ ಮಾಡಿಕೊಳ್ಳಬೇಕಿದೆ.



ಆರ್.ರಾಮಕೃಷ್ಣ

ಕುರ್ಚಿ ಭದ್ರತೆಯ ಮುಂದೆ ತತ್ವ-ಸಿದ್ಧಾಂತ ಎಲ್ಲ ಎಂಥದು ಮಾರಾಯ್ರೆ


ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಗಳು ಬದಲಾಗಿ ಹಳೆ ಮುಖ್ಯಮಂತ್ರಿ ಡಾ. ಬಿ.ಎಸ್. ಯಡಿಯೂರಪ್ಪನವರು ಮತ್ತೆ ಅವತರಿಸುವರೋ ಅಥವಾ ಸದಾನಂದಗೌಡರವರೇ ಮುಂದುವರಿಯುವರೋ ಎಂಬೊಂದು ಚರ್ಚೆ ರಾಜ್ಯದ ರಾಜಕೀಯ ವಲಯದಲ್ಲಿ ತೀವ್ರಗೊಂಡ ಸ್ಥಿತಿಯಲ್ಲೇ ಈಗ ವಿಧಾನ ಪರಿಷತ್‌ನ ಒಂದು ಸ್ಥಾನಕ್ಕೆ ಚುನಾವಣೆ ನಡೆದು ಗೌಡರು ಚುನಾವಣೆಯಲ್ಲಿ ಗೆದ್ದಿದ್ದಾರೆ. ಬಿಜೆಪಿ ಶಾಸಕರನ್ನು ರೆಸಾರ್ಟ್‌ಗಳಿಗೆ ತುಂಬಿಕೊಂಡು ಹೋಗಿ ವಿಧಾನ ಸೌಧಕ್ಕೆ ಕರೆತಂದು ಬಿಡಲಾಗಿದೆ.

ಏನೇ ಆಗಲಿ ಮತ್ತೆ ಮುಖ್ಯಮಂತ್ರಿ ಆಗೇ ಬಿಡಬೇಕೆಂದುಕೊಂಡು ತಮ್ಮ ಬೆಂಬಲಕ್ಕೆ ರಾಜ್ಯದ ಸಂಸದರನ್ನು ಕಟ್ಟಿಕೊಂಡು ಬಿಜೆಪಿಯ ಕೇಂದ್ರ ಮುಖಂಡರ ಮುಂದೆ ಬೀಕರ-ರುದ್ರ ಲಾಗ ಹೊಡೆದು ಲಾಬಿ ಮಾಡಿ ಬಂದ ಯಡಿಯೂರಪ್ಪನವರು ಇಲ್ಲಿ ವಾಜಪೇಯ ಯಾಗ-ಯಗ್ನ ಮಾಡುತ್ತ ತಮ್ಮ ಕಸರತ್ತು ಮುಂದುವರಿಸಿದ್ದಾರೆ. ಸದಾನಂದಗೌಡರು ಗದ್ದ ಮೇಲೆ ಇನ್ನು ಏನೇನೆಲ್ಲಾ ತೆರೆಯ ಮೇಲೆ ಕಾಣಿಸಿಕೊಳ್ಳಲಿವೆಯೋ ಕಾದು ನೋಡಬೇಕಿದೆ.

ಬಿಜೆಪಿ ಕೇಂದ್ರ ನಾಯಕತ್ವಕ್ಕಿರುವ ತೊಂದರೆಂಯಾದರು ಏನು ? ಯಡಿಯೂರಪ್ಪನವರು ಮತ್ತೆ ಮುಖ್ಯಮಂತ್ರಿಯಾಗುವುದರಲ್ಲಿ ಬಿಜೆಪಿ ನಾಯಕತ್ವಕ್ಕೆ ತಾತ್ವಿಕ ಭಿನ್ನಾಭಿಪ್ರಾಯವೇನು ಇಲ್ಲ. ಕಾಂಗ್ರೆಸ್ ವಿರುದ್ಧ ಭ್ರಷ್ಟಾಚಾರದ ವಿಚಾರದಲ್ಲಿ ದಾಳಿ ಮಾಡುವಾಗ ಕರ್ನಾಟಕ ರಾಜ್ಯದ ಬಿಜೆಪಿ ಮುಖ್ಯಮಂತ್ರಿ ಹಸಿರು ಬೆಡ್ ಶಿಟ್ ಮರೆಯಲ್ಲಿ ನಿರಂತರ ಪರಪ್ಪನ ಅಗ್ರಹಾರ- ಬೆಂಗಳೂರು ಆಸ್ಪತ್ರೆಗಳ ಯಾತ್ರೆಯಲ್ಲಿ ತೊಡಗಿದ್ದರೆ ಏನು ಮಾಡುವುದು ಅನ್ನುವುದೇ ಅದರ ಚಿಂತೆ. ಇರಲಿ.

ಕರ್ನಾಟಕ ರಾಜ್ಯದ ಬಿಜೆಪಿ ಘಟಕದ ಅವಸ್ಥೆ ನೋಡಿ. ಮೊನ್ನೆ ಮೊನ್ನೆ ಬಳ್ಳಾರಿ ಗ್ರಾಮಾಂತರ ಕ್ಷೇತ್ರದ ಚುನಾವಣೆಯ ಸಂದರ್ಭದಲ್ಲಿ ಸ್ವಾಭಿಮಾನಿ ಶ್ರೀರಾಮುಲು ಅವರ ಬೆಂಬಲಕ್ಕೆ ನಿಂತ ಕಾರಣಕ್ಕಾಗಿ ಬಬ್ರುಬಾಹನ ಶೈಲಿಯಲ್ಲಿ ಬಿಜೆಪಿ ಪಕ್ಷದ ಶಿಸ್ತು, ಸ್ವಚ್ಛತೆ ನೀತಿಗಳ ಬಗೆಗೆ ಭಾಷಣ ಮಾಡಿ ನಾಲ್ಕು ಜನ ಬಿಜೆಪಿ ಶಾಸಕರನ್ನು ಅಮಾನತ್ತು ಮಾಡಲಾಗಿತ್ತಲ್ಲವೇ ? ಈಗ ಆ ಶಾಸಕರ ಅಮಾನತ್ತು ರದ್ದಾಗಿ ಹೋಗಿದೆ.

ಯಾಕೆ ? ಯಾಕೆಂದರೆ ಸದಾನಂದಗೌಡರು ಕುಳಿತ ಮುಖ್ಯಮಂತ್ರಿಯ ಕುರ್ಚಿ ಅವರಿಗೆ ಉಳಿಯಬೇಕಾದರೆ ಈಗಿನ ಪರಿಷತ್ ಚುನಾವಣೆಯಲ್ಲಿ ಶಾಸಕರ ಓಟು ಬೇಕಿತ್ತು.



ಓಟಿಗಾಗಿ-ಕುರ್ಚಿಗಾಗಿ ಏನು ಮಾಡಲೂ ಸೈ ಅಂತಲ್ಲವೇ ಇದರ ಅರ್ಥ. ನಡೆಯುತ್ತಿರುವುದು ದೇಶ ಪ್ರೇಮ ಮತ್ತು ಭಯಂಕರ ಶಿಸ್ತಿಗೆ (ಕು)ಖ್ಯಾತವಾದ ಭಾರತೀಯ ಜನತಾ ಪಕ್ಷದಲ್ಲಿ ಅನ್ನುವುದನ್ನು ಮರೆಯುವಂತಿಲ್ಲ ನೋಡಿ.

★

ಕರ್ತವ್ಯ ಲೋಪ -ಯೋಗೇಶ್ವರ ಪ್ರತಾಪ

ತಮ್ಮ ಕಾರನ್ನು ಹಿಂದಿಕ್ಕಿದ ಕಾರಣಕ್ಕೆ ಸಾರ್ವಜನಿಕರ ಮೇಲೆ ಏರಿ ಹೋಗಿ ಕೈಮಾಡಿದ ಬಿಜೆಪಿ ಸರ್ಕಾರದ ಘನ ಮಂತ್ರಿಗಳ ಪ್ರತಾಪವನ್ನು ನೋಡಿದ್ದೇವೆ.'

ಈಗ ಹಾರ ಹಾಕಲು ಹಾಜರಿಲ್ಲದ ನೌಕರರನ್ನು ಅಮಾನತ್ತು ಮಾಡಿರುವ ಸಚಿವರ ಪ್ರತಾಪವನ್ನು ನೋಡಬೇಕಾಗಿ ಬಂದಿದೆ. ವಿಷಯ ಇದು. ಬಿಜೆಪಿ ಸರ್ಕಾರದ ಅರಣ್ಯ ಸಚಿವ ಯೋಗೀಶ್ವರರು ಇತ್ತೀಚೆಗೆ ತಮ್ಮ 'ಯೋಗ ಪ್ರವಾಸ' ಕೈಗೊಂಡು ಬಂಡಿಪುರದ ಜಂಗಲ್ ಲಾಡ್ಜ್‌ಗೆ ಬಂದಿದ್ದಾರೆ. ಸಚಿವರು ಅವರಿಸಿದ ಹೊತ್ತಲ್ಲಿ ನೌಕರ ವರ್ಗ ಹಾರ ತುರಾಯಿಗಳೊಂದಿಗೆ ಹಾಜರಾಗಿ ಭೋ ಫರಾಕ್ ಹಾಕಬೇಕಾದದ್ದು ಅವರ ಕರ್ತವ್ಯಗಳ ಅಂತರ್ಗತ ಭಾಗವೇ ತಾನೆ. !! ಆದರೆ ಲಾಡ್ಜಿನ ವ್ಯವಸ್ಥಾಪಕ ಗಂಗಾಸ್ವಾಮಿ ಅಂದು ಸಚಿವರ ಸ್ವಾಗತಕ್ಕೆ ತಾವೇ ನಿಲ್ಲದೇ ಮತ್ತೊಬ್ಬ ನೌಕರರನ್ನು ಕಳಿಸಿ ಹಾರ ಹಾಕಿಸಿದರಂತೆ. ಕರ್ತವ್ಯ ಲೋಪ..ಕರ್ತವ್ಯ ಲೋಪ.... ಸಹಿಸಲಾಗದ ಕರ್ತವ್ಯ ಲೋಪ. ಘಟನೆ ನಡೆದ ಬೆನ್ನ ಹಿಂದೆಯೇ ಗಂಗಾಸ್ವಾಮಿಯ ಅಮಾನತು. ಹೇಗಿದೆ. ಬಿಜೆಪಿ ದರ್ಬಾರ್.

★

ಸಾಹಿತಿಗಳ ಬಾಯಿ ಹೊಲಿದು ಹಾಕಿ

"ರಾಜಕಾರಣಿಗಳು, ಶಾಸಕರ ವಿರುದ್ಧ ಸಾಹಿತಿಗಳು ಅವಹೇಳನಕಾರಿಯಾಗಿ ಮಾತನಾಡಿದ್ದಾರೆ. ಶಾಸಕರ ಗೌರವವನ್ನು ಬೀದಿಗೆ ತರಲಾಗಿದೆ....ಇದರಿಂದ ಜನ ಪ್ರತಿನಿಧಿಗಳ ಮಾನ ಹರಾಜಾಗುತ್ತಿದೆ.....ಸಾಮಾನ್ಯ ಜನತೆ ರಾಜಕಾರಣಿಗಳನ್ನು ತಾತ್ಸಾರದಿಂದ ನೋಡುವಂತಾಗಿದೆ. ಗೋಷ್ಠಿಗಳ ಹೆಸರಲ್ಲಿ ರಾಜಕಾರಣಿಗಳ ವಿರುದ್ಧ ಪ್ರಚಾರ ಮಾಡಬಾರದು. ಕೋಟಿಗಟ್ಟಲೆ ಹಣ ನೀಡಿ ಸಾಹಿತಿಗಳಿಂದ ಉಗಿಸಿಕೊಳ್ಳಬೇಕಾ ? ಈ ನಿಟ್ಟಿನಲ್ಲಿ ಇದಕ್ಕೆ ಕಡಿವಾಣ ಹಾಕಲೇ ಬೇಕಾಗಿದೆ....."

ಈ ಮಾತನ್ನು ಯಾರು ಯಾರಿಗೆ ಯಾವಾಗ ಹೇಳಿದರು ಎಂಬುದು ನಿಮಗೆ ಈಗಾಗಲೇ ಗೊತ್ತಿರಲೇ ಬೇಕು. ಏಕೆಂದರೆ ಇದು ಆಪ್ಪೊಂದು '/ಪ್ರಖ್ಯಾತ/ ಹೇಳಿಕೆಯಾಗಿ ಇತಿಹಾಸದಲ್ಲಿ/ ದಾಖಲಾಗುವ ಅರ್ಹತೆ ಹೊಂದಿದೆ. ಪರ್ತಕರ್ತರನ್ನೆಲ್ಲ ಅರಬ್ಬಿ ಸಮುದ್ರಕ್ಕೆ ಎಸೆಯಬೇಕು ಎಂದು ಹೇಳಿದ ನಮ್ಮ ರಾಜ್ಯದ ಮುಖ್ಯಮಂತ್ರಿಯೊಬ್ಬರು ಕೊನೆಗೆ ಎಲ್ಲಿಗೆ ಸೇರಿದರು ಎಂಬುದು ನಮಗೆಲ್ಲಾ ಗೊತ್ತಿರುವುದೇ.

ವ್ಯತಾಸ ಏನೆಂದರೆ ಅವರು ಕಾಂಗ್ರೆಸ್ ಪಕ್ಷದ ಮುಖ್ಯಮಂತ್ರಿ ಗೂಂಡೂರಾಯರು. ಇವರು- ಈಗ ಸಾಹಿತ್ಯ ಸಮ್ಮೇಳನದ ಕುರಿತು ವಿಧಾನ ಪರಿಷತ್‌ನಲ್ಲಿ ಈ ಪರಿ ಘನವಾದ ಭಾಷಣ ಮಾಡಿರುವವರು ರಾಜ್ಯ ಬಿಜೆಪಿ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಸಚಿವ ಸನ್ಮಾನ್ಯ ಶ್ರೀ ಗೋವಿಂದ ಕಾರಜೋಳರು. ಆಹಾ ಸಂಸ್ಕೃತಿಯೇ !!

ಬಾಲಂಗೋಚಿ; ಸಾಹಿತಿಗಳ 'ಉಗಿತ'ಗಳಿಂದ ನೊಂದ ರಾಜಕಾರಣಿ 'ಕಾರಜೋಳ'ರು ಸಾಲು ಸಾಲಾಗಿ ಪರಪ್ಪನ ಅಗ್ರಹಾರ ಯಾತ್ರೆಗೆ ಹೋಗುತ್ತಿರುವ ಮತ್ತು ಮುಂದೆ ಯಾತ್ರೆಗೆ ಹೋಗಲು ಸಜ್ಜಾಗಿರುವ ತಮ್ಮ ಬಿಜೆಪಿ ಸಹೋದ್ಯೋಗಿಗಳ ಮಾನ ಕಾಪಾಡಲು ಶ್ರಮಿಸಿದರು. ಆದರೆ ಪರಿಣಾಮ ನೋಡಿ. ಈ ಘನ ಹೇಳಿಕೆಯಿಂದಾಗಿ ಸಾಹಿತಿಗಳು, ಕವಿಗಳು, ಬರಹಗಾರರರು ಸಾರ್ವಜನಿಕ ಇನ್ನಷ್ಟು ಉಗ್ರರಾಗಿ ಕೆರಳಿ ನೀವು ಕೊಡುವ ದುಡ್ಡು ನಿಮ್ಮ ಜೇಬಿನದ್ದಲ್ಲ ನಿಮ್ಮ ಮನೆಯದ್ದಲ್ಲ ಅಂತ ಚೆನ್ನಾಗಿ.......ಉ... ಹೋಗಲಿ ಬಿಡಿ. ಪಾಪ.

ಅಂಗವಿಕಲರ ಮಾಶಾಸನ...............

ಪುಟ 16 ರಿಂದ

ಹಾಗೂ ಪಾಲಕರ ಒಕ್ಕೂಟದ ನಿಯೋಗವು ಗೃಹ ಕಚೇರಿ "ಕೃಷ್ಣ"ದಲ್ಲಿ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಮನವಿಯನ್ನು ಸಲ್ಲಿಸಿತು. ಆಗ ಮುಖ್ಯಮಂತ್ರಿಗಳು ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ತಡೆಹಿಡಿಯಲ್ಪಟ್ಟ ಅಂಗವಿಕಲರ ಮಾಶಾಸನವನ್ನು ಎರಡು-ಮೂರು ದಿನಗಳಲ್ಲಿಯೇ ಬಿಡುಗಡೆ ಮಾಡಲು ಆದೇಶ ನೀಡುವುದಾಗಿ ಹೇಳಿದರು. ಇದರಿಂದ ಎಂಟು-ಹತ್ತು ತಿಂಗಳಿಂದಲೂ ತಡೆಹಿಡಿದಿದ್ದ ಅಂಗವಿಕಲರ ಹಾಗೂ ಇತರ ಮಾಸಾಶನಗಳು ದೊರೆಯಲ್ಲಿದ್ದು ಲಕ್ಷಾಂತರ ಅಂಗವಿಕಲರಿಗೆ ತಕ್ಷಣದ ಪರಿಹಾರ ದೊರಕಲಿದೆ.

ಒಕ್ಕೂಟದಿಂದ ಸಲ್ಲಿಸಿದ ಮನವಿಯ ಹದಿನೈದು ಅಂಶಗಳ ಬಗ್ಗೆ ವಿವರವಾಗಿ ಚರ್ಚಿಸಲು ಡಿಸೆಂಬರ್ 16ರ ನಂತರ ಮುಖ್ಯ ಕಾರ್ಯದರ್ಶಿಗಳು, ವಿವಿಧ ಇಲಾಖೆಯ ಕಾರ್ಯದರ್ಶಿಗಳು ಮತ್ತು ಅಂಗವಿಕಲರ ಒಕ್ಕೂಟದ ಪ್ರತಿನಿಧಿಗಳ ಸಭೆ ಕರೆಯುವುದಾಗಿ ಹೇಳಿದರು.

ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟವು"ಎಲ್ಲ ಅಂಗವಿಕಲರಿಗೆ ಶಿಕ್ಷಣ; ಎಲ್ಲ ಅಂಗವಿಕಲರಿಗೆ ಉದ್ಯೋಗ"ವೆಂಬ ಪ್ರಮುಖ ಬೇಡಿಕೆಯ ಆಧಾರದಲ್ಲಿ ರಾಜ್ಯ ಸರ್ಕಾರ ಅಂಗವಿಕಲರ ಒಂದು ವಿಶೇಷ ನೇಮಕಾತಿ ಆಂದೋಲನ ಮಾಡಿ ಶೇ. 5% ಮೀಸಲಾತಿ ಕೋಟ (Quota)ವನ್ನು ಭರ್ತಿ ಮಾಡಿಕೊಳ್ಳಬೇಕೆಂದು ಇತರ ನಿರಕ್ಷರರಾದ ಅಂಗವಿಕಲರಿಗೆ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ ಉದ್ಯೋಗ ನೀಡಬೇಕೆಂದು ಒತ್ತಾಯಿಸಿತು.

ಎಲ್ಲ ಅಂಗವಿಕಲರಿಗೆ ಮಾಸಾಶನವನ್ನು ರೂ.1,000/-ಕ್ಕೆ ಹೆಚ್ಚಿಸಬೇಕು; ಮತ್ತು ಮಹಿಳಾ ಮತ್ತು ತೀವ್ರ ಅಂಗವಿಕಲರಿಗೆ ರೂ.2,000/-ಕ್ಕೆ ಹೆಚ್ಚಿಸಬೇಕೆಂದು ಒಕ್ಕೂಟ ಒತ್ತಾಯಿಸಿತು.

ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟದ ನಿಯೋಗವು ನೈರುತ್ಯ ರೈಲ್ವೆಯ ವಿಭಾಗಿಯ ವ್ಯವಸ್ಥಾಪಕರನ್ನು ಭೇಟಿ ಮಾಡಿ ರೈಲ್ವೆ ಪ್ರಯಾಣದಲ್ಲಿ ಅಂಗವಿಕಲರು ಎದುರಿಸುವ ಸಮಸ್ಯೆಗಳ ಬಗ್ಗೆ ಚರ್ಚಿಸಿ ಮನವಿಯನ್ನು ಕೊಟ್ಟರು.

ಕೋಲಾರದಲ್ಲಿ ತಲೆ ಎತ್ತಿ ನಿಂತಿರುವ ಅವಕಾಶವಾದಿ ರಾಜಕಾರಣದ ಸವಾಲು

ಪುಟ 8 ರಿಂದ

ಜಾತಿಗೆ ಸೀಮಿತಗೊಳಿಸಲಾಗುತ್ತದೆ.

ಸವರ್ಣೀಯರ ಮನೆಗಳಿಗೆ ದಲಿತರಿಗೆ ನಿಷೇದ, ಅದೇ ರೀತಿ ದಲಿತರ ನಡುವೆಯೇ ಇರುವ ಉಪಜಾತಿಗಳಲ್ಲಿಯೂ ಅಸ್ಪೃಶ್ಯತೆ ಆಚರಣೆ ಈಗಲೂ ಜೀವಂತವಾಗಿರುವುದನ್ನು ಗಮನಿಸಬಹುದು. ಮನೆಗೆ ಪ್ರವೇಶ, ಕುಡಿಯುವ ನೀರು, ದೇವಸ್ಥಾನಗಳ ಪ್ರವೇಶಗಳ ನಿಷೇದದಲ್ಲಿ ಸಾಕಷ್ಟು ಪ್ರಗತಿಪರವಾಗಿ ಬದಲಾವಣೆ ಆಗಿದ್ದರೂ ಪೂರ್ಣ ಬದಲಾವಣೆ ಆಗಿಲ್ಲ.

ಸಮಾಜದ ಅರ್ಧದಷ್ಟು ಇರುವ ಮಹಿಳೆಯರ ಸಾಮಾಜಿಕ ಪರಿಸ್ಥಿತಿ ಅಸಮಾನತೆಯಿಂದಲೇ ಕೂಡಿದೆ. ಆರ್ಥಿಕ–ಸಾಮಾಜಿಕ–ಸಾಂಸ್ಕೃತಿಕ ಹಾಗೂ ರಾಜಕೀಯವಾಗಿ ಇಂದಿಗೂ ಶೋಷಣೆಗೆ ಒಳಪಡುತ್ತಿದ್ದಾರೆ. ಶೇ. 75% ರಷ್ಟು ದುಡಿಯುವ ಮಹಿಳೆಯರಿದ್ದು, ಪುರುಷರಷ್ಟೆ ಸಮವಾಗಿ ಶ್ರಮವಹಿಸುವ ಇವರಿಗೆ ಅಸಮಾನ ಕೂಲಿ ಇದೆ. ಪಾಳೇಗಾರಿ ಮೌಲ್ಯಗಳಿಗೆ ಬಲಿಯಾಗುತ್ತಿದ್ದ ಇವರು ಇತ್ತೀಚೆಗೆ ಸಂಘಟಿತರಾಗಿ ಹೋರಾಟಗಳನ್ನು ನಡೆಸಲು ಮುಂದೆ ಬರುತ್ತಿದ್ದಾರೆ. ಸಂಘಟನಾ ಶಕ್ತಿಯನ್ನು ರೂಢಿಸಿಕೊಂಡಿರುವ ಇವರಿಗೆ ರಾಜಕೀಯ ಪಕ್ಷಗಳು ಆಸೆ ಆಮಿಷಗಳನ್ನು ಒಡ್ಡಿ ಇವರ ಸಂಘಟನಾ ಶಕ್ತಿಯನ್ನು ದುರ್ಬಲಗೊಳಿಸಿದ್ದಾರೆ.

ಮಹಿಳಾ ಸಬಲೀಕರಣ, ಮಹಿಳಾ ಹಕ್ಕುಗಳ ರಕ್ಷಣೆ ಕಾಯ್ದೆಗಳಿಂದ ಇವರ ಮೇಲಿನ ದೌರ್ಜನ್ಯ ಕಿರುಕುಳ ಸ್ವಲ್ಪಮಟ್ಟಿಗೆ ಸುಧಾರಿಸಿದ್ದರೂ ಸಾಕಷ್ಟು ಪ್ರಕರಣಗಳು ದಿನನಿತ್ಯ ನಡೆಯುತ್ತಿವೆ. ಉದ್ಯೋಗ ಮತ್ತು ಸ್ಥಳೀಯ ಮಟ್ಟದ ರಾಜಕಾರಣದಲ್ಲಿ ಮೀಸಲಾತಿ ದೊರಕಿದ್ದರು, ಮೇಲ್‌ಮಟ್ಟದಲ್ಲಿ ಮೀಸಲಾತಿಗಾಗಿ ಹೋರಾಟಗಳು ಮುಂದುವರೆದಿವೆ. ರಾಜಕೀಯದಲ್ಲಿ ಮಹಿಳೆಯರಿಗೆ ಅಧಿಕಾರ ಸಿಕ್ಕಿದರು ಶೇ.90% ರಷ್ಟು ಅಧಿಕಾರವನ್ನು ಅವರ ಮನೆಯ ಪುರುಷರೇ ಚಲಾಯಿಸುತ್ತಾರೆ. ಆರ್ಥಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ ಇನ್ನು ಅತಂತ್ರವಾಗಿರಲು ನಮ್ಮಲ್ಲಿರುವ ಈ ಪಾಳೇಗಾರಿ ಮೌಲ್ಯಗಳು ಇನ್ನು ಜೀವಂತವಾಗಿರುವುದೇ ಕಾರಣ ಎನ್ನಬಹುದು.

ದೊಂಬರಾಟ ಮತ್ತು ಪಕ್ಷಾಂತರ ರಾಜಕಾರಣ ಮಾಡುವ ವರ್ತೂರು ಪ್ರಕಾಶ್ ಕೋಲಾರ ತಾಲ್ಲೂಕಿನಲ್ಲಿ ತನ್ನ ಹಿಡಿತವನ್ನು ಇಟ್ಟುಕೊಂಡು ಮಂತ್ರಿಸ್ಥಾನ ಗಿಟ್ಟಿಸಿಕೊಂಡು ಜಿಲ್ಲೆಯ ಉಸ್ತುವಾರಿ ಸಚಿವರಾಗಿದ್ದಾರೆ. ಈ ಕಳೆದ ನಾಲ್ಕು ವರ್ಷಗಳಲ್ಲಿ ಮುಖ್ಯವಾಗಿ ವಿಧಾನಸಭೆ, ಲೋಕಸಭೆ, ಗ್ರಾಮ ಪಂಚಾಯ್ತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯ್ತಿಗೆ ಹೊಸದಾಗಿ ಚುನಾವಣೆಗಳು ನಡೆದಿವೆ. ಕಾಂಗ್ರೆಸ್, ಜೆ.ಡಿ.ಎಸ್ ಮತ್ತು ಬಿಜೆಪಿಯಲ್ಲಿ ಪಕ್ಷಾಂತರ ರಾಜಕಾರಣ ನಿರಂತರವಾಗಿ ನಡೆಯುತ್ತಿದೆ. ಲಂಚ, ಭ್ರಷ್ಟಾಚಾರ, ಭೂ ಹಗರಣಗಳಲ್ಲಿ ಜಿಲ್ಲೆಯ ಮಾಜಿ ಸಚಿವರು ಮತ್ತೊಬ್ಬ ಶಾಸಕರು ಜೈಲಿಗೆ ಹೋಗಿ ಬಂದಿದ್ದಾರೆ. ಇದು ಜಿಲ್ಲಾ ರಾಜಕಾರಣದಲ್ಲಿ ನಾಚಿಕೆಯ ವಿಷಯವಾಗಿದೆ.

ಜಿಲ್ಲೆಗೆ ಸಮರ್ಥ ಉಸ್ತುವಾರಿ ಸಚಿವರು ಇಲ್ಲದೆ ನಿರಂತರ ಬದಲಾವಣೆ ಹಾಗೂ ಪದೇ ಪದೇ ಜಿಲ್ಲಾಧಿಕಾರಿಗಳ ವರ್ಗಾವಣೆಗಳಿಂದ ಜಿಲ್ಲೆಯ ಆಡಳಿತ ಸುಧಾರಣೆ ಅಭಿವೃದ್ಧಿ ಕುಂಠಿತವಾಗಿ ನಡೆದಿದೆ. ಜಿಲ್ಲೆಯ ಅಭಿವೃದ್ಧಿ ಮತ್ತು ಜನರು ಬಾದಿಸುವ ನಿರ್ದಿಷ್ಟ ಪ್ರಶ್ನೆಗಳನ್ನು ಎತ್ತಿ ಹೋರಾಟ ನಡೆಸುವಲ್ಲಿ ಪ್ರಬಲ ರಾಜಕೀಯ ಪಕ್ಷಗಳಾದ ಕಾಂಗ್ರೆಸ್ ಮತ್ತು ಜೆ.ಡಿ.ಎಸ್ ವಿಫಲವಾಗಿವೆ. ಸಿಪಿಐ(ಎಂ) ಪಕ್ಷ ಈ ನಾಲ್ಕು ವರ್ಷಗಳಲ್ಲಿ ಜನರ ಸಮಸ್ಯೆಗಳಾದ ಬೆಲೆ ಏರಿಕೆ, ರೇಷನ್ ಕಾರ್ಡ್, ಆಹಾರದ ಪ್ರಶ್ನೆ, ಉದ್ಯೋಗ ಖಾತ್ರಿ, ಮನೆ ನಿವೇಶನ, ವಿದ್ಯುತ್, ಅಸಂಘಟಿತ ಕಾರ್ಮಿಕರ ಪ್ರಶ್ನೆಗಳು, ರೈತ ವಿರೋಧಿ ನೀತಿಗಳನ್ನು ಖಂಡಿಸಿ ಅನೇಕ ಹೋರಾಟಗಳನ್ನು ಸಂಘಟಿಸಿದೆ.

ಜನಪರ ಚಳುವಳಿ ಮತ್ತು ಹೋರಾಟಗಳಿಗೆ ಹೆಸರು ವಾಸಿಯಾಗಿದ್ದ ಜಿಲ್ಲೆಯಲ್ಲಿ ಭ್ರಷ್ಟ ಹಾಗೂ ಅನೈತಿಕ ರಾಜಕಾರಣ ವೇಗವಾಗಿ ಬೆಳೆಯುತ್ತಿದೆ. ಭೂಗಳ್ಳರು, ರಿಯಲ್ ಎಸ್ಟೇಟ್ ದಂದೆಕೋರರು, ಅಕ್ರಮವಾಗಿ ಹಣ ಸಂಪಾದನೆ ಮಾಡುವ ಕೆಲವು ವ್ಯಕ್ತಿಗಳು ಜಿಲ್ಲೆಯ ರಾಜಕಾರಣದಲ್ಲಿ ಪ್ರವೇಶ ಮಾಡಿ ರಾಜಕಾರಣವನ್ನು ಮಲೀನಗೊಳಿಸುತ್ತಿದ್ದಾರೆ. ಭ್ರಷ್ಟ ಅನೈತಿಕ ರಾಜಕಾರಣವನ್ನು ತಡೆಯಲು ಮಾಡದಿದ್ದರೆ ಇದು ಅತಿ ಹೆಚ್ಚು ಕಾರ್ಮಿಕ ವರ್ಗ ಇರುವ ಕೆಜಿಎಫ್ ನಲ್ಲಿ ಮೊದಲ ಬಾರಿಗೆ ಬಿಜೆಪಿ ಅಧಿಕಾರ ಹಿಡಿದಿದೆ.

2008 ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್–2, ಜೆಡಿಎಸ್–1, ಬಿಜೆಪಿ–2, ಪಕ್ಷೇತರ–1 ಸ್ಥಾನ ಪಡೆದಿದ್ದವು. ಅವಿಭಜಿತ ಕೋಲಾರ ಜಿಲ್ಲೆ ಇದ್ದಾಗ 2004 ರಲ್ಲಿ ಬಿಜೆಪಿ ಪಕ್ಷಕ್ಕೆ ಎರಡು ಕ್ಷೇತ್ರಗಳಲ್ಲಿ ಗೆಲುವು ಸಿಕ್ಕಿದ್ದು ಬಿಟ್ಟರೆ ಉಳಿದ ಕ್ಷೇತ್ರಗಳಲ್ಲಿ ಅಂತಹ ಮತಗಳು ದೊರೆಯಲಿಲ್ಲ. 2008ರ ಚುನಾವಣೆಯಲ್ಲಿ ಆ ಪಕ್ಷಕ್ಕೆ ಬಿದ್ದ ಮತಗಳು ಹೆಚ್ಚಾಗಿದ್ದು ಮಾತ್ರವಲ್ಲದೆ ರಾಜ್ಯದಲ್ಲಿ ಅಧಿಕಾರ ಚುಕ್ಕಾಣಿ ಹಿಡಿದ ಮೇಲೆ ಜಿಲ್ಲೆಯಲ್ಲಿ ತನ್ನ ಪ್ರಭಾವವನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸಿತು. ಬಂಗಾರಪೇಟೆ ಕ್ಷೇತ್ರದಿಂದ ಕಾಂಗ್ರೆಸ್ ಪಕ್ಷದಲ್ಲಿ ಶಾಸಕರಾಗಿ ಆಯ್ಕೆಯಾಗಿದ್ದ ನಾರಾಯಣ ಸ್ವಾಮಿಯನ್ನು ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಡಿಸಿ ಮದ್ಯಂತರ ಚುನಾವಣೆ ನಡೆಸಿ ಬಿಜೆಪಿ ಪಕ್ಷದಿಂದ ಗೆಲ್ಲಿಸಿಕೊಂಡರು. ಕೋಲಾರ ಕ್ಷೇತ್ರದಿಂದ ಪಕ್ಷೇತರರಾಗಿ ಗೆದ್ದಿದ್ದ ವರ್ತೂರು ಪ್ರಕಾಶ್‌ರವರಿಗೆ ಮಂತ್ರಿಸ್ಥಾನ ನೀಡುವ ಮೂಲಕ ಬಲವನ್ನು ಹೆಚ್ಚಿಸಿಕೊಂಡಿತಲ್ಲದೆ, 2010 ರ ಜಿಲ್ಲಾ ಸಹಕಾರಿ ಕ್ಷೇತ್ರಗಳಿಗೆ ಚುನಾವಣೆ ನಡೆದಾಗ ಜಿಲ್ಲಾ ಹಾಲು ಒಕ್ಕೂಟ ಮತ್ತು ಸಹಕಾರ ಸಂಘಗಳ ಚುನಾವಣೆಯಲ್ಲಿ ಬಿಜೆಪಿ ಗೆಲುವು ಸಾಧಿಸಿತ್ತು. ಈ ಗೆಲುವುಗಳು ಜಿಲ್ಲೆಯ ಕೆಲವು ರಾಜಕಾರಣಿಗಳ ದೊಂಬರಾಟದಿಂದ ಸಾಧ್ಯವಾಗಿದೆ. ಪುರಸಭೆ ಮತ್ತು ನಗರಸಭೆಗಳಲ್ಲಿ ಈ ಬದಲಾವಣೆಗಳು ಆಗಿ ಇತ್ತೀಚೆಗೆ ನಡೆದ ಜಿಲ್ಲಾ ಪಂಚಾಯ್ತಿ ಚುನಾವಣೆ ನಂತರ ಕೋಲಾರ ಜಿಲ್ಲಾ ಪಂಚಾಯ್ತಿಯನ್ನು ತನ್ನ ತೆಕ್ಕೆಗೆ ಸೆಳೆದುಕೊಂಡಿದೆ. 2010ರ ಗ್ರಾಮ ಪಂಚಾಯತಿ ಚುನಾವಣೆಗಳಲ್ಲಿ ಬಿಜೆಪಿ ಪಕ್ಷ ಸ್ಥಳೀಯವಾಗಿ ಅಧಿಕಾರ ಹಿಡಿಯಲು ದೊಡ್ಡ ಪ್ರಮಾಣದಲ್ಲಿ ಖರ್ಚು ಮಾಡಿದರೂ, ಮಾಲೂರು ಮತ್ತು ಬಂಗಾರಪೇಟೆ ಬಿಟ್ಟರೆ ಬೇರೆ ತಾಲ್ಲೂಕುಗಳಲ್ಲಿ ಖಾತೆ ತೆರೆಯಲು ಸಾಧ್ಯವಾಗಲಿಲ್ಲ.

ಡಿಸೆಂಬರ್ 2010 ಮತ್ತು ಜನವರಿ 2011 ರಲ್ಲಿ ನಡೆದ ರಾಜ್ಯದ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯ್ತಿ ಚುನಾವಣೆಗಳು ಜಿಲ್ಲೆಯಲ್ಲಿ ಸಾಕಷ್ಟು ಬದಲಾವಣೆಗಳನ್ನು ತಂದಿದೆ. ಚುನಾವಣಾ ಪೂರ್ವದಲ್ಲೇ ಜಿಲ್ಲಾ ಕಾಂಗ್ರೆಸ್‌ನ ಭಿನ್ನಮತ, ರಾಜಕೀಯ ಪಕ್ಷಗಳ ನಾಯಕರ ಪಕ್ಷಾಂತರ, ಹಣದ ದುಂದು ವೆಚ್ಚಗಳ ನಡುವೆ ಜನರು ಊಹಿಸಲು ಅಸಾಧ್ಯವಾದ ರೀತಿಯಲ್ಲಿ ಫಲಿತಾಂಶಗಳು ಬಂದಿವೆ. ಎರಡನೇ ಸ್ಥಾನದಲ್ಲಿದ್ದ ಜೆಡಿಎಸ್ ಜಿಲ್ಲೆಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಗಿಂತ ಹೆಚ್ಚು ಸ್ಥಾನಗಳನ್ನು ಪಡೆದುಕೊಂಡಿದೆ. ಮಾಜಿ ಸಚಿವ ಕೆ.ಶ್ರೀನಿವಾಸಗೌಡರು ಮತ್ತೆ ಜೆಡಿಎಸ್‌ಗೆ ಸೇರ್ಪಡೆಯಾಗಿದ್ದು, ಪಕ್ಷದ ಬಲವರ್ಧನೆಗೆ ಸಹಾಯವಾಗಿದೆ. **ಒಟ್ಟು 28 ಜಿಲ್ಲಾ ಪಂಚಾಯ್ತಿ ಸ್ಥಾನಗಳಲ್ಲಿ** ಜೆಡಿಎಸ್–11, ಬಿಜೆಪಿ–7, ಕಾಂಗ್ರೆಸ್–5, ವರ್ತೂರ್ ಬಣ–3, ಪಕ್ಷೇತರರು–2 **ತಾಲ್ಲೂಕು ಪಂಚಾಯತಿ ಸ್ಥಾನಗಳ ಒಟ್ಟು–102** ರಲ್ಲಿ ಜೆಡಿಎಸ್–33, ಬಿಜೆಪಿ–30, ಕಾಂಗ್ರೆಸ್–ಐ–24, ವರ್ತೂರು ಬಣ–10, ಪಕ್ಷೇತರರು–5 ಸ್ಥಾನಗಳು ಬಂದಿವೆ. ಕಳೆದ ಚುನಾವಣೆಯಲ್ಲಿ ಎರಡು ತಾಲ್ಲೂಕುಗಳಲ್ಲಿ ಖಾತೆ ತೆರೆದಿದ್ದ (ಮಾಲೂರು+ಬಂಗಾರಪೇಟೆ) ಬಿಜೆಪಿ ಈ ಚುನಾವಣೆಯಲ್ಲಿ ಅದೇ ತಾಲ್ಲೂಕುಗಳಲ್ಲಿ ತಮ್ಮ ಸಂಖ್ಯೆ ಹೆಚ್ಚಿಸಿಕೊಳ್ಳುವ ಮೂಲಕ ಜಿಲ್ಲೆಯಲ್ಲಿ 3ನೇ ಸ್ಥಾನದಲ್ಲಿದ್ದ ಪಕ್ಷ ಎರಡನೇ ಸ್ಥಾನಕ್ಕೆ ಬಂದಿದೆ. ಲೋಕಸಭಾ ಚುನಾವಣೆಗಳಿಗೆ ಸೀಮಿತವಾಗಿದ್ದ ಬಿಜೆಪಿ ಪಕ್ಷ ಪ್ರಥಮ ಬಾರಿಗೆ ಸ್ಥಳೀಯ ಚುನಾವಣೆಗಳಲ್ಲಿ ನಮ್ಮ ಜಿಲ್ಲೆಯಲ್ಲಿ ಗೆಲುವು ಪಡೆದಿರುವುದು ಬಲ ಪ್ರತಿಗಾಮಿ ಶಕ್ತಿಗಳು ಕ್ರೋಢೀಕರಣಗೊಳ್ಳುತ್ತಿರುವುದು ಕಂಡು ಬರುತ್ತಿದೆ. ಜಿಲ್ಲಾ ಪಂಚಾಯ್ತಿಯಲ್ಲಿ 5 ವರ್ಷಗಳಿಂದ ಅಧಿಕಾರದಲ್ಲಿದ್ದ ಕಾಂಗ್ರೆಸ್ ಪಕ್ಷ ತನ್ನ ಭಿನ್ನಮತದಿಂದ 3ನೇ ಸ್ಥಾನಕ್ಕೆ ಹೋಗಿದೆ. ಕಾಂಗ್ರೆಸ್ ಹಾಗೂ ಜನತಾ ಪರಿವಾರದ ಹಿಡಿತದಲ್ಲಿದ್ದ ಜಿಲ್ಲಾಪಂಚಾಯ್ತಿ ಈ ವರ್ಷ ಅನುಕೂಲಕರ ಮೀಸಲಾತಿಯ ಭಾಗವಾಗಿ ಬಿಜೆಪಿಯ ಪಾಲಾಗಿದೆ. ತಾಲ್ಲೂಕು ಪಂಚಾಯ್ತಿ ಗಳಲ್ಲಿ ಶ್ರೀನಿವಾಸಪುರ–ಮುಳಬಾಗಿಲು ಜೆಡಿಎಸ್, ಮಾಲೂರು–ಬಂಗಾರಪೇಟೆ–ಬಿಜೆಪಿ, ಕೋಲಾರ ವರ್ತೂರು ಬಣ ಅಧಿಕಾರವನ್ನು ಹಿಡಿದಿವೆ.

ಸರ್ಕಾರಗಳ ಭ್ರಷ್ಟಾಚಾರ, ಹಗರಣಗಳು, ಆರ್ಥಿಕ ನೀತಿಗಳು ಮತ್ತು ಕೋಮುವಾದ ನೀತಿಗಳ ವಿರುದ್ಧ ನಿರಂತರವಾಗಿ ಹೋರಾಟಗಳನ್ನು ನಡೆಸಿದ ಸಿಪಿಐ(ಎಂ) ಪಕ್ಷ 3 ಜಿಲ್ಲಾ ಪಂಚಾಯ್ತಿ ಸ್ಥಾನಗಳಿಗೆ, 11 ತಾಲ್ಲೂಕು ಪಂಚಾಯ್ತಿ ಸ್ಥಾನಗಳಿಗೆ ಕೋಲಾರ, ಶ್ರೀನಿವಾಸಪುರ, ಮಾಲೂರು ತಾಲ್ಲೂಕುಗಳಲ್ಲಿ ಸ್ಪರ್ಧೆ ಮಾಡಿತ್ತು. ಉದ್ಯೋಗ ಖಾತ್ರಿ ಯೋಜನೆ ಜಾರಿಗೊಳಿಸಲಾದ ಸುಗಟೂರು ಮತ್ತು ಹುತ್ತೂರು ಜಿಲ್ಲಾ ಪಂಚಾಯ್ತಿ ಕ್ಷೇತ್ರಗಳಲ್ಲಿ ಸ್ವಲ್ಪ ಸಮಾಧಾನಕರ ಮತಗಳು ಬಂದಿದ್ದು ಬಿಟ್ಟರೆ ಉಳಿದ ಕ್ಷೇತ್ರಗಳಲ್ಲಿ ಎಲ್ಲಾ ನಮಗೆ ಸಿಗಬೇಕಾದ ಮತಗಳ ಪ್ರಮಾಣಕ್ಕಿಂತ ಕಡಿಮೆಯಾಗಿರುವುದನ್ನು ಗಮನಿಸಿದರೆ ನಾವು ಹೋರಾಟ ಮತ್ತು ಇತರೆ ಚಟುವಟಿಕೆಗಳಿಗೆ ಕೊಡುವಷ್ಟು ಮಹತ್ವ ರಾಜಕೀಯ ಚಟುವಟಿಕೆಗಳಿಗೆ ಕೊಡುತ್ತಿಲ್ಲವೆನಿಸುತ್ತಿದೆ. ಈ ಚುನಾವಣೆಗಳಲ್ಲಿ ಆದ್ಯತೆ ಕ್ಷೇತ್ರವಾದ ಕೆಜಿಎಫ್ ಪ್ರದೇಶದಲ್ಲಿ ಸ್ಪರ್ಧೆ ಮಾಡದಿರುವುದು ಗಂಭೀರ ವಿಷಯವಾಗಿದೆ.

ನಮ್ಮ ಪಕ್ಷದಿಂದ 2008 ವಿಧಾನಸಭಾ ಚುನಾವಣೆಯಲ್ಲಿ ಕೆಜಿಎಫ್ ಕ್ಷೇತ್ರದಿಂದ ಸ್ಪರ್ಧಿಸಲಾಗಿತ್ತು. ಈ ಕ್ಷೇತ್ರದ ಗ್ರಾಮೀಣ ಪ್ರದೇಶದಲ್ಲಿ ನಮ್ಮ ಪಕ್ಷಕ್ಕೆ ಸಂಪರ್ಕಗಳು ಇರಲಿಲ್ಲ. 3354 ಮತಗಳು ನಮ್ಮ ಪಕ್ಷಕ್ಕೆ ಸಿಕ್ಕಿತು. 2007 ರಲ್ಲಿ ಕೆಜಿಎಫ್ ನಗರಸಭೆ ಚುನಾವಣೆಯಲ್ಲಿ ನಮ್ಮ ಪಕ್ಷದಿಂದ ಒಂದು ಸ್ಥಾನ ಗೆಲ್ಲಲಾಗಿದ್ದರು ಪಕ್ಷ ವಿರೋಧಿ ಚಟುವಟಿಕೆಗಳಿಂದ ಅವರನ್ನು ಪಕ್ಷದಿಂದ ಹೊರ ಹಾಕಲಾಯಿತು. ಬಂಗಾರಪೇಟೆ ತಾಲ್ಲೂಕಿನ ಚಿನ್ನಕೋಟೆ ಪಂಚಾಯ್ತಿಯಲ್ಲಿ ನಾವು ಒಂದು ಸ್ಥಾನ ಗೆದ್ದಿದ್ದು, ಮೀಸಲಾತಿಯಲ್ಲಿ ಕಾಂಗ್ರೆಸ್ ಬಂಡಾಯ ಗುಂಪಿನ ಬೆಂಬಲದಿಂದ ಪಂಚಾಯ್ತಿ ಅಧ್ಯಕ್ಷರು ಆಗಿದ್ದಾರೆ. ಹಾಗೆಯೇ ಡಿ.ಕೆ.ಹಳ್ಳಿ ಪಂಚಾಯ್ತಿಯಲ್ಲಿ ಎರಡು ಸ್ಥಾನ ಗೆಲ್ಲಲಾಗಿದೆ. ಕೋಲಾರ ತಾಲ್ಲೂಕಿನ ಜನ್ನಘಟ್ಟ ಗ್ರಾಮ ಪಂಚಾಯ್ತಿ–1, ಉರಿಗಿಲಿ ಗ್ರಾಮ ಪಂಚಾಯ್ತಿ–2, ಶಾಪೂರ್ ಗ್ರಾಮ ಪಂಚಾಯತಿ–1, ಮಾಲೂರಿನ ಅರಳೇರಿ ಗ್ರಾಮ ಪಂಚಾಯತಿ–1 ಸ್ಥಾನಗಳನ್ನು ಗೆಲ್ಲಲಾಗಿದೆ.

ಒಟ್ಟಾರೆಯಾಗಿ ಜಿಲ್ಲೆಯ ರಾಜಕೀಯ ಪರಿಸ್ಥಿತಿ ವಿಶ್ಲೇಷಣೆ ಮಾಡುವಾಗ ದಲಿತ, ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ಬೆಂಬಲದೊಂದಿಗೆ ಬಲಿಷ್ಠವಾಗಿ ಬೇರೂರಿದ್ದ ಕಾಂಗ್ರೆಸ್ ಪಕ್ಷದ ಪ್ರಾಬಲ್ಯ ಕಡಿಮೆಯಾಗುತ್ತಿದೆ. ದೊಡ್ಡ ಸಂಖ್ಯೆಯಲ್ಲಿ ಭೂಹಿಡುವಳಿದಾರರನ್ನು ಅವಲಂಬಿಸಿರುವ ಜೆಡಿಎಸ್ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ. ಇವೆರಡಕ್ಕೂ ಪರ್ಯಾಯ ರಾಜಕಾರಣವನ್ನು ಹುಟ್ಟು ಹಾಕಲು ಸತತ ಪ್ರಯತ್ನ ನಡೆಸುತ್ತಿದ್ದ ನಮ್ಮ ಪಕ್ಷ ಜನರ ಪ್ರಶ್ನೆಗಳನ್ನು ತೆಗೆದು ಕೊಂಡು ಹೋರಾಟಗಳನ್ನು ನಡೆಸುತ್ತಿದ್ದರು. ಭ್ರಷ್ಟರಾಜಕಾರಣ ಮತ್ತು ಹಣದ ಮುಂದೆ ರಾಜಕೀಯ ಶಕ್ತಿಯಾಗಿ ಹೊರಬರಲು ಸಾಧ್ಯವಾಗಿಲ್ಲ. ನಮ್ಮ ಹೋರಾಟಗಳು ಹಾಗೂ ಸಂಘಟನಾ ಶಕ್ತಿಯನ್ನು ರಾಜಕೀಯವಾಗಿ ಬದಲಾವಣೆ ಮಾಡುವಲ್ಲಿ ನಮ್ಮ ಪ್ರಯತ್ನಗಳು ಸಾಲದಾಗಿದೆ. ಮುಂದಿನ ದಿನಗಳಲ್ಲಿ ಇದು ಹೆಚ್ಚು ಆಗಬೇಕಾಗಿದೆ. ಜಾತ್ಯಾತೀತ ಶಕ್ತಿಗಳು ಒಂದಾಗದಿದ್ದರೆ ಬಲ ಪ್ರತಿಗಾಮಿ ಶಕ್ತಿಗಳು ಕ್ರೋಢೀಕರಣ ಹೆಚ್ಚಾಗುವ ಅಪಾಯಗಳಿವೆ. ಕಾಂಗ್ರೆಸ್ ಮತ್ತು ಜೆಡಿಎಸ್ ನ ಸಮಯ ಸಾಧಕ ರಾಜಕಾರಣದಿಂದ ಜಾತ್ಯಾತೀತ ಶಕ್ತಿಗಳ ಬಲ ಕಡಿಮೆಯಾಗಿ ಕೊನೆಗೆ ಬಿಜೆಪಿ ಮೇಲುಗೈ ಸಾಧಿಸುವ ಅವಕಾಶಗಳು ಹೆಚ್ಚಾಗಲಿವೆ.

ಜಿಲ್ಲೆಯಲ್ಲಿ ಕೋಮುವಾದಿ ಶಕ್ತಿಗಳು ಜನರ ಮೌಢ್ಯತೆಯನ್ನು ಬಳಸಿಕೊಂಡು ಕೋಲಾರದಲ್ಲಿರುವ ಅಂತರಗಂಗೆಯಲ್ಲಿ ಕಾರ್ತಿಕ ಸೋಮವಾರ ಸಂದರ್ಭದಲ್ಲಿ ಕೋಮು ಭಾವನೆಗಳನ್ನು ಕೆರಳಿಸುವ ಭಿತ್ತಿ ಪತ್ರಗಳು, ಬ್ಯಾನರ್‌ಗಳನ್ನು ಅಳವಡಿಸುವುದು ನಡೆಯುತ್ತಿದೆ. ಕೆಲವು ಸಂದರ್ಭಗಳಲ್ಲಿ ಉಂಟಾಗುವ ಅಹಿತಕರ ಘಟನೆಗಳನ್ನು ಉದ್ರೇಕಿಸಿ ಕೋಮು ದಳ್ಳುರಿಗೆ ಪ್ರಯತ್ನಿಸುತ್ತಿದೆ. ಇತ್ತೀಚೆಗೆ ಕೋಲಾರದ ರಸ್ತೆ ವಿಸ್ತರಣೆ ಸಂದರ್ಭದಲ್ಲಿ ದೇವಸ್ಥಾನದ ಕಾಂಪೌಂಡ್ ತೆಗೆಯುವ ವಿಷಯ ಮತ್ತು ಯಾರೋ ಕಿಡಿಗೇಡಿಗಳು ದೇವಸ್ಥಾನದಲ್ಲಿ ಮಾಂಸ ಹಾಕಿರುವ ವಿಚಾರದಲ್ಲಿ ಕೋಮುವಾದಿಗಳ ಶಕ್ತಿ ಪ್ರದರ್ಶನವನ್ನು ಗಮನಿಸಬೇಕಾಗಿದೆ. ■

ಜನಶಕ್ತಿ
ಕನ್ನಡ ವಾರಪತ್ರಿಕೆ

ಆಹಾರ ಭದ್ರತೆಯ ಮಸೂದೆ: ಕೃಷಿ ಕಾರ್ಪೊರೇಟ್‌ಗಳಿಗಾಗಿ?

ಕೊನೆಗೂ ಆಹಾರ ಭದ್ರತೆಯ ಮಸೂದೆಯನ್ನು ಕೇಂದ್ರ ಸಂಪುಟ ಮಂಜೂರು ಮಾಡಿದೆ. ಸೋನಿಯಾ ಗಾಂಧಿ ಅಧ್ಯಕ್ಷತೆಯ ರಾಷ್ಟ್ರೀಯ ಸಲಹಾ ಮಂಡಳಿ (ಎನ್‌ಎಸಿ) ಮತ್ತು ಮನಮೋಹನ್ ಸಿಂಗ್ ಸರಕಾರದ ನಡುವೆ ಜಗ್ಗಾಟದ ನಂತರ ಈಗ ಸಂಸತ್ತಿನ ಮುಂದೆ ಬಂದಿರುವ ಮಸೂದೆ ಯುಪಿಎ-1 ಸರಕಾರ ಎಡಪಕ್ಷಗಳ ಒತ್ತಡದಿಂದ ತಂದ ಮಾಹಿತಿ ಹಕ್ಕು ಕಾನೂನು ಮತ್ತು ರೇಗಾ ಕಾನೂನಿನಂತೆ ಯುಪಿಎ-2 ಸರಕಾರದ ಮಹಾಸಾಧನೆ, ವೈಯಕ್ತಿಕವಾಗಿ ತನ್ನ ಮಹಾಸಾಧನೆ ಎಂಬಂತೆ ಸೋನಿಯಾ ಗಾಂಧಿಯವರು ಮಾತನಾಡಿದ್ದಾರೆ. ಆದರೆ ಇದು ನಿಜವಾಗಿಯೂ ಭಾರತದ ಕೋಟಿಗಟ್ಟಲೆ ಬಡಜನರಿಗೆ ಆಹಾರ ಭದ್ರತೆಯನ್ನು ಕೊಡುತ್ತದೆಯೇ ಎಂಬುದು ಈಗಲೂ ಪ್ರಶ್ನೆ ಚಿಹ್ನೆಯಾಗಿಯೇ ಉಳಿದಿದೆ.

ವಾಸ್ತವವಾಗಿ ಒಂದು ಬಲವಾದ ಆಹಾರ ಭದ್ರತಾ ಕಾನೂನು ಇರಬೇಕೆಂಬ ವ್ಯಾಪಕವಾದ ಭಾವನೆಯನ್ನು ಬಳಸಿಕೊಂಡು ಕೃಷಿ ಉದ್ದಿಮೆದಾರರ, ಕಾರ್ಪೊರೇಟ್‌ಗಳ ಸಂಕುಚಿತ ಅಜೆಂಡಾವನ್ನು ತೂರಿಸುವುದು ಯುಪಿಎ-2 ಸರಕಾರದ ಆಶಯವಿರುವಂತೆ ಕಾಣುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಟಿಪ್ಪಣಿ ಮಾಡಿದೆ. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಕಳಚಿ ಹಾಕುವುದು ಮತ್ತು ಒಂದು ಮೊಟಕಾದ ಆಹಾರ ಭದ್ರತೆ ಕಾನೂನು ಇರಬೇಕೆಂಬುದು ಕೃಷಿ ಕಾರ್ಪೊರೇಟುಗಳ ಅಜೆಂಡಾ.

ಇದು ಈಗಿರುವ ಎಪಿಎಲ್, ಬಿಪಿಎಲ್ ಎಂಬ ದೋಷಮಯ ವ್ಯವಸ್ಥೆಯನ್ನು 'ಆದ್ಯತೆ' ಮತ್ತು 'ಸಾಮಾನ್ಯ' ಎಂಬ ಹೊಸ ಹೆಸರಿನಲ್ಲಿ ಮುಂದುವರೆಸುತ್ತದಷ್ಟೇ ಅಲ್ಲ, ಆಹಾರಧಾನ್ಯಗಳ ಬದಲು ಆಹಾರ ಕೂಪನುಗಳು ಮುಂತಾದ ಅತ್ಯಂತ ವಿವಾದಾತ್ಮಕ ಕ್ರಮಗಳನ್ನು ಸೇರಿಸಲಾಗಿದೆ. ಈ ಎಲ್ಲ ಅಂಶಗಳು ಈ ಮಸೂದೆಯನ್ನು ಜನ-ವಿರೋಧಿಯಾದ ನವ-ಉದಾರವಾದಿ 'ಸುಧಾರಣೆ'ಗಳಿಗೆ ಕಾನೂನು ಸ್ವರೂಪ ಕೊಡುವ ಒಂದು ವೇದಿಕೆಯಾಗಿ ಪರಿವರ್ತಿಸಿವೆ ಎಂದು ಸಿಪಿಐ(ಎಂ) ಟೀಕಿಸಿದೆ.

ಅಲ್ಲದೆ ಇದು ನಮ್ಮ ದೇಶದ ಒಕ್ಕೂಟ ಸ್ವರೂಪವನ್ನು ಕೂಡ ಉಲ್ಲಂಘಿಸುತ್ತದೆ. ಇದನ್ನು ಜಾರಿಗೊಳಿಸುವ ದಿನಾಂಕವನ್ನು ನಿರ್ಧರಿಸುವ ಹಕ್ಕನ್ನು ಕೇಂದ್ರ ಸರಕಾರವೇ ಇಟ್ಟುಕೊಂಡಿದ್ದು, ರಾಜ್ಯ ಸರಕಾರಗಳೆಲ್ಲವೂ ಇದನ್ನು ಪಾಲಿಸಲೇಬೇಕು ಎಂದು ವಿಧಿಸಲಾಗಿದೆ. ಒಂದು ರಾಜ್ಯದಲ್ಲಿ ಬಡತನದ ರೇಖೆಯ ಕೆಳಗಿರುವ ಜನಗಳ ಸಂಖ್ಯೆಯನ್ನು ಕೂಡ ಕೇಂದ್ರ ಸರಕಾರವೇ ನಿರ್ಧರಿಸುತ್ತದೆ ಹಾಗೂ ಈ ಮಸೂದೆಯಲ್ಲಿ ಸೇರಿಸಿದ ಇತರ ಸ್ಕೀಮುಗಳಿಗೂ ರಾಜ್ಯ ಸರಕಾರ ಪಾಲು ಕೊಡುವಂತೆ ಮಾಡಲಾಗಿದೆ. ಕೆ.ಜಿ.ಗೆ 2ರೂ.ನಂತೆ 35 ಕೆ.ಜಿ. ಆಹಾರ ಧಾನ್ಯಗಳನ್ನು ಪಡೆಯುವ ಸಾರ್ವತ್ರಿಕ ಹಕ್ಕಿನ ಪ್ರಸ್ತಾಪ ಈ ಮಸೂದೆಯಲ್ಲಿಲ್ಲ.

★

ಪೆನ್ಶನ್ ನಿಧಿ ಮಸೂದೆ ಕೈಬಿಟ್ಟ ಯುಪಿಎ-2 ಸರಕಾರ

ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐ ವಿಷಯದಲ್ಲಿ ಹಿಂದೆ ಸರಿದ, ಎಲ್‌ಐಸಿ ತಿದ್ದುಪಡಿ ಮಸೂದೆಯಲ್ಲಿ ಸ್ಥಾಯೀ ಸಮಿತಿಯ



ಶಿಫಾರಸುಗಳನ್ನು ಒಪ್ಪಿಕೊಳ್ಳಬೇಕಾಗಿ ಬಂದ ಯುಪಿಎ-2 ಸರಕಾರ ಮತ್ತೊಂದು ನವ-ಉದಾರೀಕರಣ ಕ್ರಮವನ್ನು ಸದ್ಯಕ್ಕೆ ಕೈಬಿಡಬೇಕಾಗಿ ಬಂದಿದೆ. ಸಂಸತ್ತಿನಲ್ಲಿ ಅದು ಮಂಡಿಸಿದ ಪೆನ್ಶನ್ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ ಮಸೂದೆಯನ್ನು ಈಗ ಹಿಂತೆಗೆದುಕೊಂಡಿದೆ. ಜತೆಗೆ ಇನ್ನೊಂದು ಪ್ರಮುಖ ಮಸೂದೆ, ಕಂಪನಿ ಮಸೂದೆಯನ್ನು ಕೂಡ ಹಿಂತೆಗೆದುಕೊಂಡಿದೆ.



ವೇದರಾಜ ಎನ್.ಕೆ.

ಯುಪಿಎ ಅಧ್ಯಕ್ಷೆ ಸರಕಾರ ಶಾಸನ ರೂಪಿಸುವ ವಲಯದಲ್ಲಿ ನಿಧಾನವಾಗಿ ಸಾಗಲು ವಿರೋಧ ಪಕ್ಷಗಳ ಅಡಚಣೆ ಕಾರಣ ಎಂದು ಗೋಗರೆದರೂ, ಪ್ರಧಾನ ಮಂತ್ರಿಗಳು ಸಂಸತ್ತು ಸುಸೂತ್ರವಾಗಿ ನಡೆಯಲು ಸಹಕರಿಸಿ ಎನ್ನುತ್ತ ವಾಸ್ತವವಗಿ ಅವು ಸಹಕರಿಸುತ್ತಿಲ್ಲ ಎಂದು ಸೂಚಿಸಿದರೂ, ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐ ವಿಷಯದಲ್ಲಾಗಲೀ, ಪೆನ್ಶನ್ ನಿಧಿ ವಿಷಯದಲ್ಲಾಗಲೀ ಹಿಂದೆ ಸರಿಯಲ್ಲಿ ಪ್ರತಿಪಕ್ಷಗಳು ಒಡ್ಡಿದ 'ಅಡಚಣೆಗಳು' ಕಾರಣವಲ್ಲ. ಈ ಕ್ರಮಗಳಿಗೆ ದೇಶಾದ್ಯಂತ ಬಂದಿರುವ ವಿರೋಧದಿಂದಾಗಿ ಕೆಲವು ಯುಪಿಎ-2 ಅಂಗಪಕ್ಷಗಳು ಕೂಡ ತಮ್ಮದೇ ಉಳಿವಿನ ದೃಷ್ಟಿಯಿಂದ ಈ ಕ್ರಮಗಳ ಬಗ್ಗೆ ಪುನರಾಲೋಚನೆ ಮಾಡಲೇಬೇಕಾಗಿ ಬಂದಿದೆ. ಈ ಎರಡು ವಿಷಯಗಳಲ್ಲಿಯೂ ತನ್ನ ಅಂಗಪಕ್ಷವಾದ ತೃಣಮೂಲ ಕಾಂಗ್ರೆಸ್(ಟಿಎಂಸಿ) ಅಸಮ್ಮತಿಯೂ ಯುಪಿಎ-2 ಸರಕಾರ ಅವನ್ನು ಹಿಂದಕ್ಕೆ ಸರಿಯುವಂತೆ ಮಾಡಿದೆ. ಟಿಎಂಸಿಗೆ ಈ ಎರಡು ಮಸೂದೆಗಳ ಬಗ್ಗೆ ಪ್ರಮುಖ ಅಭ್ಯಂತರವೇನೂ ಇಲ್ಲದಿದ್ದರೂ(ಅದರ ಹಣಕಾಸು ಮಂತ್ರಿಗಳು ಈ ಹಿಂದೆ ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐಯನ್ನು ಸ್ವಾಗತಿಸಿದವರು!) ಅದನ್ನು ವಿರೋಧಿಸಲೇ ಬೇಕಾದಂತಹ ಸನ್ನಿವೇಶ ದೇಶದಲ್ಲಿ ನಿರ್ಮಾಣವಾಗಿದೆ.

ಇಂತಹ ಸನ್ನಿವೇಶ ನಿರ್ಮಾಣವಾಗಿರುವುದು ಯುಪಿಎ-2 ಸರಕಾರ ಅನುಸರಿಸುತ್ತಿರುವ ನವ-ಉದಾರವಾದಿ ಧೋರಣೆಗಳ ಪರಿಣಾಮವಾಗಿ ಎಂಬುದನ್ನು ಕಾಣಲು ಅದು ನಿರಾಕರಿಸುತ್ತಿದೆ.

★

ಏರ್ ಇಂಡಿಯಾಕ್ಕೆ ಕೇಂದ್ರ ಮಂತ್ರಿಗಳಿಂದಲೇ 460 ಕೋಟಿ ರೂ. ಬಾಕಿ

ಹಣದ ಅಭಾವದಿಂದ ನರಳುತ್ತಿರುವ ಸಾರ್ವಜನಿಕ ವಲಯದ ಏರ್ ಇಂಡಿಯಾ ಅನುಭವಿಸುತ್ತಿರುವ ಹಣಕಾಸು ಸಮಸ್ಯೆಗಳಿಗೆ ಹಿಂದಿನ ವಿಮಾನಯಾನ ಮಂತ್ರಿಗಳ ಖಾಸಗೀಪರ ಧೋರಣೆಗಳು, ಕ್ರಮಗಳು ಕಾರಣ ಎಂಬುದು ಇತ್ತೀಚೆಗಷ್ಟೇ ಬೆಳಕಿಗೆ ಬಂದಿದೆ. ಈಗ ಅದರ ನಷ್ಟದಲ್ಲಿ ಕೇಂದ್ರ ಮಂತ್ರಿಗಳ ಪಾಲೇ 460.78 ಕೋಟಿ ರೂ.ಗಳು ಎಂಬುದು ಬಯಲಾಗಿದೆ. ಪ್ರಧಾನ ಮಂತ್ರಿಗಳ ಕಚೇರಿಯ ರಾಜ್ಯ ಮಂತ್ರಿ ವಿ. ನಾರಾಯಣ ಸ್ವಾಮಿ ಸಂಸತ್ ಸದಸ್ಯರ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತ ಕೊಟ್ಟಿರುವ ಮಾಹಿತಿಯಿದು.

ಇವೆಲ್ಲ ಹಿಂದಿನ ಕೇಂದ್ರ ಮಂತ್ರಿಗಳ ಪ್ರಯಾಣ ವೆಚ್ಚದ ಬಾಕಿಗೆ ಯುಪಿಎ-2 ಮಂತ್ರಿಗಳೂ ಸೇರಿಸಿದ ಬಾಕಿಯ ಪರಿಣಾಮ. 2009-10ರಲ್ಲಿ ಸಂಪುಟ ದರ್ಜೆಯ ಯುಪಿಎ-2 ಮಂತ್ರಿಗಳು ವಿದೇಶ ಪ್ರಯಾಣಗಳಿಗೆಂದು ಮಾಡಿದ್ದ ಖರ್ಚು ರೂ. 61.1 ಕೋಟಿ ರೂ. 2010-11ರಲ್ಲಿ ಇದು 37.17 ಕೋಟಿಗೆ ಇಳಿಯಿತು. ಈ ವರ್ಷ ಡಿಸೆಂಬರ್ 16 ರವರೆಗೆ 25 ಕೋಟಿ ರೂ. ಖರ್ಚಾಗಿದೆ. ರಾಜ್ಯ ದರ್ಜೆಯ ಮಂತ್ರಿಗಳ ವಿದೇಶ ಪ್ರಯಾಣ ಖರ್ಚುಗಳು ಈ ಮೂರು ವರ್ಷಗಳಲ್ಲಿ ಒಟ್ಟು 11.8 ಕೋಟಿ ರೂ.ಗಳು. ಈ ಖರ್ಚುಗಳನ್ನು ಇನ್ನೂ ಏರ್ ಇಂಡಿಯಾಕ್ಕೆ ಪಾವತಿ ಮಾಡಿಲ್ಲ! •

ಭಾರತೀಯ ರಾಜಕಾರಣಿಗಳನ್ನು 'ಉತ್ತಮಪಡಿಸಲು' ಅಮೆರಿಕಾದ ತೆರಿಗೆದಾರರ ಹಣವೇಕೆ?

ಇದು ಅಮೆರಿಕಾದ ಒಬ್ಬ ರಾಜಕಾರಣಿ, ಜನಪ್ರತಿನಿಧಿ, ಸೆನೆಟರ್ ಟಾಮ್ ಕೊಬರ್ನ್ ಕೇಳಿರುವ ಪ್ರಶ್ನೆ. ಅಮೆರಿಕಾದ ರಾಷ್ಟ್ರೀಯ ವಿಜ್ಞಾನ ಫೌಂಡೇಶನ್ ದಿಲ್ಲಿಯಲ್ಲಿ ನಾಗರಿಕರಿಗೆ ಮಾಹಿತಿ ಒದಗಿಸುವುದರಿಂದ ಸ್ಥಳೀಯ ಚುನಾಯಿತ ಸಂಸ್ಥೆಗಳಲ್ಲಿ ಅವರ ಪ್ರತಿನಿಧಿಗಳ ಕಾರ್ಯನಿರ್ವಹಣೆಯ ಮೇಲೆ ಎಂತಹ ಪರಿಣಾಮ ಉಂಟು ಮಾಡುತ್ತದೆ ಎಂಬುದನ್ನು ಅಧ್ಯಯನ ಮಾಡಲು 4,25,642 ಡಾಲರುಗಳನ್ನು(ಅಂದರೆ ಸುಮಾರು 2ಕೋಟಿ ರೂ.ಗಳಿಗೂ ಹೆಚ್ಚು) ಒದಗಿಸಿದೆಯಂತೆ. ಅಮೆರಿಕನ್ ತನಿಖೆಗಾರರು ಎರಡು ವರ್ಷಗಳ ಕಾಲ ದಿಲ್ಲಿಯ ನಾಗರಿಕರನ್ನು; ಅಧಿಕಾರಿಗಳನ್ನು ಈ ಬಗ್ಗೆ ವಿಚಾರಿಸುತ್ತಾರಂತೆ.

"ಒಂದು ದೊಡ್ಡ ದೇಶವಾದ ಭಾರತಕ್ಕೆ ತನ್ನ ರಾಜಕೀಯ ಸಂಸ್ಕೃತಿಯನ್ನು ಉತ್ತಮ ಪಡಿಸಲು ಅಮೆರಿಕಾದಿಂದ ಸೂಚನೆಗಳನ್ನು ಪಡೆಯುವ ಆಸಕ್ತಿ ಏಕೆ ಇರುತ್ತದೆ ಎಂಬುದು ಸ್ಪಷ್ಟವಿಲ್ಲ" ಎಂಬುದು ಈ ಸೆನೆಟರ್‌ನ ಅಭಿಪ್ರಾಯ. ಭಾರತದ ಆರ್ಥಿಕದ ಪ್ರಮಾಣ ಈ ಶತಮಾನದ ಮಧ್ಯದ ವೇಳೆಗೆ ಅಮೆರಿಕಾದ ಆರ್ಥಿಕವನ್ನು ದಾಟಿ ಹೋಗುತ್ತದೆ. ಈಗಲೇ ಅಮೆರಿಕಾದ ಸರಕಾರೀ ಸೆಕ್ಯೂರಿಟಿಗಳ(ಅಂದರೆ ಅಲ್ಲಿಯ ರಾಷ್ಟ್ರೀಯ ಸಾಲದಲ್ಲಿ) 40 ಬಿಲಿಯ ಡಾಲರುಗಳು(2ಲಕ್ಷ ಕೋಟಿ ರೂ.ಗಳಿಗಿಂತಲೂ ಹೆಚ್ಚು) ಭಾರತದ ಕೈಯಲ್ಲಿದೆ. ಇಂತಹ ದೇಶದ ಮೇಲೆ ಒಂದು ಅಧ್ಯಯನಕ್ಕೆ ಅಮೆರಿಕಾದ ತೆರಿಗೆದಾರರ ಇಷ್ಟು ಮೊತ್ತವನ್ನು ಏಕೆ ಖರ್ಚು ಮಾಡಬೇಕು ಎಂಬ ಬಗ್ಗೆಯೂ ತಮಗೆ ಸ್ಪಷ್ಟವಿಲ್ಲ ಎನ್ನುತ್ತಾರೆ ಕೊಬರ್ನ್.

ಭಾರತದಲ್ಲೊಂದು ಹತ್ತಿ ಬಟ್ಟೆಯನ್ನು ಬಳಸಿ ಫ್ಯಾಶನೇಬಲ್ ಉಡುಪುಗಳನ್ನು ಸೃಷ್ಟಿಸುವ ಟಿವಿ ರಿಯಲ್ಟಿ ಶೋಗೆ ಅಮೆರಿಕಾದ ಕೃಷಿ ಇಲಾಖೆಯ 'ಮಾರುಕಟ್ಟೆ ಅವಕಾಶ ಕಾರ್ಯಕ್ರಮ'ದ ಅಡಿಯಲ್ಲಿ ಅಮೆರಿಕಾದ ತೆರಗೆದಾರರ ಹಣವನ್ನು ವ್ಯಯಿಸುವ ಅಗತ್ಯವೇನಿದೆ ಎಂದೂ ಅವರಿಗೆ ಸ್ಪಷ್ಟವಾಗಿಲ್ಲವಂತೆ.

ಭಾರತದಲ್ಲಿರುವ ನಮಗೂ ಇಂತಹ ಹಲವು ಪ್ರಶ್ನೆಗಳಿವೆ. ಅವುಗಳಲ್ಲಿ ಇತ್ತೀಚಿನದೆಂದರೆ, ಇಂಡೋನೇಸ್ಯಾದ ಬಾಲಿಯಲ್ಲಿ ಒಬಾಮ-ಅಮೆರಿಕಾ ಭೇಟಿಗೂ ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐ ಅವಕಾಶಕ್ಕೂ ಏನು ಸಂಬಂಧ? ಭಾರತದಲ್ಲಿ ಪೆನ್ಶನ್ ನಿಧಿ ಪ್ರಾಧಿಕಾರವನ್ನು ರಚಿಸುವುದಕ್ಕೂ ಅಮೆರಿಕಾದ ಹಣಕಾಸು ಬಂಡವಾಳಿಗರಿಗೂ ಏನು ಸಂಬಂಧ ? ಇತ್ಯಾದಿ ಇತ್ಯಾದಿ. •

ಜಗದಗಲ

ಶರತ್‌ಚಂದ್ರ

ರಶ್ಯನ್ ಚುನಾವಣೆಯಲ್ಲಿ ಅಕ್ರಮದ ವಿರುದ್ಧ ಆಕ್ರೋಶ

ರಶ್ಯನ್ ಪಾರ್ಲಿಮೆಂಟರಿ ಚುನಾವಣೆಗಳು ನಡೆದಿದ್ದು ಆಳುವ ಪಕ್ಷ 'ಯುನೈಟೆಡ್ ರಶ್ಯಾ' ಪುನಃ ಆಯ್ಕೆ ಆದರೂ ದೊಡ್ಡ ಪ್ರಮಾಣದಲ್ಲಿ ಬೆಂಬಲ ಕಳೆದುಕೊಂಡಿದೆ. ಕಳೆದ ಚುನಾವಣೆಯಲ್ಲಿ ಶೇ. 64 ಮತ ಗಳಿಸಿದ್ದ ಪಕ್ಷ ಈ ಬಾರಿ ಕೇವಲ ಶೇ.49 ಮತ ಗಳಿಸಿದೆ. ಶೇ. 15 ಮತ ಮತ್ತು ಪಾರ್ಲಿಮೆಂಟಿನಲ್ಲಿ (ಒಟ್ಟು 450 ಸೀಟುಗಳಲ್ಲಿ) 77 ಸೀಟುಗಳನ್ನು ಕಳೆದುಕೊಂಡು 238 ಸೀಟು ಪಡೆದಿದೆ. ಅದಕ್ಕೆ ಈಗ ಕೇವಲ 15 ಸೀಟುಗಳ ಬಹುಮತ ಇದೆ.

ಕಮ್ಯುನಿಸ್ಟ್ ಪಕ್ಷ ಈ ಚುನಾವಣೆಗಳಲ್ಲಿ ತನ್ನ ಬೆಂಬಲವನ್ನು ಅತ್ಯಂತ ದೊಡ್ಡ ಪ್ರಮಾಣದಲ್ಲಿ ಹೆಚ್ಚಿಸಿ ಕೊಂಡಿದೆ. ಅದರ ಮತ ಗಳಿಕೆ ಶೇ.11 ರಿಂದ ಶೇ. 20ಕ್ಕೆ ಜಿಗಿದಿದೆ. ಎರಡನೇ ಸ್ಥಾನದಲ್ಲಿದ್ದ 'ಜಸ್ಟ್ ರಶ್ಯಾ'ವನ್ನು ಮೂರನೇ ಸ್ಥಾನಕ್ಕೆ ತಳ್ಳಿ, ಎರಡನೇ ಸ್ಥಾನ ಗಳಿಸಿದೆ. 92 ಸೀಟು ಗಳಿಸುವ ಮೂಲಕ ತನ್ನ ಸೀಟುಗಳ ಸಂಖ್ಯೆಯನ್ನು ಗಮನಾರ್ಹವಾಗಿ ಹೆಚ್ಚಿಸಿಕೊಂಡಿದೆ. 'ಜಸ್ಟ್ ರಶ್ಯಾ' (ಶೇ.12 ಮತ ಗಳಿಕೆ, 64 ಸೀಟುಗಳು) ಮತ್ತು ತೀವ್ರ ಬಲಪಂಥೀಯ 'ಲಿಬರಲ್ ಡೆಮೊಕ್ರಾಟ್ಸ್' (ಶೇ.11 ಮತ ಗಳಿಕೆ, 56 ಸೀಟುಗಳು). ಯಾಬ್ಲೊಕೊ, 'ಪೇಟ್ರಿಯಟ್ಸ್ ಆಫ್ ರಶ್ಯಾ', 'ಜಸ್ಟ್ ಕಾಸ್' ಪಕ್ಷಗಳು ಅಗತ್ಯ ಶೇ. 5 ಮತ ಗಳಿಸಿಲ್ಲ. ಯಾವುದೇ ಸೀಟುಗಳನ್ನು ಗಳಿಸಿಲ್ಲ.

ಆಳುವ ಪಕ್ಷ 'ಯುನೈಟೆಡ್ ರಶ್ಯಾ' ಚುನಾವಣೆಯಲ್ಲಿ ತೀವ್ರ ಅಕ್ರಮಗಳನ್ನು ನಡೆಸಿ ಬಹುಮತ ಕಸಿದಿದೆ ಎಂದು ಗಂಭೀರ ಆಪಾದನೆ ಮಾಡಲಾಗಿದೆ. ಕಮ್ಯುನಿಸ್ಟ್ ನಾಯಕ ಝುಗನೋವ್ ಅಕ್ರಮಗಳಿಂದ ಆಳುವ ಪಕ್ಷ ಶೆ.10 ರಿಂದ 15 ರಷ್ಟು ಮತಗಳಿಕೆ ಹೆಚ್ಚಿಸಿಕೊಂಡಿದೆ. ಅದು ನಿಜವಾಗಿಯೂ ಚುನಾವಣೆ ಸೋತಿದೆ ಎಂದು ಹೇಳಿದ್ದಾರೆ. ಚುನಾವಣೆ ಅಕ್ರಮಗಳ ಬಗ್ಗೆ ರಶ್ಯಾದ ಜನತೆಯಲ್ಲಿ ತೀವ್ರ ಆಕ್ರೋಶ ವ್ಯಕ್ತವಾಗಿದೆ. ಫಲಿತಾಂಶ ಪ್ರಕಟವಾದ ಮರು ದಿನವೇ ಮಾಸ್ಕೊ ಮತ್ತಿತರ ನಗರಗಳಲ್ಲಿ ತೀವ್ರ ಪ್ರತಿಭಟನೆ ವ್ಯಕ್ತವಾಯಿತು. ಮೊದಲ ದಿನದ ಪ್ರತಿಭಟನೆ ಹತ್ತಿಕ್ಕಲು ಭಾರೀ ದೊಡ್ಡ ಪ್ರಮಾಣದಲ್ಲಿ ಸಶಸ್ತ್ರ ಪೋಲೀಸು ಮತ್ತು ಮಿಲಿಟರಿ ಬಳಸಲಾಯಿತು. ದೊಡ್ಡ ಪ್ರಮಾಣದಲ್ಲಿ ದಮನ ಮತ್ತು ಪ್ರತಿಭಟನಾಕಾರರ ಬಂಧನದಿಂದ ಆಕ್ರೋಶ ಇನ್ನಷ್ಟು ಹೆಚ್ಚಾಯಿತು. ಆ ನಂತರದ ಪ್ರದರ್ಶನಗಳಲ್ಲಿ ಒಂದು ಲಕ್ಷಕ್ಕೂ ಹೆಚ್ಚಿನ ಜನ ಭಾಗವಹಿಸಿದರು. ಇದು ಕಳೆದ 20 ವರ್ಷಗಳಲ್ಲೇ ಅತಿ ದೊಡ್ಡ ಪ್ರದರ್ಶನ ಎನ್ನಲಾಗಿದೆ. ಚುನಾವಣೆ ರದ್ದು ಮಾಡಿ ಪುನಃ ಚುನಾವಣೆ ನಡೆಸಲು ಒತ್ತಾಯಿಸಲಾಗುತ್ತಿದೆ.

ಈ ಆಕ್ರೋಶ ಕಂಡು ಬೆದರಿದ ಪುಟಿನ್–ಮೆಡ್ವಡೆವ್ ಸರ್ಕಾರ ದಮನಕಾರಿ ತಂತ್ರಗಳನ್ನು ಬಳಸುವುದರಿಂದ ಹಿಂಜರಿದಿದೆ. ಹಿಂದೆ ಪ್ರತಿಭಟನಾ ಪ್ರದರ್ಶನ ಮತ್ತು ವಿರೋಧ ಪಕ್ಷಗಳ ಚಟುವಟಿಕೆಗಳನ್ನು ಪೂರ್ತಿ 'ಬ್ಲಾಕ್-ಔಟ್' ಮಾಡುತ್ತಿದ್ದ ಸರ್ಕಾರಿ ಮಾಧ್ಯಮಗಳು, ಈ ಪ್ರತಿಭಟನಾ ಪ್ರದರ್ಶನದ ಸುದ್ದಿ ಪ್ರಸಾರ ಮಾಡಿದವು. ಮಾರ್ಚ್‌ನಲ್ಲಿ ನಡೆಯಲಿರುವ ಅಧ್ಯಕ್ಷೀಯ ಚುನಾವಣೆಗಳ ಹಿನ್ನೆಲೆಯಲ್ಲಿ ಇದನ್ನು ನೋಡಬಹುದು. ಈಗ ಪ್ರಧಾನಿಯಾಗಿರುವ ಮತ್ತು ಹಿಂದೆ ಎರಡು ಬಾರಿ ಅಧ್ಯಕ್ಷರಾಗಿದ್ದ ಪುಟಿನ್, ಅಧ್ಯಕ್ಷೀಯ ಚುನಾವಣೆಗಳಲ್ಲಿ 'ಯುನೈಟೆಡ್ ರಶ್ಯಾ'ದ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿದ್ದಾರೆ. ಪಾರ್ಲಿಮೆಂಟರಿ ಚುನಾವಣೆಗಳಲ್ಲಿ ಬೆಂಬಲ ಕುಸಿತ ನೋಡಿ ಅವರಿಗೆ ಆತಂಕವಾಗಿದೆ. ಆಕ್ರೋಶ ಇನ್ನಷ್ಟು ಬೆಂಬಲ ಕುಸಿತಕ್ಕೆ ಕಾರಣವಾಗದಂತೆ ಎಚ್ಚರಿಕೆ ವಹಿಸುತ್ತಿದ್ದಾರೆ.



ರಶ್ಯಾ ಸರ್ಕಾರ ಅನುಸರಿಸುತ್ತಿರುವ ನವ-ಉದಾರವಾದಿ ಆರ್ಥಿಕ ನೀತಿಗಳ ಪರಿಣಾಮ ಮತ್ತು ಪ್ರಜಾಪ್ರಭುತ್ವದ ಮೇಲೆ ತೀವ್ರ ನಿರ್ಬಂಧಗಳ ಒಟ್ಟು ಪರಿಣಾಮವೇ ಅದರ ಬೆಂಬಲ ಕುಸಿತಕ್ಕೆ ಕಾರಣ. 2008 ರ ವರೆಗೆ ಏರುತಿದ್ದ ತೈಲ ಬೆಲೆಯಿಂದ ರಶ್ಯಾದ ಆರ್ಥಿಕ ಭದ್ರವಾಗಿತ್ತು. ಆದರೆ ರಶ್ಯಾದ ಆರ್ಥಿಕ ಯುರೋ-ಅಮೆರಿಕನ್ ಬಂಡವಾಳಶಾಹಿ ಜತೆ ಪೂರ್ಣವಾಗಿ ಅಂಟಿಕೊಂಡಿರುವುದರಿಂದ, 2008 ರ ಬಿಕ್ಕಟ್ಟು ಮತ್ತು ಈಗಿನ ಯುರೋ ಬಿಕ್ಕಟ್ಟು ಈಗ ತೀವ್ರವಾಗಿ ತಟ್ಟಲಾರಂಭಿಸಿದೆ. ನಿರುದ್ಯೋಗ, ಸವಲತ್ತು ಕಡಿತ, ಬೆಲೆ ಏರಿಕೆಗಳು ರಶ್ಯನರನ್ನು ತೀವ್ರವಾಗಿ ತಟ್ಟಲಾರಂಭಿಸಿವೆ.

ನಿಜವಾಗಿಯೂ ಪುಟಿನ್–ಮೆಡ್ವಡೆವ್ ಜೋಡಿಯ ಮತ್ತು 'ಯುನೈಟೆಡ್ ರಶ್ಯಾ'ಪಕ್ಷದ ಸರ್ವಾಧಿಕಾರ ರಶ್ಯಾವನ್ನು ಆಳುತ್ತಿದೆ. ನಿಜವಾದ ಪ್ರಜಾಪ್ರಭುತ್ವ ಅಲ್ಲಿ ಇಲ್ಲ. ವಿರೋಧ ಪಕ್ಷಗಳು – ಅದರಲ್ಲೂ ಪ್ರಮುಖ ವಿರೋಧ ಪಕ್ಷವಾದ ಕಮ್ಯುನಿಸ್ಟ್ ಪಕ್ಷದ ಮೇಲೆ ತೀವ್ರ ನಿರ್ಬಂಧಗಳಿವೆ. ರಶ್ಯದ ಮಾಧ್ಯಮಗಳು ಸರ್ಕಾರದ ಅಂದರೆ 'ಯುನೈಟೆಡ್ ರಶ್ಯಾ'ಪಕ್ಷದ ಅಂದರೆ ಪುಟಿನ್–ಮೆಡ್ವಡೆವ್ ಜೋಡಿಯ ನಿಯಂತ್ರಣದಲ್ಲಿದೆ. ವಿರೋಧ ಪಕ್ಷಗಳಿಗೆ ಚುನಾವಣೆ ಸಮಯದಲ್ಲೂ ಮಾಧ್ಯಮಗಳಲ್ಲಿ ಯಾವುದೇ ಜಾಗ ಇಲ್ಲ. ಪುಟಿನ್–ಮೆಡ್ವಡೆವ್ ಜೋಡಿಯ ಪ್ರಧಾನಿ–ಅಧ್ಯಕ್ಷ ಅದಲು–ಬದಲು ಪ್ರಹಸನದ ಮೂಲಕ ರಶ್ಯದ ಪ್ರಜಾಪ್ರಭುತ್ವವನ್ನು ತೀವ್ರವಾಗಿ ಮೂದಲಿಸಿದ್ದು ರಶ್ಯನರನ್ನು ರೊಚ್ಚಿಗೆಬ್ಬಿಸಿದೆ. ಸಾಲದೆಂಬಂತೆ ಈ ಚುನಾವಣೆಗಳ ಸ್ವಲ್ಪ ಮೊದಲು ಅಧ್ಯಕ್ಷರ ಸತತ ಅವಧಿಯನ್ನು ಎರಡರಿಂದ ಮೂರಕ್ಕೆ ಹೆಚ್ಚಿಸಿದ್ದು ಗಾಯಕ್ಕೆ ಉಪ್ಪು ಹಾಕಿದಂತಾಗಿದೆ. ತೀವ್ರ ಅಕ್ರಮಗಳ ಮೂಲಕ ಚುನಾವಣೆ ಕಸಿದದ್ದು, ಜನತೆಯ ಆಕ್ರೋಶ ಮುಗಿಲು ಮುಟ್ಟಲು ಕಾರಣವಾಯಿತು.

ರಶ್ಯಾದ ಆಳುವ ವರ್ಗ 'ಡಕಾಯಿತ ಬಂಡವಾಳಶಾಹಿ' ಎಂದು ಈಗ ಬಹಿರಂಗ ಗುಟ್ಟು. ಈ ಆಳುವ ವರ್ಗಗಳ ಎಲ್ಸಿನ್ ಅವಧಿಯ 'ಮಾಫಿಯಾ ಅರಾಜಕತೆ' ಕೊನೆಗೊಳಿಸಿ, ಆಳುವ ವರ್ಗಗಳಲ್ಲಿ ಸ್ವಲ್ಪ ಶಿಸ್ತು ಮತ್ತು ಅಂತರ್ರಾಷ್ಟ್ರೀಯವಾಗಿ ಅಮೆರಿಕ–ವಿರೋಧದಿಂದ ಸ್ವಲ್ಪ ಘನತೆ ವಾಪಸು ತಂದಿದ್ದು, ಸರ್ಕಾರಿ ತೈಲ ಸ್ವಾಮ್ಯದ ಆಧಾರದ ಮೇಲೆ ಆರ್ಥಿಕ ಭದ್ರತೆ ತಂದಿದ್ದು – ಪುಟಿನ್ ಅವರ ಮೊದಲ ದಿನಗಳ ಜನಪ್ರಿಯತೆಗೆ ಕಾರಣವಾಗಿತ್ತು. ಆದರೆ ಈಗಿನ ಸನ್ನಿವೇಶದಲ್ಲಿ, ಈ ಹೊಸ 'ಝಾರ್' ಪುಟಿನನ್ನು ಇನ್ನೂ 12 ವರ್ಷಗಳ ಕಾಲ ಸಹಿಸಲು ರಶ್ಯನರು ತಯಾರಿಲ್ಲ. ಈ ಹಿನ್ನೆಲೆಯಲ್ಲಿ ಮಾರ್ಚಿನ ಅಧ್ಯಕ್ಷೀಯ ಚುನಾವಣೆ ಪ್ರಮುಖ ರಾಜಕೀಯ ಬದಲಾವಣೆಗಳಿಗೆ ನಾಂದಿ ಹಾಡುವ ನಿರೀಕ್ಷೆ ಇದೆ. •

'ಅಥೆನ್ಸ್ ಘೋಷಣೆ' ಮತ್ತು ಜಂಟಿ ಕಾರ್ಯಕ್ರಮಗಳು

ಅಥೆನ್ಸಿನಲ್ಲಿ ಇತ್ತೀಚೆಗೆ (ಡಿಸೆಂಬರ್ 9–11) ಮೂರು ದಿನಗಳ ಕಮ್ಯುನಿಸ್ಟ್ ಮತ್ತು ಕಾರ್ಮಿಕರ ಪಕ್ಷಗಳ ಅಂತರ್ರಾಷ್ಟ್ರೀಯ ಸಭೆ ನಡೆಯಿತು. ಈ ಸಭೆಯಲ್ಲಿ 59 ದೇಶಗಳಿಂದ 78 ಪಕ್ಷಗಳು ಭಾಗವಹಿಸಿದ್ದವು. ಕಳೆದ ಮೂರು ಅಂತರ್ರಾಷ್ಟ್ರೀಯ ಸಭೆಗಳು ಗ್ರೀಸಿನ ಹೊರಗೆ ನಡೆದಿದ್ದು, 13ನೇ ಸಭೆಗೆ ಅದು ಅಥೆನ್ಸಿಗೆ (ಗ್ರೀಸ್) ಹಿಂದಿರುಗಿದೆ. ಸಿಪಿಐ(ಎಂ) ಪರವಾಗಿ ಕಾ.ಸೀತಾರಾಂ ಯೆಚ್ಚುರಿ ಭಾಗವಹಿಸಿದ್ದರು. ಸಭೆಯ ಒಟ್ಟಾರೆ ಥೀಮ್ 'ಸಮಾಜವಾದವೇ ಭವಿಷ್ಯ' ಆಗಿತ್ತು.

ಸಭೆ ಚರ್ಚಿಸಿದ ಪ್ರಮುಖ ವಿಷಯಗಳೆಂದರೆ – ಸೋವಿಯೆಟ್ ಒಕ್ಕೂಟದಲ್ಲಿ ಪ್ರತಿ–ಕ್ರಾಂತಿಯ 20 ವರ್ಷಗಳ ನಂತರ ಅಂತರ್ರಾಷ್ಟ್ರೀಯ ಸನ್ನಿವೇಶ ಮತ್ತು ಕಮ್ಯುನಿಸ್ಟರ ಅನುಭವಗಳು; ಬಂಡವಾಳಶಾಹಿ ಬಿಕ್ಕಟ್ಟು, ಸಾಮ್ರಾಜ್ಯಶಾಹಿ ಯುದ್ಧಗಳು, ಕಾರ್ಮಿಕರ–ಜನಸಾಮಾನ್ಯರ ಹಕ್ಕುಗಳಿಗಾಗಿ ಪ್ರಸ್ತುತ ಜನತಾ ಹೋರಾಟಗಳು ಮತ್ತು ದಂಗೆಗಳ ಸನ್ನಿವೇಶದಲ್ಲಿ, ವರ್ಗ ಸಂಘರ್ಷ ಬೆಳೆಸುವತ್ತ, ಕಾರ್ಮಿಕರ ಅಂತರ್ರಾಷ್ಟ್ರೀಯತೆ ಹಾಗೂ ಸಾಮ್ರಾಜ್ಯಶಾಹಿ ರಂಗ ಬಲ ಪಡಿಸುತ್ತಾ, ಬಂಡವಾಳಶಾಹಿ ಕಿತ್ತೆಸೆದು, ಸಮಾಜವಾದ ಕಟ್ಟುವತ್ತ ಕಮ್ಯುನಿಸ್ಟರ ಕರ್ತವ್ಯಗಳು;

ಸಭೆಯಲ್ಲಿ ನಡೆದ ಚರ್ಚೆಗಳ ಆಧಾರದ ಮೇಲೆ, ಅಂತರ್ರಾಷ್ಟ್ರೀಯ ಸನ್ನಿವೇಶದ (ಅದರಲ್ಲಿಯೂ ಪ್ರಮುಖವಾಗಿ ಬಂಡವಾಳಶಾಹಿ ಬಿಕ್ಕಟ್ಟಿನ) ಬಗ್ಗೆ ಈ ಪಕ್ಷಗಳ ವಿಮರ್ಶೆ, ಟೀಕೆ, ನಿಲುವುಗಳನ್ನು ಸ್ಪಷ್ಟ ಪಡಿಸುತ್ತಾ, ಅವುಗಳನ್ನು ಎದುರಿಸುವ ಬಗೆಗೆ 'ಅಥೆನ್ಸ್ ಘೋಷಣೆ'ಯನ್ನು ಹೊರಡಿಸಿತು. ಅಲ್ಲದೆ ಈ ಪಕ್ಷಗಳು ಪ್ರಾದೇಶಿಕ ಮತ್ತು ಅಂತರ್ರಾಷ್ಟ್ರೀಯ ಮಟ್ಟದಲ್ಲಿ ಸಂಯೋಜಿತವಾಗಿ ನಡೆಸಬಹುದಾದ ಕಾರ್ಯಕ್ರಮಗಳನ್ನು ಗುರುತಿಸಿದೆ.

ಸಭೆ ಗುರುತಿಸಿದ ಪ್ರಾದೇಶಿಕ ಮತ್ತು ಅಂತರ್ರಾಷ್ಟ್ರೀಯ ಮಟ್ಟದ ಜಂಟಿ ಕಾರ್ಯಕ್ರಮಗಳೆಂದರೆ :

ಮಾರ್ಚ್ 8 : ಅಂತರ್ರಾಷ್ಟ್ರೀಯ ದುಡಿಯುವ ಮಹಿಳೆಯರ ದಿನ

ಮೇ 1: ಅಂತರ್ರಾಷ್ಟ್ರೀಯ ಕಾರ್ಮಿಕರ ದಿನ

ಮೇ 20–21: ಚಿಕಾಗೋದಲ್ಲಿ ನಡೆಯುವ 25 ನೇ ನಾಟೋ ಶೃಂಗಸಭೆಯ ವಿರುದ್ಧ ಸಾಮ್ರಾಜ್ಯಶಾಹಿ ಆಕ್ರಾಮಕತೆ–ವಿರೋಧಿ ರಂಗದ ಪ್ರದರ್ಶನ

ಪುಟ 15ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಿಪಿಐ(ಎಂ) ಕೋಲಾರ ಜಿಲ್ಲಾ ಸಮ್ಮೇಳನ.....

ಪುಟ 9 ರಿಂದ

ರಾಜಕಾರಣ ಮಾಡುತ್ತಿದ್ದಾರೆ. ಇದು ಜಿಲ್ಲೆಗೆ ಕಪ್ಪುಚುಕ್ಕೆಯಾಗಿದೆ ಎಂದು ಖೇದ ವ್ಯಕ್ತಪಡಿಸಿದರಲ್ಲದೇ ಜನಪರ ರಾಜಕಾರಣಕ್ಕಾಗಿ ಹೋರಾಟ ನಡೆಸುತ್ತಿರುವ ಸಿಪಿಐ(ಎಂ)ವನ್ನು ಬಲಪಡಿಸುವಂತೆ ಕರೆ ನೀಡಿದರು. ಜಿಲ್ಲಾ ಕಾರ್ಯದರ್ಶಿ ಜಿ.ಅರ್ಜುನನ್ ಬಹಿರಂಗ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ನಂತರ ಟಿ.ಎಸ್.ಮಣಿ ಹೆಬ್ಬಾಗಿಲು (ಪ್ರಿಚರ್ಡ್ ರಸ್ತೆ)ನಲ್ಲಿರುವ ಹೋಲೂರು ಶಂಕರ್ ಸಭಾಂಗಣದಲ್ಲಿ ಮೊದಲಿಗೆ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು, ಹಿರಿಯ ಕಾರ್ಮಿಕರು ಮುಖಂಡರು, ಪಕ್ಷದ ಹಿರಿಯ ಮುಖಂಡರೂ ಆದ 93 ವರ್ಷ ವಯಸ್ಸಿನ ಕಾ||ಸವರಿದಾಸ್‌ರವರು ಪಕ್ಷದ ಧ್ವಜಾರೋಹಣ ಮಾಡುವ ಮೂಲಕ ಸಮ್ಮೇಳನಕ್ಕೆ ಚಾಲನೆ ನೀಡಿದರು. ಸಮ್ಮೇಳನ ಸುಸೂತ್ರವಾಗಿ ನಡೆಯಲು ವಿವಿಧ ಸಮಿತಿಗಳನ್ನು ಆಯ್ಕೆ ಮಾಡಲಾಯಿತು. ಅಧ್ಯಕ್ಷ ಮಂಡಳಿಯಲ್ಲಿ, ಪಿ.ಆರ್.ಸೂರ್ಯನಾರಾಯಣ, ಪಿ.ಶ್ರೀನಿವಾಸ್, ವಿ.ಗೀತಾ, ನಡವಳಿಕೆ ಸಮಿತಿಯಲ್ಲಿ ಬಿ.ವಿ.ಸಂಪಂಗಿ, ರಾಮಚಂದ್ರ, ಜಿ.ಈಶ್ವರಮ್ಮ, ನಿರ್ಣಯ ಸಮಿತಿಯಲ್ಲಿ ಎ.ಆರ್.ಬಾಬು, ಅಚ್ಯುತ, ಆನಂದರಾಜ್, ನಾಗರತ್ನಮ್ಮ, ಅಂಬರೀಷ್, ಪರಿಚಯ ಪತ್ರ ಸಮಿತಿಯಲ್ಲಿ ಟಿ.ಎಂ.ವೆಂಕಟೇಶ್, ವೀರಪ್ಪರೆಡ್ಡಿ, ಮುನಿರಾಜಮ್ಮ ಚಲಪತಿರನ್ನು ಆಯ್ಕೆ ಮಾಡಲಾಯಿತು.

ಪ್ರತಿನಿಧಿಗಳ ಅಧಿವೇಶನವನ್ನು ಕಾ||ವಿ.ಜೆ.ಕೆ.ನಾಯರ್ ಉದ್ಘಾಟಿಸಿದರು. ಜಿಲ್ಲಾ ಕಾರ್ಯದರ್ಶಿ ಕಾ||ಜಿ.ಅರ್ಜುನನ್ ಕರಡು ವರದಿ ಮಂಡಿಸಿದರು. ವರದಿಯ ಮೇಲೆ ಪ್ರತಿನಿಧಿಗಳು ತಾಲ್ಲೂಕುವಾರು ಗುಂಪು ಚರ್ಚೆ ನಡೆಸಿ ಮಾತನಾಡಿದರು. ಕಾರ್ಯದರ್ಶಿ ಜಿ.ಅರ್ಜುನನ್ ಪ್ರತಿನಿಧಿಗಳ ಚರ್ಚೆಗೆ ಉತ್ತರಿಸಿದರು.

ನಂತರ 18 ಮಂದಿಯನ್ನೊಳಗೊಂಡ ಜಿಲ್ಲಾ ಸಮಿತಿಗೆ ಚುನಾವಣೆ ನಡೆದು ನೂತನ ಸಮಿತಿಯನ್ನು ಆಯ್ಕೆ ಮಾಡಲಾಯಿತು. ನೂತನ ಜಿಲ್ಲಾ ಕಾರ್ಯದರ್ಶಿ ಗಾಂಧಿನಗರ ನಾರಾಯಣಸ್ವಾಮಿ, ಕಾರ್ಯದರ್ಶಿ ಮಂಡಳಿ ಸದಸ್ಯರಾಗಿ ಜಿ.ಅರ್ಜುನನ್, ಪಿ.ಆರ್.ಸೂರ್ಯನಾರಾಯಣ, ಪಿ.ಶ್ರೀನಿವಾಸ್, ವಿ.ಗೀತಾ, ಎ.ಆರ್.ಬಾಬು, ಸಮಿತಿ ಸದಸ್ಯರಾಗಿ ಟಿ.ಎಂ.ವೆಂಕಟೇಶ್, ಬಿ.ವಿ.ಸಂಪಂಗಿ, ಎಲ್.ರಾಮಚಂದ್ರ, ಜಿ.ಈಶ್ವರಮ್ಮ, ಪಿ.ಆರ್.ನವೀನ್ ಕುಮಾರ್, ಅಚ್ಯುತ, ಪಿ.ತಂಗರಾಜ್, ವೀರಪ್ಪರೆಡ್ಡಿ, ಪಿ.ಆನಂದರಾಜ್, ಹೊನ್ನೇನಹಳ್ಳಿ ಯಲ್ಲಪ್ಪ, ಬಿ.ಎಸ್.ನಾಗರತ್ನ ನಿಕ್ಸನ್ ಆಯ್ಕೆಯಾದರು.

ಸಮಾರೋಪ ಭಾಷಣವನ್ನು ಜಿ.ಸಿ.ಬಯ್ಯಾರೆಡ್ಡಿ ಮಾಡಿದರು. ಜಿಲ್ಲೆಯಲ್ಲಿ ಸಾಮೂಹಿಕ ಸಂಘಟನೆಗಳು ಮತ್ತು ಪಕ್ಷವನ್ನು ಬಲಿಷ್ಠವಾಗಿ ಕಟ್ಟುವ ದೃಢ ನಿಶ್ಚಯದೊಂದಿಗೆ ಸಮ್ಮೇಳನವನ್ನು ಮುಕ್ತಾಯ ಮಾಡಲಾಯಿತು.

ಪರಿಣಾಮಕಾರಿ ಲೋಕಪಾಲ ವ್ಯವಸ್ಥೆ.....

ಪುಟ 7 ರಿಂದ

ವಿಸ್ತರಿಸುವ ನವ-ಉದಾರವಾದಿ ಆರ್ಥಿಕ ಸುಧಾರಣೆಗಳ ದಿಕ್ಕನ್ನೇ ಅನುಸರಿಸುವ ತವಕದಲ್ಲಿದೆ.ಅದಕ್ಕಾಗಿ ಅದು ಈ 'ಮುಂದಿನ ಪೀಳಿಗೆಯ ಸುಧಾರಣೆ'ಗಳ ನಿಟ್ಟಿನಲ್ಲಿ ಸಾಗಿದೆ.

2008ರ ಅಂತರ್ರಾಷ್ಟ್ರೀಯ ಹಣಕಾಸು ಕುಸಿತ ಮತ್ತು ಅದನ್ನನುಸರಿಸಿ ಬಂದ ತೀವ್ರ ಜಾಗತಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಒದಗಿಸಿದ ಉತ್ತೇಜನಾ ಪ್ಯಾಕೇಜುಗಳ ಅನುಭವ ಇಂತಹ ದಿಕ್ಕು ಸಂಪೂರ್ಣವಾಗಿ ವಿಫಲವಾಗಿರುವುದನ್ನು ತೋರಿಸಿದೆ. ಇತ್ತೀಚಿನ ಆರ್ಥಿಕ ನಿಧಾನಗತಿಯೇ ಇದಕ್ಕೆ ಸಾಕ್ಷಿ. ಈ ಮೂರು ಹಣಕಾಸು ವರ್ಷಗಳಲ್ಲಿ ಉತ್ತೇಜನಾ ಪ್ಯಾಕೇಜುಗಳ ಹೆಸರಿನಲ್ಲಿ ಸರಕಾರ ಬಿಟ್ಟುಕೊಟ್ಟ ತೆರಿಗೆ ಆದಾಯದ ಭಾರೀ ಮೊತ್ತವನ್ನು ನೋಡಿ-ಅದು 14,28,028 ಕೋಟಿ ರೂಪಾಯಿಗಳು! ಸರಕಾರವೇ ಇದನ್ನು ತನ್ನ ಬಜೆಟ್ ಪೇಪರುಗಳಲ್ಲಿ ಒಪ್ಪಿಕೊಂಡಿದೆ. ಇದರಲ್ಲಿ 3,63,875 ಕೋಟಿ ರೂ.ಗಳು ಕೇವಲ ಕಾರ್ಪೊರೇಟ್‌ಗಳಿಗೆ ಮತ್ತು ಅತ್ಯುನ್ನತ ಆದಾಯಗಳ ಮಂದಿಗೆ ಕೊಟ್ಟ ನೇರ ತೆರಿಗೆ ರಿಯಾಯಿತಿಗಳ ಮೊತ್ತ. ಇವೆಲ್ಲವುಗಳ ಒಟ್ಟು ಫಲಿತಾಂಶವೇ ಈಗ ನಮ್ಮನ್ನು ವೇಗವಾಗಿ ಆವರಿಸಿಕೊಳ್ಳುತ್ತಿರುವ ಆರ್ಥಿಕ ಬಿಕ್ಕಟ್ಟು.

ದಿಕ್ಕು-ದೆಸೆ ಬದಲಾಗಬೇಕಿದೆ

ಆದರೆ ಇದು 'ಹೊಳೆಯುವ ಭಾರತ'ಕ್ಕೆ ಬಹುವಾಗಿ ಪ್ರಯೋಜನ ತಂದು ಕೊಟ್ಟಿದೆ. ಈ ಮೂರು ವರ್ಷಗಳಲ್ಲಿ ಭಾರತದಲ್ಲಿ ಡಾಲರ್ ಶತಕೋಟ್ಯಾಧಿಪತಿಗಳ ಸಂಖ್ಯೆ 26 ರಿಂದ 52ಕ್ಕೆ, ಇಂದು 69ಕ್ಕೆ ಏರಿದೆ. ಈ 69 ವ್ಯಕ್ತಿಗಳು ಭಾರತದ ಜಿಡಿಪಿಯ ಮೂರನೇ ಒಂದು ಭಾಗದಷ್ಟು ಆಸ್ತಿಗಳ ಒಡೆಯರು! ಇನ್ನೊಂದು ತುದಿಯಲ್ಲಿ ಭಾರತದ 80 ಕೋಟಿ ಜನ ದಿನಕ್ಕೆ ಕೇವಲ 20ರೂ.ಗಳಲ್ಲಿ ಬದುಕು ಸಾಗಿಸುತ್ತಿದ್ದಾರೆ.

ಹಣಕಾಸು ಕೊರತೆ ಹೆಚ್ಚುತ್ತಿದೆ ಎಂಬ ಬಗ್ಗೆ ಆತಂಕ ಕೂಡ ಸಂಪೂರ್ಣವಾಗಿ ದಾರಿ ತಪ್ಪಿಸುವಂತದ್ದು. ಶ್ರೀಮಂತರಿಗೆ ಕೊಟ್ಟಿರುವ ಅಗಾಧ ಪ್ರಮಾಣದ ರಿಯಾಯ್ತಿಗಳ ಮುಂದೆ ಈ ವರ್ಷದ 4,65,000 ಕೋಟಿ ರೂ.ಗಳ ಹಣಕಾಸು ಕೊರತೆ ಏನೂ ಅಲ್ಲ. ಎಲ್ಲ ನ್ಯಾಯಬದ್ಧ ತೆರಿಗೆಗಳನ್ನು ವಸೂಲಿ ಮಾಡಿದ್ದರೆ ಹಣಕಾಸು ಕೊರತೆಯೇ ಇರುತ್ತಿಲ್ಲ. ಬದಲಿಗೆ, ಒಂದು ಬೃಹತ್ ಪ್ರಮಾಣದ ಸಾರ್ವಜನಿಕ ಹೂಡಿಕೆಯ ಕಾರ್ಯಕ್ರಮವನ್ನು ಕೈಗೊಳ್ಳಲು ಸಾಧ್ಯವಾಗುವಷ್ಟು ಸಂಪನ್ಮೂಲಗಳು ಸರಕಾರದ ಕೈಗಳಲ್ಲಿರುತ್ತಿದ್ದವು. ಇದು ನಮ್ಮ ವಿಶಾಲ ಜನಸ್ತೋಮದ ಬದುಕಿನ ಮಟ್ಟವನ್ನು ಉತ್ತಮಗೊಳಿಸುತ್ತಲೇ, ಒಂದು ಆರೋಗ್ಯಕರವಾದ ಆರ್ಥಿಕ ಬೆಳವಣಿಗೆಯ ದಿಕ್ಪಥಕ್ಕೆ ನಮ್ಮನ್ನು ಒಯ್ಯಬಹುದಾಗಿತ್ತು.

ದೈತ್ಯ ಪ್ರಮಾಣದ ಭ್ರಷ್ಟಾಚಾರವನ್ನು ನಿಗ್ರಹಿಸಲಿಕ್ಕಾಗಿ ಲೋಕಪಾಲದ ಸ್ಥಾಪನೆಗೆ ಒಂದು ಪರಿಣಾಮಕಾರಿ ಶಾಸನವನ್ನು ಕೈಗೊಳ್ಳುವಂತೆ ಮತ್ತು ಆ ಬೃಹತ್ ಪ್ರಮಾಣದ ಹಣವನ್ನು ಜನತೆಯ ಕಲ್ಯಾಣದತ್ತ ತಿರುಗಿಸುವಂತೆ ಯುಪಿಎ ಸರಕಾರದ ಮೇಲೆ ಒತ್ತಡಗಳನ್ನು ಮುಂದುವರೆಸುತ್ತಲೇ, ಸರಕಾರ ತನ್ನ ಸದ್ಯದ ಆರ್ಥಿಕ ಸುಧಾರಣೆಗಳ ದಿಕ್ಕನ್ನು ಬದಲಿಸುವಂತೆ ಕೂಡ ಒತ್ತಡಗಳನ್ನು ಹಾಕುವುದನ್ನು ಮರೆತು ಬಿಡಬಾರದು. ಈ ಸಂದರ್ಭದಲ್ಲಿ ನಮ್ಮ ವಿಶಾಲ ಜನಸಮೂಹಗಳ ಹಿತಗಳನ್ನು ಈಡೇರಿಸುವ ಆರ್ಥಿಕ ಧೋರಣೆಗಳನ್ನು ಸರಕಾರ ಅಂಗೀಕರಿಸುವಂತೆ ಮಾಡಲು ಜನಗಳನ್ನು ಅಣಿನೆರೆಸುವ ಮೂಲಕ ಮತ್ತಷ್ಟು ಒತ್ತಡಗಳನ್ನು ಹಾಕುವುದು ಅಗತ್ಯವಾಗಿದೆ. ಹೀಗೆ ಮಾಡಬೇಕಾದರೆ ಆರ್ಥಿಕ ಧೋರಣೆಯ ವಿಷಯದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಯ ನಡುವೆ ಏನೇನೂ ವ್ಯತ್ಯಾಸವಿಲ್ಲ ಎಂಬುದನ್ನು ಸಂಪೂರ್ಣವಾಗಿ ಬಯಲಿಗೆ ಎಳೆಯುವ ಅಗತ್ಯವೂ ಇದೆ. ಈ ಎರಡೂ ಪಕ್ಷಗಳು ನಮ್ಮ ವಿಶಾಲ ಜನಸಮೂಹಗಳ ಬದುಕಿನ ಮಟ್ಟವನ್ನು ಉತ್ತಮಗೊಳಿಸುವ ಬದಲು, ವಿದೇಶಿ ಬಂಡವಾಳ ಮತ್ತು ಕಾರ್ಪೊರೇಟ್ ಭಾರತದ ಹಿತಗಳನ್ನು ಈಡೇರಿಸಲಿಕ್ಕೇ ಕೆಲಸ ಮಾಡುತ್ತವೆ. ಬಿಜೆಪಿ, ಇದರ ಜೊತೆಗೇ ತನ್ನ ವಿನಾಶಕಾರಿ ಕೋಮುವಾದಿ ಅಜೆಂಡಾವನ್ನೂ ಮುಂದೊತ್ತುತ್ತಲೇ ಇದೆ.

'ಅಥೆನ್ಸ್ ಘೋಷಣೆ' .....

ಪುಟ 14ಕ್ಕೆ

ನವೆಂಬರ್ 29: ಪ್ಯಾಲೆಸ್ಟೈನ್ ಜತೆ ಅಂತರ್ರಾಷ್ಟ್ರೀಯ ಸೌಹಾರ್ದತೆಯ ದಿನ

ಮೇ 9 : ಫ್ಯಾಸಿಸ್ಟ್-ವಿರೋಧಿ ಜನತಾ ವಿಜಯ

ಸೆಪ್ಟೆಂಬರ್ 12 : ಕ್ಯೂಬಾದ ವಿರುದ್ಧ ದಿಗ್ಬಂಧನ ತೆಗೆಯಲು ಮತ್ತು ಕ್ಯೂಬನ್ ಐವರನ್ನು ಬಿಡುಗಡೆ ಮಾಡಲು ಒತ್ತಾಯಿಸುತ್ತಾ (ಕ್ಯೂಬನ್ ಐವರ 14 ನೇ ವಾರ್ಷಿಕ)

□ ಕಾರ್ಮಿಕರ ಚಳುವಳಿಯ ಚರಿತ್ರೆಯ ನೆನಪು ರಕ್ಷಿಸಲು ಮತ್ತು ಕಮ್ಯುನಿಸ್ಟ್-ವಿರೋಧಿ ಭಾವನೆ ವಿರುದ್ಧ:

ನವೆಂಬರ್ 7: ಮಹಾನ್ ಅಕ್ಟೋಬರ್ ಸಮಾಜವಾದಿ ಕ್ರಾಂತಿ ದಿನ

ಜೂನ್ 18 : ಜಾರ್ಜಿ ದಿಮಿಟ್ರೋವ್ 130 ನೇ ಹುಟ್ಟುಹಬ್ಬ

ಆಗಸ್ಟ್ 25 : ಚರಿತ್ರೆಯನ್ನು ವಿರೂಪಗೊಳಿಸುವ ಯುರೋಪಿಯನ್ ಒಕ್ಕೂಟದ ಪ್ರಯತ್ನಕ್ಕೆ ಪ್ರತಿಭಟನೆ

□ ವಿಶ್ವವ್ಯಾಪಿ ಸಾಮ್ರಾಜ್ಯಶಾಹಿ-ವಿರೋಧಿ ಸಾಮೂಹಿಕ ಸಂಘಟನೆಗಳನ್ನು - ಟ್ರೇಡ್ ಯೂನಿಯನ್ (ಫಊಖಿಗ), ಪ್ರಜಾಸತ್ತಾತ್ಮಕ ಯುವಜನ (ಫಊಆಜ), ಮಹಿಳಾ (ಫಊಆಊ) ಗಳ ಜಾಗತಿಕ ಫೆಡರೇಶನ್ ಗಳು ಮತ್ತು ಜಾಗತಿಕ ಶಾಂತಿ ಮಂಡಳಿ (ಫಕಊ) - ರಾಷ್ಟ್ರ ಮತ್ತು ಪ್ರಾದೇಶಿಕ ಮಟ್ಟದಲ್ಲಿ ಬಲಪಡಿಸುವುದು

□ ಪ್ರಾಕೃತಿಕ ಲೂಟಿಯನ್ನು ತಡೆದು, ಪರಿಸರ ರಕ್ಷಣೆಗೆ

ಕವನ

ಕೆಂಬಾವುಟ ಹಿಡಿದೆತ್ತಿ

ಕೆಂಬಾವುಟ ಹಿಡಿದೆತ್ತಿ ಸಾಗು ಮುಂದೆ ಸಂಗಾತಿ
ಸಮರಧೀರ ಹಾದಿಯಲ್ಲಿ ಹೆಜ್ಜೆ ಗುರುತು ಮೂಡಲಿ
ಗುರಿ ಮುಟ್ಟುವ ತನಕ ನಮ್ಮ ಪಯಣ ಸಾಗಲಿ

ದುಡಿವ ಜನರ ಐಕ್ಯಗಾನ ಹಾಡು ನೀ ಸಂಗಾತಿ
ಅರಳುವ ಹೂಗಳೆಲ್ಲಾ ಕೆಂಪಾಗಲಿ ಸಂಗಾತಿ
ಕಪ್ಪು ಜನರ ಕೆಂಪುಕಾವ್ಯ ಜಗವೆಲ್ಲಾ ಮೊಳಗಲಿ
ಸುಲಿಗೆಕೋರರೆದೆಯಲ್ಲಿ ನಡುಕ ಹುಟ್ಟಿಕೊಳ್ಳಲಿ

ಅಮರವೀರ ಭಗತ್‌ಸಿಂಗ್ ನಡೆದ ಹಾದಿ ನಮ್ಮದು
ತೆಲಂಗಾಣವೀರರ ಕ್ರಾಂತಿಗೀತೆ ನಮ್ಮದು
ತ್ಯಾಗ ಬಲಿದಾನದ ಪರಂಪರೆಯು ನಮ್ಮದು
ಸಮತೆಯೂ ಹೂವರಳಿ ನಗುವ ಕನಸು ನಮ್ಮದು

ಹಿಮಾಲದ ನೆತ್ತಿಯಲ್ಲಿ ಕೆಂಬಾವುಟ ಹಾರಲಿ
ಹಿಂದೂ ಮಹಾಸಾಗರದಲಿ ಪ್ರತಿಬಿಂಬ ಮೂಡಲಿ
ಕೆಂಪುಕೋಟೆ ಮೇಲೆ ನಮ್ಮ ಕೆಂಪು ಧ್ವಜವು ಹಾರಲಿ
ಸಹ್ಯಾದ್ರಿಯ ತಪ್ಪಲಲ್ಲಿ ಕೆಂಪು ಹೂವು ಅರಳಲಿ

ಚಿಕಾಗೋದ ಬೀದಿಯಲ್ಲಿ ನಮ್ಮ ಜನರು ಹಾಡಲಿ
ಶ್ವೇತಭವನದಲ್ಲಿ ಪಾರಿವಾಳ ಗೂಡುಕಟ್ಟಲಿ
ತಾಲಿಬಾನಿನಲ್ಲಿ ಕೂಡ ನಮ್ಮ ಹಾಡು ಮೊಳಗಲಿ
ದುಡಿವ ಜನರ ತತ್ವದಲ್ಲಿ ವಿಶ್ವವೇ ಒಂದಾಗಲಿ

-ಹುಲಿಕಟ್ಟಿ ಚನ್ನಬಸಪ್ಪ
ಸಿರುಗುಪ್ಪ

RNI No. KARKAN /2006/17926 Posted on every Satuarday
Postal Reg. No. RNP/KA/BGS/2078/2010-12 Posted at MBC Bangalore GPO

ಶ್ರಮ ಸಂಸ್ಕೃತಿ ಅನಾವರಣಕ್ಕಾಗಿ ಸಾಂಸ್ಕೃತಿಕ ಜಾಥ

ಸಿಪಿಐ(ಎಂ) ರಾಜ್ಯ ಸಮ್ಮೇಳನದ ಅಂಗವಾಗಿ ಎರಡು ಸಾಂಸ್ಕೃತಿಕ ಜಾಥಾಗಳ ಉದ್ಘಾಟನೆ

ಕಮ್ಯೂನಿಸ್ಟ್ ಚಳುವಳಿಗೆ ದೀರ್ಘ ಇತಿಹಾಸವಿರುವ ಅವಿಭಜಿತ ಕೋಲಾರ ಜಿಲ್ಲೆ ಮತ್ತು ಈಗಿನ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಸಿಪಿಐ(ಎಂ) ನ 20 ನೇ ರಾಜ್ಯ ಸಮ್ಮೇಳನ 2012 ಜನವರಿ 8–11 ವರೆಗೆ ನಡೆಯಲಿದೆ. ಇದರ ಅಂಗವಾಗಿ ಜಿಲ್ಲೆಯಾದ್ಯಂತ ಸಮ್ಮೇಳನವನ್ನು ಪ್ರಚಾರಪಡಿಸಲು ಮತ್ತು ಪ್ರಸಕ್ತ ರಾಯಕೀಯ ವಿದ್ಯಮಾನಗಳನ್ನು ಜನರಿಗೆ ಅರ್ಥ ಮಾಡಿಸಿ ಅವರನ್ನು ಜಾಗೃತಿಗೊಳಿಸುವ ಉದ್ದೇಶದಿಂದ ಎರಡು ಸಾಂಸ್ಕೃತಿಕ ಕಲಾ ಜಾಥಾಗಳನ್ನು ಸಂಘಟಿಸಲಾಗಿದೆ. ಎರಡು ಜಾಥಾಗಳು ಡಿಸೆಂಬರ್ 20 ರಿಂದ ಜನವರಿ 8 ರವರೆಗೆ ಜಿಲ್ಲೆಯ ಎಲ್ಲಾ ಹಳ್ಳಿಗಳಲ್ಲು ಸಂಚರಿಸಲಿವೆ. ಈ ಜಾಥಾದ ಉದ್ಘಾಟನಾ ಸಮಾರಂಭವನ್ನು ಡಿಸೆಂಬರ್ 20 ರಂದು ಚಿಕ್ಕಬಳ್ಳಾಪುರ ಜಿಲ್ಲೆಯ ಎರಡು ಪ್ರಮುಖ ಐತಿಹಾಸಿಕ ಸ್ಥಳಗಳಲ್ಲಿ ಉದ್ಘಾಟಿಸಲಾಯಿತು.

ಮೊದಲ ಜಾಥಾ ಎರಡನೇ ಜಲಿಯನ್ ವಾಲಾಬಾಗ್ ಎಂದೇ ಕರೆಯುವ, ಸ್ವಾತಂತ್ರ್ಯ ಚಳುವಳಿಗಾಗಿ 1938 ಏಪ್ರಿಲ್ 25 ರಂದು ಬ್ರಿಟೀಷರ ಗುಂಡೇಟಿಗೆ ಎದೆಯೊಡ್ಡಿ 32 ಜನ ತಮ್ಮ ಪ್ರಾಣವನ್ನೇ ದೇಶಕ್ಕಾಗಿ ಅರ್ಪಿಸಿದ ಸ್ಥಳ ಗೌರಿಬಿದನೂರು ತಾಲೂಕಿನ ವಿದುರಾಶ್ವಥದ ವೀರಸೌಧ'ದಲ್ಲಿ ಉದ್ಘಾಟನೆಗೊಂಡಿತು. ಈ ಜಾಥಾವನ್ನು ಉದ್ಘಾಟಿಸಿ ಮಾತನಾಡಿದ ಸಿಪಿಐ(ಎಂ) ನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ಜಿ.ಎನ್.ನಾಗರಾಜ್ ರವರು ನೆನೆ ನೆನೆ ಆದಿನವ ಓ ಭಾರತ ಭಾಂದವ, ...ತೊಲಗು ತೊಲಗಾಚೆ ಬಿಳಿದೊಗಲ ಸುಲಿಗೆಕೋರ. ಎಂಬ ಕವಿ ವಾಣಿಯನ್ನು ನೆನೆಯುತ್ತ ಹುತಾತ್ಮರನ್ನು ಸ್ಮರಿಸಿ ಜಾಥಾವನ್ನು ಉಧ್ಘಾಟಿಸಿ ಅಂದು ಬ್ರಿಟೀಷ್ ಸಾಮ್ರಾಜ್ಯಶಾಹಿಗಳು ಈಸ್ಟ್ ಇಂಡಿಯಾ ಕಂಪನಿಯ ಮೂಲಕ ಭಾರತವನ್ನು ಲೂಟಿ ಮಾಡಿದರೆ, ಈಗ ಅಂತಹ ಹಲವು ವಿದೇಶಿ ಕಂಪನಿಗಳು ಭಾರತವನ್ನು ಲೂಟಿಮಾಡುತ್ತಿವೆ. ರೈತರ ಬೆಳೆಗಳಿಗೆ ಸರಿಯಾದ ಬೆಲೆಗಳು ಸಿಗುತ್ತಿಲ್ಲ ಬದಲಾಗಿ ಅಗತ್ಯ ವಸ್ತುಗಳ ಬೆಲೆಗಳು ಗಗನಕ್ಕೇರಿವೆ ಇದರಿಂದ ಜನಸಾಮಾನ್ಯರ ಜೀವನ ಸಂಕಷ್ಟದಲ್ಲಿದೆ ಎಂದರು.



ಮುಖ್ಯ ಅಥಿತಿಗಳಾಗಿದ್ದ ಸಮುದಾಯ ಸಾಂಸ್ಕೃತಿಕ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ. ಟಿ.ಸುರೇಂದ್ರರಾವ್ ಮಾತನಾಡಿ ರಾಜ್ಯವನ್ನು ಲೂಟಿ ಮಾಡಿದ ಮಾಜಿ ಮುಖ್ಯಮಂತ್ರಿಗಳು ಮತ್ತೆ ಮುಖ್ಯಮಂತ್ರಿಯಾಗಲು ಯಾಗ ಮಾಡುತ್ತಿದ್ದಾರೆ ಇದು ಸಾಂಸ್ಕೃತಿಕ ದಿವಾಳಿಕೋರತನ, ಲೂಟಿಕೋರರು ದೇಶವನ್ನು ಆಳುತ್ತಿದ್ದು ಅದನ್ನು ರಕ್ಷಿಸಲು ನಾವೆಲ್ಲರೂ ಒಟ್ಟಿಗೆ ಸೇರಿ ದುಡಿಯಬೇಕಿದೆ ಎಂದರು. ಮತ್ತು ತರಬೇತಿ ಪಡೆದು ಜಾಥಾದಲ್ಲಿ ತೆರಳುತ್ತಿರುವ ಕಲಾವಿದರಿಗೆ ಶುಭಾಷಯ ಕೋರಿದರು.



ಮತ್ತೋರ್ವ ಮುಖ್ಯ ಅತಿಥಿಗಳಾದ ಸಿಪಿಐ(ಎಂ) ಚಿಕ್ಕಬಳ್ಳಾಪುರ ಜಿಲ್ಲಾ ಕಾರ್ಯದರ್ಶಿಗಳು, ಮಾಜಿ ಶಾಸಕರಾದ ಕಾಂ.ಜಿ.ವಿ.ಶ್ರೀರಾಮರೆಡ್ಡಿ ಮಾತನಾಡಿ ಬಂಡವಾಳಶಾಹಿ ದೇಶಗಳು ಭಾರತದಲ್ಲಿ ಮಾಧ್ಯಮಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಅವರ ಸಂಸ್ಕೃತಿಯನ್ನ ನಮ್ಮ ಮೇಲೆ ಏರುವ ವ್ಯವಸ್ತಿತ ಹುನ್ನಾರ ನಡೆಯುತ್ತಿದೆ. ಇದರ ವಿರುದ್ದ ಸಾಂಸ್ಕೃತಿಕ ಚಳುವಳಿಯನ್ನು ಕಟ್ಟುವ ಜೊತೆಗೆ ಶ್ರಮ ಜೀವಿಗಳ ಸಂಸ್ಕೃತಿಯನ್ನ ಅನಾವರಣ ಮಾಡಬೇಕಿದೆ. ಆದ್ದರಿಂದ ಇಂತಹ ಕಲಾ ಜಾಥಾಗಳು ಹಾಡು, ನಾಟಕಗಳ ಮೂಲಕ ಜನರಲ್ಲಿ ಜಾಗೃತಿ ಮೂಡಿಸುತ್ತವೆ. ಭಾರತದಲ್ಲಿ ಕಮ್ಯುನಿಸ್ಟ್ ಪಕ್ಷವು ಸ್ವಾತಂತ್ರ್ಯ ಪೂರ್ವದಿಂದಲೂ ಶ್ರಮ ಸಂಸ್ಕೃತಿಗಾಗಿ ಕೆಲಸಮಾಡುತ್ತಿದೆ ಎಂದರು.

ಎರಡನೇ ಜಾಥಾವನ್ನು 1973 ರಲ್ಲಿ ಲೇಕಸಭೆಯಲ್ಲಿ ಸಿಪಿಐಎಂನ ವಿರೋಧ ಪಕ್ಷದ ನಾಯಕರಾಗಿದ್ದ ಕಾಂ ಎ.ಕೆ.ಗೋಪಾಲನ್ ರವರು ಸ್ವತಹಾ ಹಳ್ಳಿ-ಹಳ್ಳಿಗಳನ್ನು ಸಂಚರಿಸಿ ಭೂಹೋರಾಟವನ್ನು ನಡೆಸಿ ಅಂದಿನ ಕೋಲಾರ ಜಿಲ್ಲೆಗೆ ಸುಮಾರು 3 ಲಕ್ಷ ಎಕರೆ ಭೂಮಿಯನ್ನ ಕೊಡಿಸಿ, 350 ಕ್ಕು ಹೆಚ್ಚು ಜನ ಹೋರಾಟಗಾರರು ಜೈಲಿಗೆ ಹೋದಂತಹ ಚರಿತ್ರೆಯನ್ನ ಹುಟ್ಟುಹಾಕಿದ ಸ್ಥಳವಾದ ಚಿಂತಾಮಣಿ ತಾಲೂಕಿನ ಯನಮಲಪಾಡಿಯಲ್ಲಿ ಉದ್ಘಾಟಿಸಲಾಯಿತು. ಒಟ್ಟು 20 ದಿನಗಳು ಜಿಲ್ಲೆಯ ಎಲ್ಲಾ ಹಳ್ಳಿಗಳನ್ನು ಸಂಚರಿಸುವ ಈ ಎರಡು ಜಾಥಾದಲ್ಲೂ ಸುಮಾರು 25ಕ್ಕೂ ಹೆಚ್ಚು ತರಬೇತಿ ಪಡೆದ ಕಲಾವಿದರಿದ್ದಾರೆ.

ಸಮರೋಪಾದಿಯಲ್ಲಿ ನಡೆಯುತ್ತಿರುವ ರಾಜ್ಯ ಸಮ್ಮೇಳನದ ತಯಾರಿ :

ದೇಶದಾದ್ಯಂತ ಸಿಪಿಐ(ಎಂ)ಗೆ ಚುನಾವಣೆಗಳಲ್ಲಿ ಹಿನ್ನೆಡೆಯಾಗಿರುವ ಮತ್ತು ಕೇಂದ್ರ-ರಾಜ್ಯದಲ್ಲಿ ಜನವಿರೋಧಿ ಕಾಂಗ್ರೇಸ್-ಬಿಜೆಪಿಗಳು ಅಧಿಕಾರವನ್ನು ನಡೆಸುತ್ತಿರುವ ಇಂತಹ ಸಂದರ್ಭದಲ್ಲಿ ಪಕ್ಷವನ್ನು ಮನ್ನಡೆಸುವ ಮತ್ತು ಬಲಿಷ್ಠ ಚಳುವಳಿಯನ್ನು ಕಟ್ಟಲು ಸ್ಪೂರ್ತಿ ನೀಡಬೇಕೆಂದು ಸಮ್ಮೇಳನದ ಸ್ವಾಗತ ಸಮಿತಿ ಎಲ್ಲಾ ಅಗತ್ಯ ತಯಾರಿಗಳನ್ನು ನಡೆಸುತ್ತಿದೆ. ಜಿಲ್ಲೆಯಾದ್ಯಂತ ಎಲ್ಲ ಗೋಡೆಗಳ ಮೇಲೆ ಸಮ್ಮೇಳನದ ಬರಹಗಳೇ ಕಾಣುತ್ತವೆ. ಜಿಲ್ಲೆಯನ್ನೆಲ್ಲಾ ಕೆಂಪನ್ನಾಗಿ ಸಿಂಗರಿಸಲು ಸಾವಿರಾರು ಸಂಖ್ಯೆಯಲ್ಲಿ ಪೋಸ್ಟರ್ಸ್, ಬಾವುಟಗಳು, ಬ್ಯಾನರ್‌ಗಳು, ಸ್ವಾಗತ ಕಮಾನುಗಳು, ಕಟೌಟ್‌ಗಳು, ತೋರಣಗಳು ತಯಾರಾಗುತ್ತಿವೆ. ಇವೆಲ್ಲವುಗಳನ್ನು ಒದಗಿಸಲು ಬೇಕಾದ ಹಣಕಾಸಿನ ವ್ಯವಸ್ಥೆಗಾಗಿ ಕಾರ್ಯಕರ್ತರು ಮನೆಮನೆಗಳಿಗೆ ತೆರಳಿ ನಿಧಿ ಸಂಗ್ರಹಿಸುತ್ತಿದ್ದಾರೆ. ರಾಜ್ಯ ಸಮ್ಮೇಳನದ ಅಂಗವಾಗಿ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲೂ ಒಂದೊಂದು ವಿಚಾರಗಳ ಬಗ್ಗೆ ವಿಚಾರ ಸಂಕಿರಣಗಳನ್ನು ನಡೆಸಲಾಗಿದೆ.



ಅಂಗವಿಕಲರ ಮಾಶಾಸನ ಕೂಡಲೇ ಬಿಡುಗಡೆ ಮಾಡಿ

ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟವು ನವೆಂಬರ್ 25 ರಂದು ಮುಖ್ಯಮಂತ್ರಿಗಳ ಮನೆ ಮುಂದೆ ಧರಣಿ ಸತ್ಯಾಗ್ರಹವನ್ನು ಸಂಘಟಿಸಿತು. ಗುಲ್ಬರ್ಗಾ, ಯಾದಗಿರಿ, ರಾಯಚೂರು, ಕೊಪ್ಪಳ, ಬಿಜಾಪುರ, ಬಾಗಲಕೊಟೆ, ಬಳ್ಳಾರಿ, ಧಾರವಾಡ, ಉಡುಪಿ, ಉತ್ತರ ಕನ್ನಡ, ರಾಮನಗರ, ದಕ್ಷಿಣ ಕನ್ನಡ, ಮೈಸೂರು ಮೊದಲಾದ ಜಿಲ್ಲೆಗಳಿಂದ 800 ನೂರಕ್ಕೂ ಮಿಕ್ಕಿ ಅಂಗವಿಕಲರು ರೈಲ್ವೆ ನಿಲ್ದಾಣದಿಂದ ಆರಂಭವಾದ ಮೆರವಣಿಗೆಯಲ್ಲಿ ಪಾಲುಗೊಂಡರು. ಗಾಂಧಿನಗರದ ಮಹಾತ್ಮ ಗಾಂಧಿ ಪ್ರತಿಮೆಯ ಬಳಿ ಧರಣಿ ಸತ್ಯಾಗ್ರಹ ನಡೆಸಿದರು.

ಕರ್ನಾಟಕ ರಾಜ್ಯ ಅಂಗವಿಕಲರ

ಪುಟ 11ಕ್ಕೆ



JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH